ವೇದಾಂತಭಾರತೀ ಗ್ರಂಥಮಾಲಾ ಏಕಾದಶ ಪುಷ್ಪಮ್

# ದಿವ್ಯಜ್ಯೋತಿ ಶಂಕರ

ವಿದ್ವಾನ್ ಎನ್. ರಂಗನಾಥ ಶರ್ಮಾ



ವೇದಾಂತಭಾರತೀ
(ವೇದ-ವೇದಾಂತ ಅಧ್ಯಯನ ಮತ್ತು ಸಂಶೋಧನ ಸಂಸ್ಥೆ)
ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ - 571 602
ಮೈಸೂರು ಜಿಲ್ಲೆ, ದೂರವಾಣಿ : 0821 - 662471

**Divya Jyothi Shankara** - By Vidwan N. Ranganatha Sharma in Kannada, published by **Vedanta Bharati**, Chandramouli Road, K.R. Nagar, Pin - 571 602, Mysore Dist.

First Print - 2002

Copies : 5000

© *Vedanta Bharati*

Pages : 62 + x

Price : Rs. 15/-

Published by :

**Vedanta Bharati**

(Academy of Veda - Vedanta Studies and Research)

Chandra Mouli Road, Krishnaraja Nagar - 571 602,

Mysore District.

Phone 0821 / 662471

Printed at :

**Span Print**

Banashankari

Bangalore - 560 070

Phone : 6718831



## ॥ श्री शृङ्गेरी श्रीजगद्गुरूमहासंस्थानम् ॥

श्रीमत्परमहंसपरिव्राजकाचार्यवर्य पदवाक्यप्रमाणपारावारपारीण
यमनियमासनप्राणायामप्रत्याहारधारणाध्यानसमाध्यष्टाङ्गयोगानुष्ठाननिष्ठ
तपश्चक्रवर्त्यनाद्यविच्छिन्न श्रीशङ्कराचार्यगुरूपरम्पराप्राप्त षड्दर्शनस्थापनाचार्य
व्याख्यानसिंहासनाधीश्वर सकलनिगमागमसारहृदय सांख्यत्रयप्रतिपादक वैदिकमार्गप्रवर्तक
सर्वतन्त्रस्वतन्त्रादिराजधानी विद्यानगरमहाराजधानी कर्णाटकसिंहासनप्रतिष्ठापनाचार्य
श्रीमद्राजाधिराजगुरु भूमण्डलाचार्य ऋष्यशृङ्गपुरवराधीश्वर तुङ्गभद्रातीरवासि
श्रीमद्विद्याशङ्करपादपद्माराधक श्रीजगद्गुरु श्रीमदभिनवविद्यातीर्थस्वामिगुरुकरकमलसञ्जात

## ॥ श्री जगद्गुरु शृङ्गेरी श्रीमद्भारतीतीर्थमहास्वामिभिः ॥

ನಿಖಿಲಾಸ್ತಿಕ ಮಹಾಜನ ವಿಷಯೇ ನಾರಾಯಣ ಸ್ಮರಣಪೂರ್ವಕಂ ವಿರಚಿತಾ ಆಶಿಷಸ್ಸಮುಲ್ಲಸಂತು.

ನಮ್ಮ ಪವಿತ್ರ ಭಾರತದೇಶದಲ್ಲಿ ಅವತರಿಸಿದ ಮಹಾಪುರುಷರಲ್ಲಿ ಶ್ರೀಮಚ್ಛಂಕರ ಭಗವತ್ಪಾದರು ಸರ್ವಶ್ರೇಷ್ಠರು. ಸನಾತನ ಧರ್ಮೋದ್ಧಾರಕ್ಕಾಗಿ ಅವರು ಮಾಡಿರುವ ಪರಿಶ್ರಮವು ಅಸಾಧಾರಣವಾದುದು. ಕೇವಲ 32 ವರ್ಷಗಳಲ್ಲಿ ಅವರು ಮಾಡಿದ ಕೆಲಸವು ಅವರು ಶಿವಾವತಾರವೆಂದು ನಿರೂಪಿಸುತ್ತದೆ. ಅವರ ಪವಿತ್ರ ಚರಿತ್ರವನ್ನು ಪ್ರತಿಯೊಬ್ಬನೂ ಅವಶ್ಯವಾಗಿ ತಿಳಿಯಬೇಕು.

ಸಂಸ್ಕೃತದಲ್ಲಿ ಶಂಕರಚರಿತ್ರಪ್ರತಿಪಾದಕ ಗ್ರಂಥಗಳು ಹೇರಳವಾಗಿವೆ. ಅವುಗಳನ್ನು ನೋಡಿ ತಿಳಿಯುವದು ಸರ್ವರಿಗೂ ಸುಲಭಸಾಧ್ಯವಲ್ಲ. ಕನ್ನಡನಾಡಿನಲ್ಲಿ ಶಂಕರರ ಚರಿತ್ರೆಯನ್ನು ಪ್ರತಿಯೊಬ್ಬನೂ ಅರಿಯಬೇಕೆಂಬ ಸಂಕಲ್ಪದಿಂದ 'ವೇದಾಂತ ಭಾರತಿ' ಯು 'ದಿವ್ಯಜ್ಯೋತಿಶಂಕರ' ಎಂಬ ಗ್ರಂಥವನ್ನು ಪ್ರಕಟಪಡಿಸುತ್ತಿರುವದು ತುಂಬಾ ಶ್ಲಾಘನೀಯವಾಗಿದೆ.

ವಿದ್ವಾನ್ ಶ್ರೀರಂಗನಾಥಶರ್ಮರು ಬರೆದ ಈ ಗ್ರಂಥವು ಅತ್ಯಂತ ಲಲಿತವಾಗಿ ಶಂಕರರ ಚರಿತ್ರೆ, ಅವರ ಉಪದೇಶಗಳು, ಅವರ ವ್ಯಕ್ತಿತ್ವ, ಮಾನವ ಜನಾಂಗಕ್ಕೆ ಅವರ ಕೊಡುಗೆ ಮುಂತಾದುದನ್ನು ಪ್ರತಿಪಾದಿಸುತ್ತಿದೆ. ಪ್ರತಿಯೊಬ್ಬನೂ ಈ ಗ್ರಂಥವನ್ನು ಅವಶ್ಯವಾಗಿ ಪಠಿಸಿ ಶ್ರೇಯೋವಂತನಾಗಲೆಂದು ಆಶೀರ್ವದಿಸುತ್ತಿದ್ದೇವೆ.

ಇತಿ ನಾರಾಯಣ ಸ್ಮರಣಂ

ಶೃಂಗೇರಿ,
ಚಿತ್ರಭಾನು ಸಂವತ್ಸರ ಶ್ರಾವಣ ಕೃಷ್ಣ ದಶಮಿ,
ಸೋಮವಾರ 2.09.2002

ಓಂ

॥ ಶ್ರೀ ಚತುರ್ಭುಜಪಟ್ಟಾಭಿರಾಮೋವಿಜಯತೇ ॥

# ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಹಾಸಂಸ್ಥಾನಂ

ಚಂದ್ರಮೌಳಿ ರಸ್ತೆ, ಕೃಷ್ಣರಾಜನಗರ - 571602, ಮೈಸೂರು ಜಿಲ್ಲೆ

ಶಾಖಾಮಠ : ಕೋಟೆ, ಹೊಳೆನರಸೀಪುರ - 573 211, ಹಾಸನ ಜಿಲ್ಲೆ

ಅ.ನಂ.



ಮೊಕ್ಕಾಂ : ಕೃ.ರಾ.ನಗರ

ದಿನಾಂಕ 13-8-2002

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯವರ್ಯ ಪದವಾಕ್ಯ ಪ್ರಮಾಣ ಪಾರಾವಾರಪಾರೀಣ ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರ-ಧ್ಯಾನಧಾರಣ ಸಮಾಧ್ಯಷ್ಟಾಂಗ ಯೋಗಾನುಷ್ಠಾನ ನಿಷ್ಠಗರಿಷ್ಠತಪಶ್ಚಕ್ರವರ್ತ್ಯನಾದ್ಯ-ವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್‌ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲವೇದಾರ್ಥಪ್ರಕಾಶ ಸಾಂಖ್ಯತ್ರಯೀಪ್ರತಿಪಾಲಕ ಸಕಲನಿಗಮಾಗಮಸಾರಹೃದಯ ವೈದಿಕಮಾರ್ಗ ಪ್ರವರ್ತಕ ಸರ್ವತಂತ್ರಸ್ವತಂತ್ರಾದಿ ರಾಜಧಾನೀ ಶ್ರೀಮದ್‌ವಿದ್ಯಾನಗರಮಹಾರಾಜಧಾನೀ ಕರ್ನಾಟಕ ಸಿಂಹಾಸನ ಪ್ರತಿಷ್ಠಾಪನಾಚಾರ್ಯ ಶ್ರೀಮದ್‌ರಾಜಾಧಿರಾಜ ಗುರುಭೂಮಂಡಲಾಚಾರ್ಯ ಶ್ರೀಮಚ್ಛಂಕರಾಚಾರ್ಯಶಿಷ್ಯಪರಂಪರಾಪ್ರಾಪ್ತ ಕಾವೇರೀ ಹೇಮಾವತೀ ತೀರವಾಸ ಶ್ರೀನರಸಿಂಹಪುರವರಾಧೀಶ್ವರ ಶ್ರೀ ಶ್ರೀ ಚತುರ್ಭುಜಪಟ್ಟಾಭಿರಾಮಸ್ವಾಮಿ, ಶ್ರೀಶ್ರೀ ನೀಲಕಂಠೇಶ್ವರ ಸ್ವಾಮಿ (ಕೃಷ್ಣರಾಜನಗರ) ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠ ಪೀಠಾಧೀಶ್ವರ **ಶ್ರೀಶ್ರೀ ರಾಮಬ್ರಹ್ಮಾನಂದ ಸರಸ್ವತೀ ಸ್ವಾಮಿನಾಂ ದಿವ್ಯಪಾದಪದ್ಮಾರಾಧಕ ಜಗದ್ಗುರು ಶ್ರೀಶ್ರೀಶ್ರೀ ಗಣಪತೀಭಾರತೀ ಸ್ವಾಮಿನಾಂ ಶಿಷ್ಯೈಃ ಶ್ರೀಶ್ರೀಶ್ರೀ ಶಂಕರಭಾರತೀ ಸ್ವಾಮಿಭಿಃ** ನಾರಾಯಣಸ್ಮರಣಪೂರ್ವಕ ವಿರಚಿತಾಶೀಃ ಪರಂಪರಾಸ್ಸಮುಲ್ಲಸತುತರಾಮ್.

ಪ್ರತಿ ವ್ಯಕ್ತಿಯೂ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಅನುಕೂಲವಾಗುವಂತೆ ಅವನಿಗೆ ಬಾಲ್ಯದಲ್ಲೇ ಸಂಸ್ಕಾರವನ್ನು ಕೊಡಬೇಕೆಂಬುದನ್ನು ಸಮಸ್ತರೂ ತಿಳಿದಿದ್ದಾರೆ. ಪವಿತ್ರವಾದ ನಮ್ಮ ದೇಶದಲ್ಲಿ ಈ ಪರಂಪರೆಯು ಬಹಳ ಹಿಂದಿನಿಂದಲೂ ಬರುತ್ತಿದೆ. ಆದರೆ ಬರಬರುತ್ತಾ ಈ ವ್ಯವಸ್ಥೆಯು ಶಿಥಿಲವಾಗುತ್ತಿದೆ. ಇಂತಹ ಸಂದರ್ಭದಲ್ಲಿ ವೇದಾಂತ ಭಾರತಿಯು ಮಕ್ಕಳಿಗೆ ಸಾಂಪ್ರದಾಯಿಕವಾದ ನಮ್ಮ ಆರ್ಷೇಯ

ವಿಷಯಗಳನ್ನು ತಿಳಿಸಲು ಹೊರಟಿರುವುದು ಅತ್ಯಂತ ಔಚಿತ್ಯಪೂರ್ಣವಾಗಿದೆ ಎಂದು ನಾವು ಭಾವಿಸುತ್ತೇವೆ.

ಬಾಲ್ಯದಲ್ಲೇ ಸಮಸ್ತ ವಿದ್ಯೆಗಳನ್ನು ಅಭ್ಯಾಸ ಮಾಡಿ ಕೇವಲ 32 ವರ್ಷಗಳಲ್ಲಿ ಆಸೇತು ಹಿಮಾಚಲ ಸಂಚರಿಸಿ ಎಲ್ಲರಿಗೂ ಶ್ರೇಯೋಮಾರ್ಗವನ್ನು ತೋರಿಸಿ, ಮತ್ತು ಅಮೋಘವಾದ **ಭಾಷ್ಯ** ಮೊದಲಾದ ಗ್ರಂಥಗಳನ್ನು ರಚಿಸಿ ತನ್ಮೂಲಕ **ಜ್ಯೋತಿಷಾಂ ಜ್ಯೋತಿಃ** ಅಂತ ಉಪನಿಷತ್ ತಿಳಿಸುತ್ತಿರುವ ಪರಂಜ್ಯೋತಿ ಸ್ವರೂಪವನ್ನು ಸ್ಪಷ್ಟಪಡಿಸಿ, ಜ್ಯೋತಿ ಸ್ವರೂಪರುಗಳಾದ ನಮ್ಮೆಲ್ಲರನ್ನೂ ಜಾಗೃತಗೊಳಿಸಿದ ಶ್ರೀಶಂಕರರು **ದಿವ್ಯಜ್ಯೋತಿ**ಯಾಗಿದ್ದಾರೆ. ಹೀಗೆ ಇಡೀ ಮನುಕುಲಕ್ಕೆ ಶ್ರೇಯಸ್ಸಿನ ಮಾರ್ಗ ತೋರಿದ ಶ್ರೀ ಶಂಕರರು ಅದರ ರಕ್ಷಣೆ ಮತ್ತು ವರ್ಧನೆಗಾಗಿ ಮಠಗಳನ್ನು ಸ್ಥಾಪಿಸಿ, ಸರ್ವಮತ ಸಮನ್ವಯವನ್ನು ಮಾಡಿ ಇತರ ಮತಗಳಲ್ಲಿರುವ ಶಾಸ್ತ್ರಸಮ್ಮತವಾದ ವಿಷಯಗಳನ್ನು ಸ್ವೀಕರಿಸಿ, ರಾಷ್ಟ್ರೈಕ್ಯವನ್ನು ಸಾಧಿಸಿದರು.

ಈ ರೀತಿಯಾಗಿ ಜಗತ್ತಿನಲ್ಲೇ ಅದ್ವಿತೀಯ ಸ್ಥಾನವನ್ನು ಪಡೆದಿರುವ ಶ್ರೀ ಶಂಕರ ಭಗವತ್ಪಾದರ ಕಾರ್ಯ ಮತ್ತು ಜೀವನವನ್ನು ಮಕ್ಕಳಿಗೆ ತಿಳಿಸುವುದಕ್ಕಾಗಿ **ದಿವ್ಯಜ್ಯೋತಿ ಶಂಕರ** ಎಂಬ ಪುಸ್ತಕವನ್ನು ವೇದಾಂತಭಾರತೀ ಹೊರತರುತ್ತಿರುವುದು ನಮಗೆ ಅತ್ಯಂತ ಹರ್ಷವನ್ನು ತಂದಿದೆ. ನಾಡಿನ ಖ್ಯಾತ ವಿದ್ವಾಂಸರಾದ, ಅನೇಕ ಶಾಸ್ತ್ರಗಳಲ್ಲಿ ತಲಸ್ಪರ್ಶಿ ಜ್ಞಾನವುಳ್ಳ ಉತ್ತಮ ಲೇಖಕರೂ, ಅಸ್ಮದತ್ಯಂತ ಪ್ರಿಯರೂ ಆದ **ವಿದ್ವಾನ್ ಶ್ರೀ ಎನ್. ರಂಗನಾಥ ಶರ್ಮರು** ಈ ಗ್ರಂಥದ ಸಂಪಾದನೆ ಮಾಡಿರುವುದು ಇನ್ನೂ ಹೆಚ್ಚುಗಾರಿಕೆಯ ವಿಷಯವಾಗಿದೆ.

ಈ ಗ್ರಂಥವು ಬಾಲಕರೆಲ್ಲರ ಕೈಸೇರಿ ಸರ್ವರೂ ಶ್ರೇಯಸ್ಸನ್ನು ಪಡೆಯುವಂತಾಗಲಿ, ಗ್ರಂಥಕರ್ತರಿಗೂ, ಪ್ರಕಾಶಪಡಿಸುತ್ತಿರುವ ಸಮಸ್ತರಿಗೂ ನಮ್ಮ ಆರಾಧ್ಯಮೂರ್ತಿಯು ಪರಿಪೂರ್ಣಾನುಗ್ರಹವನ್ನೀಯಲಿ ಎಂಬುದಾಗಿ ಪ್ರಾರ್ಥಿಸುತ್ತೇವೆ.

ಚಿತ್ರಭಾನು ಸಂ||ದ
ಶ್ರಾವಣ ಶುಕ್ಲ ಪಂಚಮೀ
ಭೌಮ ವಾಸರಃ

ನಾರಾಯಣ ಸ್ಮರಣೆಗಳು

# ಪ್ರಕಾಶಕರ ಮಾತು

ನಮ್ಮೀ ಪುಣ್ಯಭೂಮಿ ಭಾರತ ಕರ್ಮಭೂಮಿ ಮಾತ್ರವಲ್ಲ ಜ್ಞಾನಭೂಮಿಯೂ ಹೌದು. ವಿಶ್ವದ ಅಜ್ಞಾನವನ್ನು ಕಳೆಯಬಲ್ಲ ಉಪನಿಷದ್‌ಜ್ಯೋತಿಯು ದರ್ಶನವನ್ನಿತ್ತದ್ದು ಈ ಭೂಮಿಯ ಋಷಿವರೇಣ್ಯರಿಗೆ. ಕಾಲಮಹಿಮೆಯಿಂದ ಆ ಜ್ಯೋತಿಯ ಪ್ರಭೆ ಕ್ಷೀಣಿಸಿತೇನೊ ಎಂದೆನಿಸಿದಾಗಲೆಲ್ಲ ಅನೇಕ ಮಹಾಮಹಿಮರು ಕಾಲಕಾಲಕ್ಕೆ ಈ ಭೂಮಿಯಲ್ಲಿ ಅವತರಿಸಿ ಆ ಜ್ಯೋತಿಗೆ ತೈಲಧಾರೆಯನ್ನೆರೆದು ಮತ್ತಷ್ಟು ಉಜ್ಜ್ವಲವನ್ನಾಗಿ ಮಾಡಿದ್ದಾರೆ. ಅಂಥ ಮಹಾನುಭಾವರ ಪಂಕ್ತಿಯಲ್ಲಿ ತಮ್ಮದೇ ಆದ ವೈಶಿಷ್ಟ್ಯದಿಂದ ಇಂದಿಗೂ ಮಿನುಗುತ್ತಿರುವವರು **ಶ್ರೀ ಶಂಕರಭಗವತ್ಪಾದರು**. ಎಲ್ಲ ಅನರ್ಥ ಪರಂಪರೆಗಳಿಗೂ ಅಜ್ಞಾನವೊಂದೇ ಅದರಲ್ಲಿಯೂ ತನ್ನ (ಆತ್ಮನ) ಅಜ್ಞಾನವೇ ಕಾರಣವೆಂದು ಘೋಷಿಸಿದರು. ತನ್ನನ್ನೇ ಸರಿಯಾಗಿ ಅರಿಯದ ವ್ಯಕ್ತಿ ಪ್ರಪಂಚವನ್ನು ಹೇಗೆ ಅರಿತಾನು ? ಅದರ ಸದುಪಯೋಗವನ್ನು ಹೇಗೆ ಪಡೆದಾನು? ಉಪನಿಷತ್ತುಗಳಲ್ಲಿ ವಿವರಿಸಿದ **ಆತ್ಮಸ್ವರೂಪ**ವನ್ನರಿಯಬೇಕು, ಅಜ್ಞಾನವನ್ನು ನಾಶಪಡಿಸಿಕೊಳ್ಳಬೇಕು. ಆಗ ಇಲ್ಲಿಯೇ ಪರಮಾನಂದವನ್ನು ಅನುಭವಿಸಲು ಸಾಧ್ಯ ಎಂಬುದನ್ನು ಮನ ಮುಟ್ಟುವಂತೆ ಬೋಧಿಸಿದರು. ಎಲ್ಲರ ಆತ್ಮವೂ **ಸಚ್ಚಿದಾನಂದ ಸ್ವರೂಪಿ** ಎಂಬ ಪರಮ ಸತ್ಯವನ್ನು ತಾವೂ ಅನುಭವಿಸಿ ಲೋಕಕ್ಕೂ ಉಪದೇಶಿಸಿದರು. ಅಂದು ಅವರು ನೀಡಿದ ಆ **ಜ್ಞಾನಜ್ಯೋತಿ** ಯಾವುದೆ ಭೌತಿಕ ಅಡೆತಡೆಗಳಿಗೆ ಜಗ್ಗದೆ ಕುಗ್ಗದೆ ಇಂದಿಗೂ ಸಹ ಪ್ರಕಾಶಮಾನವಾಗಿ ಬೆಳಗುತ್ತಿದೆ. ಆದುದರಿಂದಲೆ ಅದು **ದಿವ್ಯಜ್ಯೋತಿ,** ಅದನ್ನು ನೀಡಿದ ಶಂಕರರೂ ದಿವ್ಯಜ್ಯೋತಿಸ್ವರೂಪರು.

ಇಂಥ ಮಹಾಮಹಿಮರ ಪರಿಚಯ ನಮ್ಮ ನಾಡಿನ ಎಳೆಯ ಮಕ್ಕಳಿಗೆ ಅವಶ್ಯವಾಗಿ ಇರಬೇಕೆಂಬುದು ವೇದಾಂತ ಭಾರತಿಯ ಆಶಯ. ಇದರ ಹಿಂದಿನ ಉದ್ದೇಶಗಳು ಎರಡು. ಒಂದು - ಕೇರಳದ ಸಾಮಾನ್ಯ ಕುಟುಂಬವೊಂದರಲ್ಲಿ ಹುಟ್ಟಿದ ವ್ಯಕ್ತಿಯೊಬ್ಬ ತನ್ನ ಅದಮ್ಯ ಉತ್ಸಾಹ, ಅಚಲವಾದ ಜ್ಞಾನೇಚ್ಛೆ ಹಾಗೂ ಲೋಕದ ದುಃಖವನ್ನು ದೂರಮಾಡಬೇಕೆಂಬ ದೃಢಸಂಕಲ್ಪದಿಂದ ಏಕಾಂಗಿಯಾಗಿಯೇ ಹೊರಟು ತನ್ನ ಅಲ್ಪವಯಸ್ಸಿನಲ್ಲಿಯೇ ಏನೆಲ್ಲ ಸಾಧನೆ ಮಾಡಿದ ಎಂಬುದು ಬಾಲಕರಿಗೆ ತಿಳಿಯಬೇಕು. ಇದರಿಂದ ನಮ್ಮ ಬಾಲಕರು ಪ್ರೇರಣೆಯನ್ನು ಪಡೆದು ಆತ್ಮವಿಶ್ವಾಸವನ್ನು ಹೆಚ್ಚಿಸಿಕೊಳ್ಳಬೇಕು. ಎರಡನೆಯದು - ಆಚಾರ್ಯರು ಬೋಧಿಸಿದ ತತ್ತ್ವದ ಸಾಮಾನ್ಯ ಪರಿಚಯ ಮಾಡಿಕೊಡುವುದರ ಮೂಲಕ ಸರ್ವತ್ರ ಸಮದೃಷ್ಟಿಯನ್ನಿಡುವುದರತ್ತ ಹೆಜ್ಜೆ ಹಾಕುವಂತಹ ವೇದಿಕೆಯನ್ನು ನಿರ್ಮಿಸುವುದು.

ಶಾಂಕರಸಿದ್ಧಾಂತವು ಎಲ್ಲ ಜನರಿಗೂ ತಲುಪಬೇಕೆಂಬುದನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡ **'ವೇದಾಂತ ಭಾರತಿ'**ಯು ***'ಮಕ್ಕಳಿಗಾಗಿ ಶಂಕರ'*** ಎಂಬ ದೃಷ್ಟಿಯಿಂದ ಈ ಗ್ರಂಥವನ್ನು ಹೊರತರುತ್ತಿದೆ. ಸಂಸ್ಥೆಯು ಎಳೆಯರಿಗಾಗಿ ನಡೆಸುವ **ವಿವೇಕೋತ್ಕರ್ಷಣಿ** ಪರೀಕ್ಷೆಯ ಪಾಠ್ಯಕ್ಕಾಗಿ ಈ ಗ್ರಂಥವನ್ನು ಸಿದ್ಧಪಡಿಸಲಾಗಿದೆ. ಇಂಥ ಗ್ರಂಥವೊಂದನ್ನು

ರಚಿಸಿಕೊಡುವಂತೆ ವೇದಾಂತಭಾರತಿ ಸಂಸ್ಥೆಯು ನಮ್ಮ ನಾಡಿನ ಶ್ರೇಷ್ಠ ವಿದ್ವಾಂಸರಾದ **ಶ್ರೀಯುತ ವಿದ್ವಾನ್ ಎನ್. ರಂಗನಾಥ ಶರ್ಮಾ**ರವರಲ್ಲಿ ಕೇಳಿಕೊಂಡಾಗ ಅವರು ಸಂತೋಷದಿಂದ ಒಪ್ಪಿಕೊಂಡರು. ಸಂಸ್ಕೃತ ಕನ್ನಡ ಭಾಷೆಗಳಲ್ಲಿ, ವ್ಯಾಕರಣಾದಿ ಶಾಸ್ತ್ರಗಳಲ್ಲಿ ತಲಸ್ಪರ್ಶಿ ಪಾಂಡಿತ್ಯವುಳ್ಳ ಶ್ರೀ ಶರ್ಮರು ತಮ್ಮ ಈ ಇಳಿ ವಯಸ್ಸಿನಲ್ಲಿ ವಾರ್ಧಕ್ಯ ಅನಾರೋಗ್ಯಗಳಾವುದನ್ನೂ ಲೆಕ್ಕಿಸದೆ ಈ ಗ್ರಂಥವನ್ನು ರಚಿಸುವ ಶ್ರಮವನ್ನು ತೆಗೆದುಕೊಂಡಿದ್ದಾರೆ. ಸಂಸ್ಥೆಯು ಅವರಿಗೆ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತದೆ.

ಸರಳ - ಸುಂದರ ಶೈಲಿಯಲ್ಲಿ ಭಕ್ತಿರಸಪೂರ್ಣವಾದ ದೇವತಾ ಸ್ತೋತ್ರಗಳನ್ನು ಆಚಾರ್ಯ ಶಂಕರರು ರಚಿಸಿದ್ದಾರೆ. ಅಂತಹ ಕೆಲವು ಚೇತೋಹಾರಿ ಗೀತಗಳಲ್ಲಿ ಒಂದಾದ **ವಿಷ್ಣುಷಟ್ಪದೀ ಸ್ತೋತ್ರ**ವನ್ನು ಹಾಗು **ಮೋಹಮುದ್ಗರ**ದ ಆಯ್ದ ಐದು ಪದ್ಯಗಳನ್ನು ಭಾವಾನುವಾದದೊಂದಿಗೆ ಈ ಗ್ರಂಥದ ಕೊನೆಯಲ್ಲಿ ಸೇರಿಸಲಾಗಿದೆ.

ವೇದಾಂತ ಭಾರತಿಯ ಮಹಾಸಂರಕ್ಷಕರಾದ **ಪರಮ ಪೂಜ್ಯ ಶ್ರೀಮಜ್ಜಗದ್ಗುರು ಶ್ರೀ ಶ್ರೀ ಶ್ರೀ ಭಾರತಿ ತೀರ್ಥ ಮಹಾಸ್ವಾಮಿಗಳು, ದಕ್ಷಿಣಾಮ್ನಾಯ ಶ್ರೀ ಶಾರದಾಪೀಠ ಶೃಂಗೇರಿ** ಇವರು ಈ ಗ್ರಂಥಕ್ಕೆ ತಮ್ಮ ದಿವ್ಯ ಶ್ರೀಮುಖವನ್ನಿತ್ತು ಗ್ರಂಥದ ಮಹತ್ತ್ವವನ್ನು ಹೆಚ್ಚಿಸಿದ್ದಾರೆ. ಅವರಿಗೆ ನಮ್ಮ ಅನಂತಾನಂತ ಪ್ರಣಾಮಗಳು. ಈ ಸಂಸ್ಥೆಗೆ ಮೂಲಾಧಾರವಾಗಿ ನಿಂತು ಸದಾ ಪ್ರೇರಣೆ, ಪ್ರೋತ್ಸಾಹ, ಮಾರ್ಗದರ್ಶನ ನೀಡುತ್ತಿರುವವರು ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಅಧಿಪತಿಗಳಾದ **ಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳು.** ಪೂಜ್ಯರಿಗೆ ನಮ್ಮ ಕೃತಜ್ಞತಾಪೂರ್ವಕ ವಂದನೆಗಳು.

ಈ ಗ್ರಂಥದ ಕೊನೆಯಲ್ಲಿ ಸೇರಿಸಲಾದ ಸ್ತೋತ್ರಭಾಗದ ಭಾವಾನುವಾದವನ್ನು ಮಾಡಿ ಸಹಕರಿಸಿದ **ವಿದ್ವಾನ್ ಶ್ರೀ ಅನಂತಶರ್ಮಾ ಭುವನಗಿರಿ**ಯವರಿಗೂ ಹಾಗು **ವಿದ್ವಾನ್ ಗಣೇಶ ಭಟ್ಟ ಹೋಬಳಿ**ಯವರಿಗೂ ಕೃತಜ್ಞತಾಪೂರ್ವಕ ವಂದನೆಗಳು.

ಈ ಗ್ರಂಥವನ್ನು ಪ್ರಕಾಶಪಡಿಸುವಲ್ಲಿ ಅಕ್ಷರವಿನ್ಯಾಸದ ಪರಿಶೋಧನೆಯಲ್ಲಿ ಸಹಕರಿಸಿದ **ವಿದ್ವಾನ್ ಶ್ರೀ ಜಿ. ಮಹಾಬಲೇಶ್ವರ ಭಟ್ಟ**ರವರಿಗೂ ಹಾಗೂ **ಶ್ರೀ ಹೆಚ್.ಎನ್. ನರಸಿಂಹಯ್ಯ**ರವರಿಗೂ ಹೃತ್ಪೂರ್ವಕ ಧನ್ಯವಾದಗಳು.

ಈ ಗ್ರಂಥವನ್ನು ಸುಂದರವಾಗಿ ಮುದ್ರಿಸಿಕೊಟ್ಟ ಸ್ಕ್ಯಾನ್‌ಪ್ರಿಂಟ್‌ನ ಮಾಲಿಕರಾದ **ಶ್ರೀ ನಾರಾಯಣ**ರವರಿಗೂ ಅನಂತ ಧನ್ಯವಾದಗಳು.

ಚಿತ್ರಭಾನು ಸಂ॥ದ
ಶ್ರಾವಣ ಕೃಷ್ಣ ತೃತೀಯಾ
ಇಂದುವಾಸರಃ
26.8.2002

ನಿರ್ದೇಶಕರು
**ಡಾ॥ ಶ್ರೀಧರ ಭಟ್ಟ ಐನಕೈ**
ವೇದಾಂತ ಭಾರತೀ

# ನಿವೇದನೆ

ನಮ್ಮ ಪ್ರಾಚೀನ ಋಷಿಗಳಿಂದ ಪರಿಪುಷ್ಟವಾದ ವೈದಿಕಸಂಸ್ಕೃತಿಯು ಕಾಲಮಹಿಮೆಯಿಂದ ಅವನತಿಗಿಳಿದು ಮರೆಯಾಗುವ ಪ್ರಸಂಗ ಬಂದಾಗ, **ಶ್ರೀ ಶಂಕರಭಗವತ್ಪಾದರು** ಅವತರಿಸಿ, ಅದನ್ನು ಮೇಲೆತ್ತಿ ಉನ್ನತ ಸ್ಥಾನದಲ್ಲಿ ನಿಲ್ಲಿಸಿದರು. ಪುಣ್ಯಭೂಮಿಯಾದ ಈ ರಾಷ್ಟ್ರದ ಕೀರ್ತಿಯನ್ನು ಉಳಿಸಲು ಅವರು ಸಲ್ಲಿಸಿದ ಸೇವೆ ಅಮೂಲ್ಯವಾದದ್ದು. ಅಭೂತಪೂರ್ವವಾದದ್ದು. ಕಾಲಚಕ್ರವು ಇನ್ನೊಂದು ಸುತ್ತು ಉರುಳಿತು. ಆಚಾರ್ಯರ ಉಪದೇಶ, ಸಂದೇಶಗಳು ಹಿಮ್ಮೆಟ್ಟಿ ಆ ಮಹಾತ್ಮರನ್ನೇ ಜನರು ಮರೆತುಬಿಡುವರೋ ಎಂಬ ಪರಿಸ್ಥಿತಿ ಮತ್ತೆ ಉಂಟಾಯಿತು. ದೂರದೃಷ್ಟಿಯಿದ್ದ ಶ್ರೀ **ಶಂಕರಭಗವತ್ಪಾದರು** ಇಂತಹ ಪರಿಸ್ಥಿತಿಯನ್ನೇ ಊಹಿಸಿ, ವೈದಿಕ ಧರ್ಮದ ರಕ್ಷಣೆಗಾಗಿ ಅದ್ವೈತ ಮಠಗಳನ್ನು ಸ್ಥಾಪಿಸಿ ಈ ಮಠಗಳ ಕರ್ತವ್ಯವೇನೆಂಬುದನ್ನು ವ್ಯವಸ್ಥೆ-ಗೊಳಿಸಿದ್ದರು.

ಅಂತೆಯೇ ಕಾರ್ಯಪ್ರವೃತ್ತರಾದ ಯಡತೊರೆ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ **ಪೂಜ್ಯ ಶ್ರೀ ಶ್ರೀ ಶಂಕರಭಾರತೀ ಮಹಾ ಸ್ವಾಮಿಗಳು** **'ಶ್ರೀ ಶಂಕರ ಸಪ್ತಾಹ'** ಮುಂತಾದ ನಾನಾ ಕಾರ್ಯಕ್ರಮಗಳನ್ನೇರ್ಪಡಿಸಿ ವೈದಿಕಧರ್ಮದ ಪ್ರಸಾರವನ್ನು ಉತ್ಸಾಹದಿಂದ ಮಾಡುತ್ತಿದ್ದಾರೆ. ಅವರ ಆದೇಶದಂತೆ ನಾನು ಬರೆದ 'ಯುಗಪುರುಷ-ಶಂಕರ ' ಎಂಬ ಪುಸ್ತಕದ ಕಡೆಯಲ್ಲಿ ಈ ಶ್ಲೋಕವನ್ನು ಬರೆದು ಸೇರಿಸಿದ್ದೇನೆ.

**ಸದ್ಗುರು ಸೇವಾಭಾರೋ ದ್ವೇಧಾ ತ್ರೇಧಾ ಚತುರ್ಧಾ ವಾ ।**
**ಪತತು ಮದೀಯೇ ಶಿರಸಿ ಪ್ರತ್ನಂ ಮನ್ಯೇಽಥ ಬೃಂಹಿತಂ ಭಾಗ್ಯಮ್ ॥**

ಬೃಂಹಿತವಾದ ಈ ಭಾಗ್ಯದಿಂದಲೇ ಪೂಜ್ಯ ಶ್ರೀ ಸ್ವಾಮೀಜಿಯವರ ಆಜ್ಞೆಯಂತೆ ಈ **ದಿವ್ಯಜ್ಯೋತಿಶಂಕರ** ಎಂಬ ಗ್ರಂಥವನ್ನು ರಚಿಸಬೇಕಾಯಿತು.

ಶ್ರೀ ಮಾಧವೀಯ ಶಂಕರದಿಗ್ವಿಜಯದ ಕನ್ನಡ ಅನುವಾದ, ಶ್ರೀ ಶಂಕರಚರಿತಾಮೃತಮ್, ಯುಗಪುರುಷ-ಶಂಕರ, ಶ್ರೀ ಶಂಕರ ಸೂಕ್ತಿ ಮಣಿಹಾರ (ಶ್ರೀ ಶಂಕರ

ಸೂಕ್ತಿ ಮುಕ್ತಾವಲಿ) - ಎಂಬ ನಾಲ್ಕು ಪುಷ್ಪಗಳನ್ನು ಶ್ರೀ ಶಂಕರಭಗವತ್ಪಾದರ ಪವಿತ್ರಚರಣಗಳ ಬಳಿ ಇರಿಸಿದ್ದೇನೆ. ಈಗ ಈ ಐದನೆಯ ಪುಷ್ಪವನ್ನು ಅರ್ಪಿಸುವ ಭಾಗ್ಯ ಒದಗಿತು.

ಶಾಲಾ ಕಾಲೇಜುಗಳಲ್ಲಿ ಓದುವ ಯುವಕ - ಯುವತಿಯರಿಗಾಗಿ ಬರೆದ ಗ್ರಂಥವಿದು. ಅವರಲ್ಲಿ ಬಹಳ ವಿದ್ಯಾರ್ಥಿಗಳು ಶ್ರೀ ಶಂಕರರ ಹೆಸರನ್ನೇ ಕೇಳಿಲ್ಲದಿರಬಹುದು. ಅವರಿಗೆ ಶ್ರೀಶಂಕರಾಚಾರ್ಯರ ಜೀವನಚರಿತೆ, ಅವರ ಸಿದ್ಧಿಸಾಧನಗಳು, ನಮ್ಮ ರಾಷ್ಟ್ರಕ್ಕೆ ಅವರಿಂದಾದ ಉಪಕಾರಗಳು ಇಷ್ಟಾದರೂ ತಿಳಿದಿರಲೆಂಬುದು ಈ ಪುಸ್ತಕದ ಉದ್ದೇಶವಾಗಿದೆ. ವೇದಾಂತವನ್ನು ವಿವರಿಸುವ ತೊಡಕಿಗೆ ಇಲ್ಲಿ ಪ್ರಯತ್ನಿಸಿಲ್ಲ.

ಶ್ರೀ ಶೃಂಗೇರಿ ಜಗದ್ಗುರು ಪೀಠದಲ್ಲಿ ವಿರಾಜಮಾನರಾದ ಪರಮಪೂಜ್ಯ **ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು** ಈ ನನ್ನ ಒಂದು ಸಾಧಾರಣ ಪ್ರಯತ್ನವನ್ನು ತಮ್ಮ ದಿವ್ಯ ಸಂದೇಶದಿಂದ ಹರಸಿ ಆಶೀರ್ವದಿಸಿದ್ದಾರೆ. ಅವರಿಗೆ ಭಕ್ತಿಪೂರ್ವಕವಾಗಿ ನನ್ನ ಸಾಷ್ಟಾಂಗ ನಮಸ್ಕಾರಗಳನ್ನು ಅರ್ಪಿಸುತ್ತೇನೆ.

ನನ್ನಲ್ಲಿ ವಿಶ್ವಾಸವಿಟ್ಟು ಈ ಪುಸ್ತಕವನ್ನು ಬರೆದು ಕೊಡುವಂತೆ ಆದೇಶಿಸಿದ ಪೂಜ್ಯ **ಶ್ರೀ ಶ್ರೀ ಶಂಕರ ಭಾರತೀ ಮಹಾಸ್ವಾಮಿಗಳು** ನನ್ನನ್ನು ಧನ್ಯನನ್ನಾಗಿ ಮಾಡಿ ಅನುಗ್ರಹಿಸಿದ್ದಾರೆ. ಅವರಿಗೆ ಈ ಕಾಣಿಕೆಯನ್ನು ಭಕ್ತಿಯಿಂದ ಅರ್ಪಿಸಿದ್ದೇನೆ.

ಬೆಂಗಳೂರು **ವಿದ್ವಾನ್ ಎನ್. ರಂಗನಾಥ ಶರ್ಮಾ**

18-6-2002

# ಶ್ರೀಃ

ಶ್ರೀ ಶಂಕರಾಚಾರ್ಯರು ಜನಿಸಿದಾಗ ಈ ಭರತ ಖಂಡವು ಒಂದೇ ರಾಷ್ಟ್ರವಾಗಿ ಉಳಿಯದೆ, ಒಡೆದು ಅನೇಕರಾಜ್ಯಗಳು ಹುಟ್ಟಿಕೊಂಡಿದ್ದವು. ಅವುಗಳ ರಾಜರಲ್ಲಿಯೂ ಐಕಮತ್ಯವಿಲ್ಲದೆ ಜಗಳವಾಡುತ್ತಿದ್ದರು. ಈ ನಡುವೆ ಶಾಕ್ತ, ಸೌರ, ಗಾಣಪತ, ಭೈರವ - ಮುಂತಾದ ನಾನಾಮತಗಳು ಬೆಳೆದಿದ್ದವು. ಆ ಮತದವರ ಆಚರಣೆಗಳು ಬೇರೆಬೇರೆಯಾಗಿದ್ದು, ತಾವು ಪೂಜಿಸುವ ದೇವರೇ ಶ್ರೇಷ್ಠನೆಂದೂ ತಮ್ಮ ಮತವೇ ಉತ್ತಮವೆಂದೂ ವಾದಿಸುತ್ತಿದ್ದರು. ಅಂತೆಯೇ ಬೌದ್ಧ, ಜೈನ ಎಂಬ ಎರಡು ಪ್ರಬಲವಾದ ಮತಗಳೂ ಈ ರಾಷ್ಟ್ರದಲ್ಲಿ ರಾಜಾಶ್ರಯವನ್ನು ಪಡೆದು ಬೆಳೆದಿದ್ದವು. ಈ ರಾಷ್ಟ್ರದಲ್ಲಿ ಮೊದಲಿನಿಂದ ನೆಲೆಸಿದ್ದ ವೇದೋಕ್ತವಾದ ಸನಾತನಮತವು ಈ ಕಾರಣಗಳಿಂದ ಹಿಂದಕ್ಕೆ ಸರಿದಿತ್ತು. ಈ ವೈದಿಕ ಮತಕ್ಕೆ ಉತ್ಥಿತಿಯೇ ಇಲ್ಲವೇನೋ ಎಂಬ ಪರಿಸ್ಥಿತಿ ಒದಗಿತ್ತು. ಭಾರತೀಯರಾದ ನಮಗೆ ವೇದವು ಪವಿತ್ರಗ್ರಂಥ.

ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವಣವೇದ ಎಂದು ವೇದವು ನಾಲ್ಕುವಿಧ. ವೇದಗಳು ಬಹುವಿಸ್ತಾರವಾಗಿವೆ. ಇವನ್ನು ಬರೆದಿಡುವ ಪದ್ಧತಿ ಇರಲಿಲ್ಲ. ಗುರುವಿನಿಂದ ಶಿಷ್ಯರು ಹೇಳಿಸಿಕೊಂಡು ಕಂಠಪಾಠ ಮಾಡುತ್ತಿದ್ದರು. ಗುರುಮುಖದಿಂದ ಹೇಳಲ್ಪಡುವ ವೇದವನ್ನು ಶ್ರವಣ ಮಾಡಿಯೇ ಕಲಿಯುತ್ತಿದ್ದುದರಿಂದ ವೇದಕ್ಕೆ ಶ್ರುತಿ ಎಂಬ ಇನ್ನೊಂದು ಹೆಸರಿದೆ. ಶ್ರುತಿಯೆಂದರೆ ಶ್ರುತವಾದದ್ದು (ಕೇಳಲ್ಪಟ್ಟದ್ದು) ಎಂದರ್ಥ. ಶ್ರುತಿಗಳು ಅಪಾರವಾಗಿದ್ದು, ಅವು ತಿಳಿಸಿಕೊಡುವ ವಿಷಯಗಳೂ ಅಪಾರವಾಗಿವೆ. ಆದರೆ ಅವುಗಳಲ್ಲಿ ಪರಸ್ಪರ ವಿರೋಧವಿಲ್ಲ. ಇವನ್ನು ಯಾರು ರಚಿಸಿದರೆಂಬುದು ಯಾರಿಗೂ ಗೊತ್ತಿಲ್ಲ. ಪುರುಷರು - ಎಂದರೆ ಮನುಷ್ಯರು - ರಚಿಸಿದ್ದಲ್ಲವಾದ್ದರಿಂದ ವೇದವನ್ನು ಅಪೌರುಷೇಯವೆನ್ನುತ್ತಾರೆ. ಈಶ್ವರನೇ ಈ ಮಂತ್ರಗಳನ್ನು ವಸಿಷ್ಠ, ವಾಮದೇವ - ಮೊದಲಾದ ಪ್ರಾಚೀನ ಋಷಿಗಳಿಗೆ ತಿಳಿಸಿಕೊಟ್ಟನೆಂದು ಭಾರತೀಯರ ನಂಬಿಕೆ. ವೇದದಲ್ಲಿ ಇಂದ್ರ, ಅಗ್ನಿ, ವರುಣ - ಮೊದಲಾದ ಅನೇಕದೇವತೆಗಳ ಸ್ತುತಿಗಳಿದ್ದರೂ, ಆ ದೇವತೆಗಳು ಪರಮಾತ್ಮನ ಬೇರೆ ಬೇರೆ ರೂಪಗಳೆಂದು ತಿಳಿಯಬೇಕು. ಆದ್ದರಿಂದ ವೈದಿಕಮತವು ಏಕೇಶ್ವರವಾದವನ್ನು ಪುರಸ್ಕರಿಸುತ್ತದೆ.

ದೇವರು ಒಬ್ಬನೇ. ನಾಮಗಳು ಹಲವು. ಇಂತಹ ಸನಾತನ ವೈದಿಕಮತವು ಕ್ಷೀಣಿಸಲು ತೊಡಗಿದಾಗ ಶ್ರೀಶಂಕರರು ಜನ್ಮತಾಳಿದರು.

## ಜನನ, ಬಾಲ್ಯ

ಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆಯು ನಮಗೆ ಸರಿಯಾಗಿ ತಿಳಿದು ಬಂದಿಲ್ಲ. ಅವರ ಚರಿತ್ರೆಯನ್ನು ಆ ಕಾಲದಲ್ಲಿ ಯಾರೂ ಬರೆದಿಡಲಿಲ್ಲ. ಆದರೂ ಇತಿಹಾಸಕಾರರು ಕಷ್ಟಪಟ್ಟು ಶೋಧಿಸಿ ಕೆಲವು ವಿಷಯಗಳನ್ನು ನಿಶ್ಚಯಿಸಿ ತಿಳಿಸಿದ್ದಾರೆ. ಅವೆಲ್ಲವನ್ನೂ ಪರಿಶೀಲಿಸಿದಾಗ ನಮಗೆ ತಿಳಿದು ಬರುವ ಜೀವನ ಚರಿತ್ರೆ ಹೀಗಿದೆ.

ಕೇರಳ ದೇಶದ ಪೂರ್ಣಾನದೀತೀರದಲ್ಲಿ ಕಾಲಟಿ ಎಂಬ ಒಂದು ಗ್ರಾಮವಿದೆ. ಅದು ಈಗ ಪಟ್ಟಣವಾಗಿ ಬೆಳೆದಿದೆ. ಆ ಗ್ರಾಮದಲ್ಲಿ ಶಿವಗುರು ಎಂಬ ಒಬ್ಬ ವಿದ್ವಾಂಸನಿದ್ದನು. ಇವನು ನಂಬೂದರಿಯೆಂಬ ಬ್ರಾಹ್ಮಣಪಂಗಡದವನು. ಈತನ ಪತ್ನಿಯ ಹೆಸರು ಆರ್ಯಾಂಬೆ. ದೈವಭಕ್ತರಾದ ಈ ದಂಪತಿಗಳು ಪರಶಿವನ ಆರಾಧನೆಯಲ್ಲಿ ತೊಡಗಿದಾಗ, ಕೆಲವು ಕಾಲದ ಮೇಲೆ ತೇಜಸ್ವಿಯಾದ ಒಂದು ಗಂಡು ಮಗು ಜನಿಸಿತು. ತಂದೆ ತಾಯಿಗಳಿಗೆ ತುಂಬ ಸಂತೋಷವಾಯಿತು. ಶಿವಭಕ್ತರಾದ ಅವರು ಮಗುವಿಗೆ 'ಶಂಕರ' ಎಂದು ನಾಮಕರಣ ಮಾಡಿದರು. ಈ ಬಾಲಕನೇ ಮುಂದೆ ಶ್ರೀಶಂಕರಭಗವತ್ಪಾದಾಚಾರ್ಯರೆಂದು ವಿಖ್ಯಾತನಾದನು.

ಶ್ರೀ ಶಂಕರನು ಜನಿಸಿದ ದಿನ ವೈಶಾಖ ಶುದ್ಧ ಪಂಚಮೀ. ಅಂದು ಶ್ರೀಶಂಕರ ಜಯಂತಿಯೆಂದು ಈಗಲೂ ಬಹಳಕಡೆ ದೊಡ್ಡ ಉತ್ಸವಗಳು ನಡೆಯುತ್ತವೆ. ಆದರೆ ಆಚಾರ್ಯರು ಜನಿಸಿದ್ದು ಎಷ್ಟು ವರ್ಷಗಳ ಹಿಂದೆ? ಅವರ ಕಾಲ ಯಾವುದು ? ಎಂಬುದು ಮಾತ್ರ ಸರಿಯಾಗಿ ತಿಳಿದಿಲ್ಲ. ಇತ್ತೀಚಿನ ಸಂಶೋಧನೆಯ ಪ್ರಕಾರ ಅವರ ಜನನವಾದದ್ದು ಕ್ರಿ.ಶ.7ನೆಯ ಶತಮಾನವೆಂದು ತಿಳಿದು ಬರುತ್ತದೆ. ಕ್ರಿ.ಶ. 7ನೆಯ ಶತಕದ ಅಂತ್ಯ ಮತ್ತು 8 ನೆಯ ಶತಕದ ಆದಿ ಶ್ರೀ ಶಂಕರರ ಜೀವನ ಕಾಲವೆಂದು ನಿಶ್ಚಯಿಸಿದ್ದಾರೆ. ಅಂತೂ ಇಂದಿಗೆ 1200 ವರ್ಷಗಳ ಹಿಂದೆ ಶ್ರೀ ಶಂಕರಾಚಾರ್ಯರಿದ್ದರೆಂದು ಹೇಳಬಹುದು.

ಶಂಕರನಿಗೆ ಮೂರು ವರ್ಷತುಂಬುವಷ್ಟರಲ್ಲಿ ಆತನ ತಂದೆಯಾದ ಶಿವಗುರು ದೈವಗತಿಯಿಂದ ಸ್ವರ್ಗಸ್ಥನಾದನು. ಒಬ್ಬನೇ ಮಗನಾದ ಶಂಕರನನ್ನು ಆರ್ಯಾಂಬೆ

ಪ್ರೀತಿಯಿಂದ ಸಾಕಿಸಲಹಿದಳು. ವಿದ್ವಾಂಸರ ವಂಶವಾದ್ದರಿಂದ ಆರ್ಯಾಂಬೆ ಶಂಕರನಿಗೆ ಚಿಕ್ಕವಯಸ್ಸಿನಲ್ಲಿಯೇ ಸಂಸ್ಕೃತದಲ್ಲಿ ಮಾತಾಡುವುದನ್ನು ಕಲಿಸಿದಳು. ಆತನ ಐದನೆಯ ವರ್ಷದಲ್ಲಿ ಬಂಧುಗಳಿಂದ ಶಂಕರನ ಉಪನಯನವನ್ನು ಮಾಡಿಸಿದಳು. ಪ್ರಸಿದ್ಧವಾದ ಒಂದು ಸವೇದ ಸಂಸ್ಕೃತಪಾಠಶಾಲೆಯಲ್ಲಿ ಬಾಲಕನ ವಿದ್ಯಾಭ್ಯಾಸವು ನಡೆಯಿತು. ಶಂಕರನು ಅತ್ಯಂತ ಮೇಧಾವಿಯಾದ್ದರಿಂದ ಸ್ವಲ್ಪ ಕಾಲದಲ್ಲಿಯೇ ತರ್ಕವ್ಯಾಕರಣಾದಿ ಶಾಸ್ತ್ರಗಳಲ್ಲಿ ಪಾಂಡಿತ್ಯವನ್ನು ಗಳಿಸಿ ವೇದಗಳನ್ನು ಸ್ವರಸಹಿತವಾಗಿ ಕಂಠಪಾಠ ಮಾಡಿದನು. ಒಮ್ಮೆ ಕೇಳಿದರೆ ಸಾಕು, ಒಮ್ಮೆ ನೋಡಿದರೆ ಸಾಕು, ಆ ಬಾಲಕನು ಅದನ್ನು ಎಂದಿಗೂ ಮರೆಯುತ್ತಿರಲಿಲ್ಲ. ಅಂತಹ ಅದ್ಭುತವಾದ ಸ್ಮರಣಶಕ್ತಿಯೂ ಧಾರಣಶಕ್ತಿಯೂ ಶಂಕರನಿಗಿದ್ದವು. ಆ ಮಹಾಪಾಠಶಾಲೆಯ ಉಪಾಧ್ಯಾಯರು ಈ ಬಾಲಕನ ಬುದ್ಧಿಸಾಮರ್ಥ್ಯಕ್ಕೆ ತಲೆದೂಗಿ, ಅಲ್ಲಿಯ ವಿದ್ಯಾಭ್ಯಾಸವು ಪೂರ್ಣವಾಯಿತೆಂದು ವಿಸ್ಮಯಾನಂದ-ಗಳಿಂದ ಶಂಕರನನ್ನು ಬೀಳ್ಕೊಟ್ಟರು. ಈ ರೀತಿಯಲ್ಲಿ ಕೆಲವರ ಬುದ್ಧಿಶಕ್ತಿಯು ಅಸಾಧಾರಣವಾಗಿರುವುದು ಬಾಲ್ಯದಲ್ಲಿಯೇ ಕಂಡು ಬರುತ್ತದೆ. ವಿಲಿಯಂ ಜೇಮ್ಸ್ ನಿದಿಸ್ ಎಂಬವನು ತನ್ನ ಹನ್ನೊಂದನೆಯ ವರ್ಷದಲ್ಲಿ, ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಗಣಿತ ಶಾಸ್ತ್ರದ ಮೇಲೆ ಉಪನ್ಯಾಸ ಮಾಡಿದನು. ನಮ್ಮ ದೇಶದಲ್ಲಿಯೇ ರಾಮಾನುಜಂ ಎಂಬಾತನು ಗಣಿತಶಾಸ್ತ್ರದ ಕ್ಲಿಷ್ಟ ಸಮಸ್ಯೆಗಳನ್ನು ಚಿಕ್ಕವಯಸ್ಸಿನಲ್ಲಿಯೇ ಬಿಡಿಸಬಲ್ಲವನಾಗಿದ್ದನೆಂಬುದು ಪ್ರಸಿದ್ಧವಾಗಿದೆ. ವಂಶಧರಸರಸ್ವತಿ ಎಂಬ ಬಂಗಾಳಿ ಬ್ರಾಹ್ಮಣನ ಮಗನು ತನ್ನ ಐದನೆಯ ವಯಸ್ಸಿನಲ್ಲಿ ಹಿಂದಿ, ಬಂಗಾಳಿ, ಇಂಗ್ಲೀಷ್, ಸಂಸ್ಕೃತ - ಈ ನಾಲ್ಕು ಭಾಷೆಗಳಲ್ಲಿ ಚೆನ್ನಾಗಿ ಮಾತಾಡುತ್ತಾನೆಂದೂ ಪಾಣಿನಿಯ ಅಷ್ಟಾಧ್ಯಾಯಿಯನ್ನು ಕಲಿಯುತ್ತಿದ್ದಾನೆಂದೂ 'ಹಿತವಾದ' ಎಂಬ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ಶ್ರೀ ಹರ್ಷನೆಂಬ ಕವಿಯು ತನಗೆ ಗೊತ್ತಿಲ್ಲದ ಯಾವುದೇ ಭಾಷೆಯಲ್ಲಿ ಜನರಾಡಿದ ಮಾತುಗಳನ್ನು ಒಂದೂ ತಪ್ಪೂ ಇಲ್ಲದಂತೆ ಸಾಲುಸಾಲಾಗಿ ಉಚ್ಚರಿಸಬಲ್ಲವನಾಗಿದ್ದನು. ನಮ್ಮ ಶ್ರೀ ಶಂಕರನು ಅವರೆಲ್ಲರನ್ನೂ ಮೀರಿಸುವ ಅಸಾಧಾರಣವಾದ ಧೀಶಕ್ತಿಯನ್ನು ಪಡೆದಿದ್ದನೆಂದರೆ ಅಚ್ಚರಿಯಿಲ್ಲ. ಆತನನ್ನು ಹೊಗಳುವ ಒಂದು ಶ್ಲೋಕ ಹೀಗಿದೆ.

**ಅಷ್ಟವರ್ಷೇ ಚತುರ್ವೇದೀ ದ್ವಾದಶೇ ಸರ್ವಶಾಸ್ತ್ರವಿತ್ ।**
**ಷೋಡಶೇ ಕೃತವಾನ್ ಭಾಷ್ಯಂ ದ್ವಾತ್ರಿಂಶೇ ಮುನಿರಭ್ಯಗಾತ್ ॥**

ಶ್ರೀ ಶಂಕರನು ತನ್ನ ಎಂಟನೆಯ ವರ್ಷದಲ್ಲಿ ನಾಲ್ಕು ವೇದಗಳನ್ನೂ ಕಂಠ ಪಾಠಮಾಡಿದ್ದನು. ಹನ್ನೆರಡು ವರ್ಷದ ವಯಸ್ಸಿನಲ್ಲಿ ತರ್ಕವ್ಯಾಕರಣಾದಿ ಸಕಲ ಶಾಸ್ತ್ರಗಳಲ್ಲಿಯೂ ವಿದ್ವಾಂಸನಾಗಿದ್ದನು. ತನ್ನ ಹದಿನಾರನೆಯ ವಯೋವರ್ಷದಲ್ಲಿ ಬ್ರಹ್ಮಸೂತ್ರಾದಿಗಳಿಗೆ ಭಾಷ್ಯವನ್ನು ರಚಿಸಿ, ಮೂವತ್ತೆರಡನೇ ವರ್ಷದ ವಯಸ್ಸಿನಲ್ಲಿ ದೇಹವನ್ನು ತ್ಯಜಿಸಿದನು - ಎಂದು ಅಭಿಪ್ರಾಯ.

## ಕವಿತಾಶಕ್ತಿ

ಶಂಕರನು ಗುರುಕುಲದಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಾಗ ಶಾಸ್ತ್ರವಿಧಿಯಂತೆ ಭಿಕ್ಷೆಬೇಡಿ ಜೀವಿಸುತ್ತಿದ್ದನು. ಒಂದು ದಿನ ಹತ್ತಿರದ ಹಳ್ಳಿಯಲ್ಲಿದ್ದ ಒಬ್ಬ ಬ್ರಾಹ್ಮಣನ ಮನೆಗೆ ಭಿಕ್ಷೆಗಾಗಿ ಹೋದನು. ಮನೆಯಲ್ಲಿ ಆ ಬ್ರಾಹ್ಮಣನಿರಲಿಲ್ಲ. ಆತನ ಮಡದಿಯು ಮನೆಯಲ್ಲಿ ಭಿಕ್ಷೆಹಾಕಲು ಏನೂ ಇಲ್ಲದ್ದರಿಂದ ಒಂದು ನೆಲ್ಲಿಕಾಯಿಯನ್ನು ಹುಡುಕಿ ತಂದು ಈ ಬ್ರಹ್ಮಚಾರಿಯ ಭಿಕ್ಷಾಪಾತ್ರೆಗೆ ಅಳುತ್ತ ಹಾಕಿದಳು. ಒಬ್ಬ ವಿದ್ಯಾರ್ಥಿಗೆ ಭಿಕ್ಷೆಹಾಕಲು ಸಹ ಏನೂ ಇಲ್ಲದೆ ಹೋಯಿತೆಂದು ಅವಳಿಗೆ ದುಃಖವಾಗಿತ್ತು. ಆ ಹೆಂಗಸಿನ ಬಡತನವನ್ನೂ ತ್ಯಾಗಬುದ್ಧಿಯನ್ನೂ ಕಂಡು ಶಂಕರನಿಗೆ ತುಂಬ ಕನಿಕರ ಉಂಟಾಯಿತು. ಒಡನೆಯೇ ಆತನು ಆ ಬಡಕುಟುಂಬವನ್ನು ಅನುಗ್ರಹಿಸಬೇಕೆಂದು ಐಶ್ವರ್ಯಾಧಿದೇವತೆಯಾದ ಲಕ್ಷ್ಮೀದೇವಿಯನ್ನು ಪ್ರಾರ್ಥಿಸಿಕೊಂಡನು. ತನ್ನ ಕವಿತಾ ಶಕ್ತಿಯಿಂದ ಆಗಲೇ ರಚಿಸಿದ ಶ್ಲೋಕಗಳಿಂದ ಲಕ್ಷ್ಮೀ ದೇವಿಯನ್ನು ಸ್ತುತಿಸಿದನು. ಲಕ್ಷ್ಮೀದೇವಿಯು ಪ್ರಸನ್ನಳಾದಳು. ಕೂಡಲೆ ಆ ಮನೆಯಲ್ಲಿ ಚಿನ್ನದ ನೆಲ್ಲಿಕಾಯಿಗಳ ಸುರಿಮಳೆಯಾಯಿತು. ಶ್ರೀ ಶಂಕರನು ಭಿಕ್ಷೆಗೆ ಹೋಗಿದ್ದ ಆ ಮನೆ ಈಗಲೂ ಕೇರಳರಾಜ್ಯದ 'ಪೊನ್ನರ್ ತೋಡತ' ಎಂಬ ಗ್ರಾಮದಲ್ಲಿದೆ. ಆ ಮನೆಯು 'ಸ್ವರ್ಣತ್ತಿಲ್ಲಮ್' ಎಂದು ಪ್ರಸಿದ್ಧವಾಗಿದೆ. ಆ ಕುಟುಂಬದವರು ಈಗಲೂ ಶ್ರೀಮಂತರಾಗಿಯೇ ಇದ್ದಾರೆ. ಈ ಪ್ರಸಂಗದಿಂದ ಶ್ರೀ ಶಂಕರನಿಗೆ ಬಡವರ ಮೇಲಿದ್ದ ಕಾರುಣ್ಯವನ್ನೂ ಕವಿತಾಶಕ್ತಿಯನ್ನೂ ದೇವತೆಯನ್ನು ಪ್ರಸನ್ನೀಕರಿಸಬಲ್ಲ ಆತನ ತಪಃ ಶಕ್ತಿಯನ್ನೂ ಊಹಿಸಿಕೊಳ್ಳಬಹುದು. ಆ ಸಮಯದಲ್ಲಿ ರಚಿಸಿ ಹೇಳಿದ ಲಕ್ಷ್ಮೀ ಸ್ತೋತ್ರಕ್ಕೆ **'ಕನಕಧಾರಾ ಸ್ತೋತ್ರ'** ವೆಂದು ಹೆಸರು.

## ಮಾತೃಸೇವೆ

ವಿದ್ಯಾಭ್ಯಾಸಮುಗಿದ ಮೇಲೆ ಗುರುಗಳ ಅನುಜ್ಞೆ ಪಡೆದು ಶಂಕರನು ತನ್ನ ಮನೆಗೆ ಹಿಂತಿರುಗಿದನು. ಪ್ರತಿದಿನವೂ ಬ್ರಹ್ಮಚಾರಿಗೆ ವಿಹಿತವಾದ ಕರ್ಮದ ಅನುಷ್ಠಾನ, ವೇದಶಾಸ್ತ್ರಗಳ ಅಧ್ಯಯನ, ತಾಯಿಯ ಸೇವೆ-ಈ ಮೂರು ಆತನ ನಿತ್ಯಕರ್ತವ್ಯಗಳಾಗಿದ್ದವು. ಪಿತ್ರಾರ್ಜಿತವಾದ ಆಸ್ತಿ ಇದ್ದುದರಿಂದ ಜೀವನ ನಿರ್ವಹಣೆಗೆ ಹಣದ ಕೊರತೆಯೇನೂ ಇರಲಿಲ್ಲ. ತಾಯಿಯಾದ ಆರ್ಯಾಂಬೆಯು ಸ್ನಾನ ಮಾಡುವುದಕ್ಕಾಗಿ ಪ್ರತಿದಿನವೂ ಪೂರ್ಣಾನದಿಗೆ ಹೋಗುತ್ತಿದ್ದಳು. ವೃದ್ಧೆಯಾದ ಅವಳಿಗೆ ಅದು ಕಷ್ಟಕರವಾಗಿತ್ತು. ಆದ್ದರಿಂದ ತಾಯಿಗೆ ಅನುಕೂಲವಾಗಲೆಂದು ಶಂಕರನು ಪೂರ್ಣಾನದೀದೇವತೆಯನ್ನು ಪ್ರಾರ್ಥಿಸಿ ಕೊಂಡನು. ನದೀದೇವತೆಯು ಪ್ರಸನ್ನಳಾದಳು. ನದಿಯು ತಾನು ಹರಿಯುವ ಪಥವನ್ನು ಸ್ವಲ್ಪ ಬದಲಾಯಿಸಿ, ಓರೆಯಾಗಿ ತಿರುಗಿ ಆರ್ಯಾಂಬೆಯ ಮನೆಯ ಬಳಿ ಹರಿಯ ತೊಡಗಿತು. ಈಗಲೂ ಕಾಲಟಿಯಲ್ಲಿ ಆರ್ಯಾಂಬೆಯ ಮನೆಯೆಂದು ಗುರುತಿಸಲಾದ ಸ್ಥಳದಲ್ಲಿ ಪೂರ್ಣಾನದಿಯು ಡೊಂಕಾಗಿ ಹರಿದು ಬಂದಿರುವುದನ್ನು ಕಾಣಬಹುದು.

## ಕೇರಳ ರಾಜನ ಆಗಮನ

ದಿನೇ ದಿನೇ ಶ್ರೀಶಂಕರನ ಕೀರ್ತಿ ಕೇರಳರಾಜ್ಯದಲ್ಲಿ ಹರಡಿತು. ಆತನ ವಿದ್ಯೆ, ವಿನಯ, ವಾಗ್ಮಿತೆ, ಬ್ರಹ್ಮತೇಜಸ್ಸು, ಪಾಂಡಿತ್ಯ, ತಪಃಶಕ್ತಿ ಇವು ಕೇರಳರಾಜನ ಕಿವಿಗೆ ಮುಟ್ಟಿದವು. ಈ ಬ್ರಹ್ಮಚಾರಿಯನ್ನು ನೋಡಬೇಕೆಂಬ ಕುತೂಹಲದಿಂದ ಆ ರಾಜನೇ ಪರಿವಾರ ಸಮೇತನಾಗಿ ಬಂದು ಶ್ರೀಶಂಕರನನ್ನು ಕಂಡು ಮಾತಾಡಿದನು. ಈ ಬಾಲಕನ ವಿದ್ಯಾವಿನಯ ತೇಜಸ್ಸುಗಳನ್ನು ಕಂಡು ಬೆರಗಾಗಿ, ನೂರಾರು ಚಿನ್ನದ ನಾಣ್ಯಗಳನ್ನು ಶಂಕರನಿಗೆ ಕಾಣಿಕೆಯನ್ನಾಗಿ ಅರ್ಪಿಸಲು ಅಪೇಕ್ಷಿಸಿದನು. ಶ್ರೀ ಶಂಕರನು ಕಾಣಿಕೆಯನ್ನು ಸ್ವೀಕರಿಸಲಿಲ್ಲ. ಆತನು ರಾಜನನ್ನು ಕುರಿತು "ಮಹಾರಾಜ, ಜೀವನನಿರ್ವಾಹಕ್ಕೆ ನನಗೇನೂ ತೊಂದರೆಯಾಗಿಲ್ಲ. ಕಷ್ಟದಲ್ಲಿರುವ ಬಡವರಿಗೆ ಇದನ್ನು ಕೊಡು" ಎಂದು ನುಡಿದು, ಬಡಜನರನ್ನು ಕರೆಸಿ ರಾಜನಿಂದಲೇ ಆ ಜನರಿಗೆ ಹಣವನ್ನು ಕೊಡಿಸಿದನು. ರಾಜನು ಶಂಕರನ ನಿಸ್ಪೃಹತೆಯನ್ನು ಕಂಡು ಆಶ್ಚರ್ಯಚಕಿತನಾಗಿ ಬಾಲಕನಾದ ಶಂಕರನಿಗೂ ತಾಯಿಯಾದ ಆರ್ಯಾಂಬೆಗೂ

ವಿನಯದಿಂದ ನಮಸ್ಕರಿಸಿದನು. "ಆಹಾ ! ನನ್ನ ರಾಜ್ಯದಲ್ಲಿ ಅಪೂರ್ವವಾದ **ದಿವ್ಯಜ್ಯೋತಿಯೊಂದು** ಉದಿಸಿದೆ. ನಾನು ಧನ್ಯ ! ನನ್ನ ರಾಜ್ಯವೂ ಧನ್ಯ !" ಎಂದು ಮನಸ್ಸಿನಲ್ಲಿಯೇ ಹೇಳಿಕೊಳ್ಳುತ್ತ ಪರಿವಾರ ಸಮೇತನಾಗಿ ಹೊರಟು ಹೋದನು.

## ಸಂನ್ಯಾಸಸ್ವೀಕಾರ

ಶ್ರೀಶಂಕರನಿಗೆ ಸುಮಾರು ಹನ್ನೆರಡು ವರ್ಷಗಳಾಗಿರಬಹುದು. ಆತನಿಗೆ ಸಂಸಾರವ್ಯವಹಾರಗಳಲ್ಲಿ ಯಾವ ಆಕರ್ಷಣೆಯೂ ಇರಲಿಲ್ಲ. ಆತನಿಗೆ ವೈರಾಗ್ಯಪರವಾದ ಭಾವನೆಗಳು ತಲೆದೋರಿದವು. ವೇದಶಾಸ್ತ್ರಗಳು ಬೋಧಿಸುವ ಪರಮತತ್ತ್ವ ಯಾವುದು ? ಅದನ್ನು ನಾನು ತಿಳಿಯ ಬೇಕು, ತಿಳಿದು ಜನರಿಗೆ ತಿಳಿಸಬೇಕು ಎಂಬ ಇಚ್ಛೆ ಪ್ರಬಲವಾಯಿತು. ಸಂನ್ಯಾಸವೇ ಅದಕ್ಕೆ ದಾರಿ ಎಂಬ ನಂಬಿಕೆ ಗಟ್ಟಿಯಾಯಿತು. ಮಗನು ಸಂನ್ಯಾಸಿಯಾಗುವುದು ಆರ್ಯಾಂಬೆಗೆ ಇಷ್ಟವಾಗಲಿಲ್ಲ. ತಾಯಿಯ ಒಪ್ಪಿಗೆ ಇಲ್ಲದೆ ಸಂನ್ಯಾಸವನ್ನು ಸ್ವೀಕರಿಸುವುದು ಯುಕ್ತವಲ್ಲವೆಂದೆಣಿಸಿ ಶಂಕರನು ಚಿಂತಾಕ್ರಾಂತನಾದನು. ಜೀವನದಲ್ಲಿ ಮಾನವನು ಸಾಧಿಸಬಹುದಾದ ಧರ್ಮಪ್ರಚಾರಕ್ಕಾಗಿಯೂ ಆತ್ಮಸಾಕ್ಷಾತ್ಕಾರಕ್ಕಾಗಿಯೂ ಶ್ರೀಶಂಕರನು ಜನ್ಮತಾಳಿದ್ದನು. ಮಾನವರ ಎಲ್ಲ ಕ್ಲೇಶಗಳನ್ನೂ ಪರಿಹರಿಸಿ ಪರಮಶಾಂತಿಯ ಕಡೆಗೆ ಕರೆದೊಯ್ಯುವುದು ಅವನ ಧ್ಯೇಯವಾಗಿ ಕಾದಿತ್ತು. ಅದಕ್ಕೆ ಅನುಕೂಲವಾದ ಒಂದು ಘಟನೆ ತಾನಾಗಿ ಒದಗಿ ಬಂದಿತು.

ಎಂದಿನಂತೆ ಒಂದು ದಿನ ಶ್ರೀಶಂಕರನು ಸ್ನಾನಕ್ಕಾಗಿ ಪೂರ್ಣಾನದಿಗೆ ಹೋದನು. ಆತನು ಸ್ನಾನಕ್ಕೆ ನದಿಯಲ್ಲಿ ಇಳಿದಾಗ ಒಂದು ಮೊಸಳೆ ಅವನ ಕಾಲನ್ನು ಹಿಡಿದು ಎಳೆಯತೊಡಗಿತು. ಆತನ ಕೂಗನ್ನು ಕೇಳಿ ತೀರದಲ್ಲಿದ್ದ ಆರ್ಯಾಂಬೆ ಶೋಕಾರ್ತಳಾಗಿ ಹಾಹಾಕಾರ ಮಾಡಿದಳು. ಶ್ರೀಶಂಕರನು 'ಅಮ್ಮ, ನನ್ನನ್ನು ಒಂದು ಮೊಸಳೆ ಹಿಡಿದು ಆಳವಾದ ನೀರಿಗೆ ಜಗ್ಗುತ್ತಿದೆ. ನನ್ನ ಗತಿ ಮುಗಿದಂತೆಯೇ. ಈ ಸಮಯದಲ್ಲಾದರೂ ನಾನು ಸಂನ್ಯಾಸಿಯಾಗಬೇಕು. ನನಗೆ ಒಪ್ಪಿಗೆಯನ್ನು ಕೊಡು' ಎಂದು ಕೂಗಿ ಹೇಳಿದನು. ಆರ್ಯಾಂಬೆಗೆ ದಿಕ್ಕು ತೋರಲಿಲ್ಲ. 'ಇದು ಮಗನ ಕಡೆಯ ಬಯಕೆ' ಎಂದೆಣಿಸಿ ಒಪ್ಪಿಗೆಯನ್ನಿತ್ತಳು. ಶ್ರೀ ಶಂಕರನು ನಾನು ಸಂನ್ಯಾಸವನ್ನು ಸ್ವೀಕರಿಸಿದ್ದೇನೆ (ಮಯಾ ಸಂನ್ಯಸ್ತಂ) - ಈಗ ನಾನು ಸಂನ್ಯಾಸಿ ಎಂದು ಸಂಕಲ್ಪಿಸಿ ಉಪಯುಕ್ತವಾದ ಮಂತ್ರಗಳನ್ನು ಉಚ್ಚರಿಸಿದನು. ಇದನ್ನು ಆಪತ್

ಸಂನ್ಯಾಸವೆಂದು ಹೇಳುತ್ತಾರೆ. ದೈವಯೋಗದಿಂದ ಮೊಸಳೆ ಆತನ ಕಾಲನ್ನು ಬಿಟ್ಟಿತು! ಶ್ರೀ ಶಂಕರನು ದಡಕ್ಕೆ ಬಂದನು. ಮೊಸಳೆಯಿಂದ ಪಾರಾಗಿ ಬಂದ ಮಗನನ್ನು ನೋಡಿದಾಗ, ಆರ್ಯಾಂಬೆಗೆ ಹರ್ಷಶೋಕಗಳೆರಡೂ ಒಟ್ಟಿಗೆ ಉದ್ಭವಿಸಿದವು. ಮಗನು ಬದುಕಿ ಬಂದನೆಂದು ಹರ್ಷ. ಸಂನ್ಯಾಸಿಯಾಗಿ ಹೊರಟು ಹೋಗುತ್ತಾನೆಂದು ಶೋಕ. ಇಬ್ಬರೂ ಮನೆಗೆ ಬಂದರು.

ದುಃಖಿಸುತ್ತಿದ್ದ ತಾಯಿಗೆ ಶ್ರೀಶಂಕರನು "ಅಮ್ಮ, ನನಗಾಗಿ ಅಳಬೇಡ. ಮೊಸಳೆ ನನ್ನನ್ನು ಬಿಟ್ಟು ಹೋಯಿತೆಂದು ಸಂತೋಷ ಪಡು. ನಾನು ಸಂನ್ಯಾಸಿಯಾಗಿ ಹೊರಟು ಹೋಗುತ್ತೇನೆಂದು ಚಿಂತಿಸಬೇಡ. ಸಂಸಾರದಲ್ಲಿ ಸುಖದುಃಖಗಳು ಇದ್ದೇ ಇರುತ್ತವೆ. ಈ ಊರಿನಲ್ಲಿಯೇ ನಮ್ಮ ದಾಯಾದಿಗಳಾದ ಬಂಧುಗಳು ಇದ್ದಾರೆ. ಅವರು ನಿನ್ನನ್ನು ನೋಡಿಕೊಳ್ಳುವಂತೆ ಕೇಳಿಕೊಳ್ಳುತ್ತೇನೆ. ಪಿತ್ರಾರ್ಜಿತವಾಗಿ ಬಂದ ಆಸ್ತಿ ಇದೆ. ಮುಂದೆ ಇದೆಲ್ಲವೂ ಅವರಿಗೇ ಸೇರುವುದರಿಂದ ನಿನ್ನನ್ನು ಉಪಚರಿಸುವುದು ಅವರಿಗೇನೂ ಕಷ್ಟವೆನಿಸುವುದಿಲ್ಲ" ಎಂದು ಸಮಾಧಾನ ಹೇಳಿದನು. ಸುತ್ತಮುತ್ತಲಿದ್ದ ಬಂಧುಗಳಿಗೆ ಇದೆಲ್ಲವನ್ನೂ ವಿವರಿಸಿ ತಾಯಿಯ ಯೋಗಕ್ಷೇಮಗಳನ್ನು ನೋಡಿಕೊಳ್ಳುವಂತೆ ಒಪ್ಪಿಸಿದನು. ಅನಂತರ ಕಾಷಾಯವಸ್ತ್ರವನ್ನುಟ್ಟು ತಾಯಿಗೆ ಸಾಷ್ಟಾಂಗ ನಮಸ್ಕಾರವನ್ನು ಮಾಡಿ, ಆಕೆ ನೆನೆಸಿಕೊಂಡಾಗ ತಾನು ಬರುವೆನೆಂದು ಹೇಳಿ ಗೃಹದಿಂದ ನಿರ್ಗಮಿಸಿದನು. ಗ್ರಾಮಸ್ಥರೆಲ್ಲರೂ ಅಚ್ಚರಿಯಿಂದ ಆ ಬಾಲ ಸಂನ್ಯಾಸಿಯನ್ನು ನೋಡುತ್ತ ನಿಂತಿದ್ದರು.

## ಶ್ರೀಗೋವಿಂದ ಭಗವತ್ಪಾದರ ಸಂನಿಧಿಯಲ್ಲಿ

ಬಾಲಕ ಶಂಕರನು ಈಗ ಕಾಷಾಯವನ್ನುಟ್ಟು ದಂಡ ಕಮಂಡಲುಗಳನ್ನು ಹಿಡಿದ ಶ್ರೀಶಂಕರಯತಿಗಳು ! ಅವರಿಗೀಗ ವಿಧಿವತ್ತಾಗಿ ಸಂನ್ಯಾಸದೀಕ್ಷೆಯನ್ನಿತ್ತು ತತ್ತ್ವೋಪದೇಶವನ್ನು ಮಾಡಬಲ್ಲ ಗುರುಗಳ ಅವಶ್ಯಕತೆ ಉಂಟಾಯಿತು. ಅಂತಹ ಒಬ್ಬ ಮಹಾತ್ಮರು ಉತ್ತರದ ನರ್ಮದಾನದೀತೀರದಲ್ಲಿ ವಾಸವಾಗಿದ್ದಾರೆಂದೂ ಅವರ ಹೆಸರು ಶ್ರೀಗೋವಿಂದಭಗವತ್ಪಾದರೆಂದೂ ತಿಳಿದು ಬಂದಿತು. ಶ್ರೀಶಂಕರಯತಿಗಳು ಏಕಾಕಿಯಾಗಿ ಕಾಲ್ನಡಗೆಯಿಂದ ಅಲ್ಲಿಗೆ ಹೊರಟರು. ಅವರ ಮನೋಬಲ ಎಂತಹದಿರಬೇಕು ? ಅಷ್ಟು ಚಿಕ್ಕವಯಸ್ಸಿನಲ್ಲಿ ಕಾಲ್ನಡಗೆಯಿಂದ ಕಾಡುಮೇಡುಗಳನ್ನು ದಾಟುತ್ತ, ಭಿಕ್ಷೆಯಿಂದ ಪ್ರಾಣವನ್ನು ಹಿಡಿದುಕೊಂಡು, ಸ್ವತಃ

ಘನವಿದ್ವಾಂಸರಾಗಿದ್ದರೂ ಗುರುಮುಖದಿಂದಲೇ ಆತ್ಮಜ್ಞಾನವನ್ನು ಪಡೆಯಬೇಕೆಂಬ ನಿಶ್ಚಯದಿಂದ, ದಾರಿಯಲ್ಲಿ ಕಾಡುಮೃಗಗಳಿಗೆ ಅಂಜದೆ ಅಳುಕದೆ, ಕೇರಳದಿಂದ ನರ್ಮದಾ ನದಿಯವರೆಗೆ ಹೋಗಿ ಸೇರಿದ ಇನ್ನೊಬ್ಬ ಧೀರಸಂನ್ಯಾಸಿಯ ಹೆಸರನ್ನು ನಾವಂತೂ ಕೇಳಿಲ್ಲ.

ಶ್ರೀಶಂಕರಯತಿಗಳು ನರ್ಮದಾನದೀತೀರವನ್ನು ಸೇರಿ ಅಲ್ಲಲ್ಲಿ ವಿಚಾರಿಸುತ್ತ ಶ್ರೀಗೋವಿಂದಭಗವತ್ಪಾದರ ಆಶ್ರಮಕ್ಕೆ ಬಂದರು. ಶ್ರೀಗೋವಿಂದ-ಭಗವತ್ಪಾದರು ಶ್ರೀಗೌಡಪಾದಾಚಾರ್ಯರ ಸಾಕ್ಷಾತ್ ಶಿಷ್ಯರು. ಬ್ರಹ್ಮಜ್ಞಾನಿಗಳೆಂದು ವಿಖ್ಯಾತರಾಗಿದ್ದರು. ಶ್ರೀಶಂಕರರು ಅವರನ್ನು ಕಂಡು ಸಾಷ್ಟಾಂಗ ನಮಸ್ಕಾರಮಾಡಿ ತಮ್ಮನ್ನು ಶಿಷ್ಯರನ್ನಾಗಿ ಸ್ವೀಕರಿಸಬೇಕೆಂದು ಬೇಡಿಕೊಂಡರು. ಶ್ರೀಗೋವಿಂದಯತೀಶ್ವರರು ನೀನಾರು? ( ಕಸ್ತ್ವಂ ) ಎಂದು ಕೇಳಲು ಶ್ರೀಶಂಕರರು '**ಚಿದಾನಂದರೂಪಃ ಶಿವೋಽಹಂ ಶಿವೋಽಹಂ**' ಎಂದು ಹೇಳಿದರು. (ಚಿದಾನಂದಸ್ವರೂಪನಾದ ಶಿವನು ನಾನು - ಎಂದರ್ಥ). ಶ್ರೀಗೋವಿಂದ ಯತಿಗಳು ಆ ಉತ್ತರದಿಂದ ಸಂತುಷ್ಟರಾಗಿ, ಶ್ರೀಶಂಕರರನ್ನು ಹೊಗಳಿ ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ವಿಧಿವತ್ತಾಗಿ ಪರಮಹಂಸಸಂನ್ಯಾಸದೀಕ್ಷೆಯನ್ನಿತ್ತು ಸಂನ್ಯಾಸದ ನಿಯಮಗಳನ್ನು ತಿಳಿಸಿಕೊಟ್ಟರು.

ಅನಂತರ ಶ್ರೀಶಂಕರಯತಿಗಳು ತಮ್ಮ ಗುರುಗಳಿಂದ ವೇದಾಂತಶಾಸ್ತ್ರವನ್ನು ಗಾಢವಾಗಿ ಅಧ್ಯಯನಮಾಡಿದರು. ಉಪನಿಷತ್ತು, ಭಗವದ್ಗೀತೆ, ಶಾರೀರಕಸೂತ್ರ (ಬ್ರಹ್ಮಸೂತ್ರ) ಎಂಬ ಪ್ರಸ್ಥಾನತ್ರಯವನ್ನು ಶ್ರೀಗೋವಿಂದಯತೀಶ್ವರರು ಶ್ರೀಶಂಕರರಿಗೆ ಬೋಧಿಸಿ, ಸಾಂಪ್ರದಾಯಿಕವಾಗಿ ಪ್ರಾಚೀನ ಕಾಲದಿಂದಲೂ ಬಂದಿರುವ ವೈದಿಕಸಿದ್ಧಾಂತವು ಬ್ರಹ್ಮಾದ್ವೈತವೇ ಎಂಬುದನ್ನು ತಿಳಿಸಿದರು. ಮಹಾಮೇಧಾವಿಗಳಾದ ಶ್ರೀಶಂಕರರು ಬಹುಬೇಗನೆ ಶಾಸ್ತ್ರ ರಹಸ್ಯವನ್ನರಿತುಕೊಂಡರು. ತರ್ಕ, ವ್ಯಾಕರಣ, ಸಾಂಖ್ಯ, ಯೋಗ, ಪೂರ್ವಮೀಮಾಂಸಾದಿ ಶಾಸ್ತ್ರಗಳಲ್ಲಿ ಶ್ರೀಶಂಕರಯತಿಗಳಿಗೆ ಆಳವಾದ ಪಾಂಡಿತ್ಯವಿರುವುದನ್ನು ಗಮನಿಸಿ ಶ್ರೀಗೋವಿಂದಯತಿಗಳು ವಿಸ್ಮಿತರಾದರು. ತಮ್ಮ ಶಿಷ್ಯನ ಅಪೂರ್ವವಾದ ಪಾಂಡಿತ್ಯವನ್ನೂ ಜ್ಞಾನಸಂಪಾದನೆಯಲ್ಲಿದ್ದ ಶ್ರದ್ಧೆಯನ್ನೂ ಕರ್ತವ್ಯ ನಿಷ್ಠೆಯನ್ನೂ ಗುರುಭಕ್ತಿಯನ್ನೂ ಕಂಡು ಅವರು ಆನಂದದಿಂದ ಹಿಗ್ಗುತ್ತಿದ್ದರು.

ಹೀಗಿರಲು ಒಂದು ದಿನ ಪವಾಡದಂತಹ ಒಂದು ಅದ್ಭುತ ಘಟನೆಯು ನಡೆಯಿತು. ಮಳೆಗಾಲದಲ್ಲಿ ವಿಪರೀತ ಮಳೆಯಾಗಿ ನರ್ಮದಾ ನದಿಯು ಉಕ್ಕಿ ಹರಿಯತೊಡಗಿತು. ಜಲಪ್ರವಾಹವು ಆಶ್ರಮದೊಳಗೆ ನುಗ್ಗಿತು. ಏನುಮಾಡಬೇಕೆಂದು ತೋರದೆ ಆಶ್ರಮದಲ್ಲಿದ್ದವರು ಹೆದರಿ ಕಂಗಾಲಾದರು. ಶ್ರೀಗೋವಿಂದಯತಿಗಳು ಸಮಾಧಿಯಲ್ಲಿ ಬಾಹ್ಯಪ್ರಜ್ಞೆಯಿಲ್ಲದೆ ಧ್ಯಾನಸ್ಥರಾಗಿ ಕುಳಿತಿದ್ದರು. ಪರಿಸ್ಥಿತಿಯು ಆತಂಕವನ್ನೊಡ್ಡಿದೆಯೆಂಬುದು ಶ್ರೀಶಂಕರರಿಗೆ ತಿಳಿಯಿತು. ಅವರು ತಮ್ಮ ಕಮಂಡಲುವನ್ನು ಅಭಿಮಂತ್ರಿಸಿ ನರ್ಮದಾಪ್ರವಾಹಕ್ಕೆ ಎದುರಾಗಿ ಇಟ್ಟು ಧ್ಯಾನಸ್ಥರಾದರು. ಪ್ರವಾಹದಿಂದ ಬಂದ ನೀರೆಲ್ಲವೂ ಕಮಂಡಲುವಿನಲ್ಲಿ ನುಗ್ಗಿ ಅಡಗಿಹೋಯಿತು. ಆಶ್ರಮದಲ್ಲಿ ಶಾಂತಿ ನೆಲೆಸಿತು.

ಇತ್ತ ಶ್ರೀಗೋವಿಂದಯತಿಗಳು ಸಮಾಧಿಯಿಂದ ಎಚ್ಚೆತ್ತಮೇಲೆ ಆಶ್ರಮದಲ್ಲಿ ನಡೆದ ಈ ಸಂಗತಿಯೆಲ್ಲವನ್ನೂ ವಿಚಾರಿಸಿ ತಿಳಿದರು. ಅವರು ಮನಸ್ಸಿನಲ್ಲಿಯೇ "ಈ ಯತಿಯು ಸಾಮಾನ್ಯನಲ್ಲ. ಯೋಗಸಿದ್ಧನೇ ಹೌದು. ಇಷ್ಟು ಮಹಿಮಾನ್ವಿತನೂ ತೇಜಸ್ವಿಯೂ ಆದ ಶಿಷ್ಯನನ್ನು ನಾನು ಕಾಣಲೇ ಇಲ್ಲ" ಎಂದುಕೊಂಡು ಸಂತುಷ್ಟರಾದರು. ಅನಂತರ ಶ್ರೀಶಂಕರರನ್ನು ಪ್ರತ್ಯೇಕವಾಗಿ ಕರೆಸಿ ಏಕಾಂತದಲ್ಲಿ ಹೀಗೆಂದರು - "ವತ್ಸ - ಶಂಕರ, ನೀನೀಗ ದೊಡ್ಡ ವಿದ್ವಾಂಸನಾಗಿದ್ದೀಯೆ. ಇನ್ನೂ ಅಧಿಕವಾಗಿ ನನ್ನಿಂದ ಕಲಿಯಬೇಕಾದ್ದೇನೂ ಇಲ್ಲ. ನಿನ್ನಿಂದ ಇನ್ನು ಒಂದು ದೊಡ್ಡ ಕಾರ್ಯವಾಗಬೇಕಾಗಿದೆ. ಈ ಭರತಖಂಡದಲ್ಲಿ ವೈದಿಕ ಮತಕ್ಕೆ ಯಾವ ದುರ್ಗತಿಯೊದಗಿದೆಯೆಂಬುದನ್ನು ನೋಡು. ವೇದವಿರುದ್ಧವಾದ ಹಲವಾರು ಮತಗಳು ವಿಜೃಂಭಿಸುತ್ತಿವೆ. ಅವೇ ವೇದಸಂಮತವಾದವೆಂದೂ ಆ ಜನರು ಬೋಧಿಸುತ್ತಿದ್ದಾರೆ. ಅವುಗಳಲ್ಲಿ ಕೆಲವು ಅರ್ಧಸತ್ಯ. ಕೆಲವು ಸಂಪೂರ್ಣವಾಗಿ ವೇದವಿರುದ್ಧ. ಇನ್ನು ಚಾರ್ವಾಕರೆಂಬ ನಾಸ್ತಿಕರ ಸಮೂಹವೊಂದು ಬೆಳೆಯುತ್ತಿದೆ. 'ದೇವರಿಲ್ಲ, ಪರಲೋಕವಿಲ್ಲ, ಪುನರ್ಜನ್ಮವಿಲ್ಲ. ಧರ್ಮ, ಅಧರ್ಮ ಎಂಬಿವು ವೈದಿಕರ ಕಲ್ಪನೆಗಳು' ಎಂದು ಘೋಷಿಸುತ್ತ ವಾಕ್‌ಚಾತುರ್ಯದಿಂದ ಪ್ರಜೆಗಳನ್ನು ಅಡ್ಡದಾರಿಗೆ ಈ ಚಾರ್ವಾಕರು ಎಳೆಯುತ್ತಿದ್ದಾರೆ. ಈ ಎಲ್ಲಮತಗಳಲ್ಲಿರುವ ತಪ್ಪುಗಳನ್ನು ತೋರಿಸಿ ಸರ್ವಧರ್ಮಸಮನ್ವಯವಿರುವ ಒಂದು ಮಾರ್ಗವನ್ನು ಇವರಿಗೆ ತಿಳಿಸಿ ಕೊಡಬೇಕು". ಸರ್ವಧರ್ಮಸಮನ್ವಯವಾಗುವುದು ವೇದೋಕ್ತವಾದ ಸಿದ್ಧಾಂತದಲ್ಲಿಯೇ. ಉಪನಿಷತ್ತುಗಳು ಸಾರುವ ಅದ್ವೈತತತ್ತ್ವವೇ ಅದು.

"ಶಂಕರ, ನೀನು ತರುಣನಾಗಿದ್ದೀಯೆ. ಬುದ್ಧಿಶಾಲಿಯೂ ಸಮರ್ಥನೂ ಆಗಿದ್ದೀಯೆ. ಈ ಸಮನ್ವಯ ಕಾರ್ಯದಲ್ಲಿ ನೀನು ತೊಡಗಬೇಕೆಂದು ನನ್ನ ಆಶಯ. ಉಪನಿಷತ್ತು, ಬ್ರಹ್ಮಸೂತ್ರ, ಭಗವದ್ಗೀತೆ - ಈ ಪ್ರಸ್ಥಾನತ್ರಯಕ್ಕೆ ನೀನು ವಿಸ್ತಾರವಾದ ಭಾಷ್ಯಗಳನ್ನು ರಚಿಸು ಪರಂಪರೆಯಿಂದ ಬಂದ ವೈದಿಕ ಸಿದ್ಧಾಂತವನ್ನು ರಕ್ಷಿಸುವ ಕಾರ್ಯವನ್ನು ನೀನು ಮಾಡದಿದ್ದರೆ, ಬೇರೆ ಯಾರಿಗೆ ಇದು ಸಾಧ್ಯವಾದೀತು? ನಾನಾ ಮತಗಳ ಹಾವಳಿಯಿಂದ ಭಾರತದೇಶವೇ ಛಿದ್ರವಾಗುತ್ತಿದೆ. ಸರ್ವಧರ್ಮಸಮನ್ವಯವಾದರೆ ಈ ದೇಶವು ಏಕರಾಷ್ಟ್ರವಾಗಿ ಉಳಿದೀತು. ಈ ಕಾರ್ಯಗಳನ್ನು ಸಾಧಿಸಲು ನಿನಗೆ ಕಾಶೀಕ್ಷೇತ್ರವೇ ಉತ್ತಮವಾದ ಸ್ಥಳ" ಎಂದರು.

ಶ್ರೀಶಂಕರಯತಿಗಳು ಇದೆಲ್ಲವನ್ನೂ ಏಕಾಗ್ರತೆಯಿಂದ ಆಲಿಸುತ್ತಿದ್ದರು. ಗುರುಗಳು ಶಿಷ್ಯರಾದ ತಮ್ಮಲ್ಲಿ ತೋರಿಸಿದ ವಾತ್ಸಲ್ಯ ಕಾರುಣ್ಯಗಳನ್ನೂ ಆದರ ವಿಶ್ವಾಸಗಳನ್ನೂ ಕಂಡು ಶ್ರೀಶಂಕರರ ಕಣ್ಣಲ್ಲಿ ನೀರು ತುಂಬಿತು. ಅವರು ಕೈ ಮುಗಿದು ಕೊಂಡು ತಮ್ಮ ಗುರುಗಳಿಗೆ ಮೂರು ಸಲ ಪ್ರದಕ್ಷಿಣೆಯನ್ನು ಮಾಡಿ ಅವರ ಪಾದಗಳಿಗೆ ಅಡ್ಡ ಬಿದ್ದು ನಮಸ್ಕರಿಸಿದರು. ಶ್ರೀ ಗೋವಿಂದಭಗವತ್ಪಾದರು ತಮ್ಮ ಪ್ರೀತಿಯ ಶಿಷ್ಯನನ್ನು ನೋಡುತ್ತ, ಅಭಯಹಸ್ತವನ್ನು ನೀಡಿ "ಶಂಕರ, ಪರಮೇಶ್ವರನು ನಿನಗೆ ಮಂಗಳವನ್ನೀಯಲಿ. ನನ್ನ ಗುರುಗಳ ಆಶೀರ್ವಾದಗಳು ನಿನ್ನ ಮೇಲಿರಲಿ. ನಿನಗೆ ಸರ್ವವಿಧದಲ್ಲಿಯೂ ಮಂಗಳವಾಗಲೆಂದು ನಾನು ಹಾರೈಸುತ್ತೇನೆ. ವತ್ಸ, ಶುಭಮಸ್ತು" ಎಂದು ನುಡಿದರು. ಶ್ರೀಶಂಕರರು ಮತ್ತೊಮ್ಮೆ ಗುರುಗಳಿಗೆ ನಮಸ್ಕರಿಸಿ ಆಶ್ರಮದಿಂದ ನಿರ್ಗಮಿಸಿದರು.

ಹೀಗೆ ಶ್ರೀ ಶಂಕರಯತಿಗಳು ಗುರುಗಳ ಆಶೀರ್ವಾದವನ್ನು ಪಡೆದು ಕಾಶಿಗೆ ಪ್ರಯಾಣ ಮಾಡಿದರು. ಕಾಶಿಗೆ ಹೋಗಿ ಗಂಗಾನದಿಯಲ್ಲಿ ಮಿಂದು ಶ್ರೀವಿಶ್ವನಾಥಸ್ವಾಮಿಯ ದರ್ಶನಮಾಡಿದರು. ಹಸಿವಿಗೆ ಭಿಕ್ಷಾನ್ನ, ಮಲಗುವುದಕ್ಕೆ ಮರದ ನೆರಳು. ಅವರೇ ಹೇಳಿದ '**ಕರತಲಭಿಕ್ಷಸ್ತರುತಲವಾಸಃ**' ಎಂದರೆ ಇದೇ. ಸ್ವಲ್ಪದಿನಗಳಲ್ಲಿ ಕಾಶಿಯ ವಿದ್ವಾಂಸರ ಪರಿಚಯವಾಯಿತು. ಶ್ರೀಶಂಕರಾಚಾರ್ಯರ ಅದ್ಭುತವಾದ ಶಾಸ್ತ್ರಪಾಂಡಿತ್ಯವನ್ನೂ ಬ್ರಹ್ಮತೇಜಸ್ಸನ್ನೂ ವಾಕ್‌ಶಕ್ತಿಯನ್ನೂ ಕಂಡು ಬೆರಗಾಗಿ ಕಾಶೀಕ್ಷೇತ್ರದ ವಿದ್ವಜ್ಜನರು, ಆಚಾರ್ಯರನ್ನು ತುಂಬ ಗೌರವದಿಂದ ಕಾಣತೊಡಗಿದರು. ಶ್ರೀಶಂಕರರ ಕೀರ್ತಿಯು ಎಲ್ಲೆಲ್ಲಿಯೂ ಹರಡಿತು. ದಕ್ಷಿಣದ

ಚೋಳದೇಶದಿಂದ ಸನಂದನನೆಂಬ ವಿದ್ವಾಂಸನು ಬಂದು ಶ್ರೀಶಂಕರರಿಂದ ಸಂನ್ಯಾಸವನ್ನು ಸ್ವೀಕರಿಸಿ **ಪದ್ಮಪಾದಾಚಾರ್ಯ**ನೆಂದು ಪ್ರಸಿದ್ಧನಾದನು. ಈ ದೇಶದ ಇನ್ನೂ ಕೆಲವು ಸ್ಥಳಗಳಿಂದ ಶಿಷ್ಯಜನರು ಬಂದು ಶ್ರೀಶಂಕರರ ಸೇವೆಯನ್ನು ಮಾಡುತ್ತ ಶಾಸ್ತ್ರಾಧ್ಯಯನದಲ್ಲಿ ತೊಡಗಿದರು.

**ಪರಮೇಶ್ವರನು ಅಂತ್ಯಜನ ವೇಷದಲ್ಲಿ**

ಒಂದು ದಿನ ಶ್ರೀಶಂಕರಾಚಾರ್ಯರು ಮಾಧ್ಯಾಹ್ನಿಕಸ್ನಾನಕ್ಕಾಗಿ ಶಿಷ್ಯರೊಡನೆ ಗಂಗಾನದಿಗೆ ಹೋಗುತ್ತಿದ್ದರು. ಅವರನ್ನು ಪರೀಕ್ಷಿಸುವುದಕ್ಕಾಗಿ ಕಾಶೀ ವಿಶ್ವನಾಥಸ್ವಾಮಿಯಾದ ಪರಮೇಶ್ವರನು ಅಂತ್ಯಜನ ವೇಷವನ್ನು ಧರಿಸಿ ನಾಲ್ಕು ನಾಯಿಗಳೊಡನೆ ಎದುರಿಗೆ ಬಂದನು. ಆಚಾರ್ಯರು 'ಅಯ್ಯಾ, ನಮಗೆ ಸ್ವಲ್ಪ ದಾರಿಯನ್ನು ಬಿಟ್ಟು ಪಕ್ಕಕ್ಕೆ ಸರಿದುಕೊ' ಎಂದರು. ಅಂತ್ಯಜನು ಮುಗುಳ್ನಗೆ ಬೀರುತ್ತ 'ಸ್ವಾಮಿ ! ಯಾರು ಸರಿಯಬೇಕು ? ದೇಹವೋ ? ಆತ್ಮವೋ? ದೇಹವು ಜಡ, ಅದು ಸರಿಯಲಾರದು. ಆತ್ಮವು ಸರ್ವವ್ಯಾಪಿಯಾದ ವಿಭು. ಅದು ಎಲ್ಲಿಗೆ ಸರಿದೀತು ?' ಎಂದನು. ಈ ಮಾತನ್ನು ಕೇಳಿ ವಿಸ್ಮಿತರಾದ ಶ್ರೀಶಂಕರಾಚಾರ್ಯರು ಈತನು ಬ್ರಹ್ಮಜ್ಞಾನಿಯೆಂದು ನಿಶ್ಚಯಿಸಿದರು. ಅಲ್ಲಿಯೇ ಐದು ಪದ್ಯಗಳನ್ನು ರಚಿಸಿ ಹಾಡಿದರು. ಅದು ಮನೀಷಾಪಂಚಕವೆಂದು ಈಗಲೂ ಪ್ರಸಿದ್ಧವಾಗಿದೆ. ಪ್ರತಿಯೊಂದು ಪದ್ಯದ ಕಡೆಯ ಸಾಲಿನಲ್ಲಿ **'ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ'** ಎಂಬ ನುಡಿ ಬರುತ್ತದೆ. 'ಯಾವಾತನು ಈ ಪ್ರಕಾರದಲ್ಲಿ ಬ್ರಹ್ಮಜ್ಞಾನಿಯಾಗಿದ್ದಾನೋ ಆತನು ಅಂತ್ಯಜನಾಗಿರಲಿ ದ್ವಿಜನಾಗಿರಲಿ, ನನ್ನ ಗುರುವೆಂದು ತಿಳಿಯುತ್ತೇನೆ' ಎಂದು ಅದರ ಅರ್ಥ (ಮನೀಷಾ = ಬುದ್ಧಿ, ಭಾವನೆ). ಒಡನೆಯೇ ಅಂತ್ಯಜನ ವೇಷವನ್ನು ಧರಿಸಿ ಬಂದಿದ್ದ ವಿಶ್ವನಾಥಸ್ವಾಮಿಯು ತನ್ನ ದಿವ್ಯರೂಪವನ್ನು ಆಚಾರ್ಯರಿಗೆ ತೋರಿಸಿ, ನಾಯಿಗಳೊಡನೆ ಅಂತರ್ಧಾನ ಹೊಂದಿದನು. ನನ್ನ ಮುಂದಿನ ಕಾರ್ಯಗಳಿಗೆ ಪರಮಾತ್ಮನು ಅನುಗ್ರಹಿಸಿದನೆಂದು ಭಾವಿಸಿ ಆಚಾರ್ಯರು ಸಂತೋಷಿಸಿದರು.

ಅನಂತರ ಶ್ರೀಶಂಕರಾಚಾರ್ಯರು ಶಿಷ್ಯರೊಡನೆ ಬದರಿಕಾಶ್ರಮಕ್ಕೆ ತೆರಳಿ, ಆ ಪವಿತ್ರಕ್ಷೇತ್ರದಲ್ಲಿ ಕೆಲವು ದಿನಗಳ ವರೆಗೆ ತಪೋನಿಷ್ಠರಾದರು. ಆಮೇಲೆ ತಮ್ಮ ಗುರುಗಳು ಆದೇಶಿಸಿದಂತೆ ಬ್ರಹ್ಮಸೂತ್ರಗಳಿಗೆ ವಿಸ್ತಾರವಾದ ಭಾಷ್ಯವನ್ನು

ರಚಿಸಿದರು. ಬ್ರಹ್ಮಸೂತ್ರಗಳಿಗೆ ಶಾರೀರಕ ಸೂತ್ರಗಳೆಂದು ಇನ್ನೊಂದು ಹೆಸರಿದೆ. ಆ ಸೂತ್ರಗಳನ್ನು ಬಾದರಾಯಣಾಚಾರ್ಯರು ಬರೆದರೆಂದು ಪ್ರಸಿದ್ಧವಾಗಿದೆ. ಬಾದರಾಯಣರೇ ವ್ಯಾಸಮುನಿಗಳೆಂದು ಹೇಳುತ್ತಾರೆ. ಈ ಬ್ರಹ್ಮಸೂತ್ರಗಳನ್ನು ವೇದಾಂತ ಸೂತ್ರಗಳೆಂದೂ ಹೇಳುವುದುಂಟು. ವೇದಾಂತವೆಂದರೆ ಉಪನಿಷತ್ತು. ಉಪನಿಷತ್ತುಗಳಲ್ಲಿ ಕೆಲವು ಕಡೆ ಪರಸ್ಪರವಿರೋಧವಿದ್ದಂತೆ ಕಾಣುವ ಮಾತುಗಳಿವೆ. ಅವುಗಳಲ್ಲಿ ವಿರೋಧವೇನೂ ಇಲ್ಲವೆಂದೂ ಆ ಮಾತುಗಳ ತಾತ್ಪರ್ಯವೇ ಬೇರೆ ಎಂಬುದನ್ನು ಹೇಳಿ ಆ ವಾಕ್ಯಗಳಿಗೆ ಸಮನ್ವಯವನ್ನು ತೋರಿಸುವುದು ಈ ಸೂತ್ರಗಳ ಉದ್ದೇಶ. ಅಲ್ಲದೆ ಸಾಂಖ್ಯರು, ತಾರ್ಕಿಕರು, ಪೂರ್ವಮೀಮಾಂಸಕರು, ಮುಂತಾದವರ ಮತಗಳಲ್ಲಿ ಹಾಗೂ ಕೆಲವು ಅವೈದಿಕಸಿದ್ಧಾಂತಗಳಲ್ಲಿ ದೋಷಗಳನ್ನು ತೋರಿಸಿ, ಉಪನಿಷತ್ತುಗಳ ಸಿದ್ಧಾಂತವೇ ಯುಕ್ತವಾದದ್ದೆಂದು ಈ ಸೂತ್ರಗಳು ಪ್ರತಿಪಾದಿಸುತ್ತವೆ.

ಈ ಸೂತ್ರಗಳಿಗೆ ಅರ್ಥಹೇಳುವುದು ಬಹಳ ಕಷ್ಟ. ಒಂದೊಂದು ಸೂತ್ರದಲ್ಲಿ ೨-೩ ಶಬ್ದಗಳು ಮಾತ್ರ ಇದ್ದು ಬಹಳ ಸಂಕ್ಷಿಪ್ತವಾಗಿರುವುದರಿಂದ ಅರ್ಥವೇನೆಂದು ಗ್ರಹಿಸುವುದು ಎಲ್ಲರಿಗೂ ಸಾಧ್ಯವಿಲ್ಲ. ಗುರುಮುಖದಿಂದ ಪರಂಪರೆಯಾಗಿ ಅಭ್ಯಾಸಮಾಡಿದವರಿಗೆ ಮಾತ್ರ ಸೂತ್ರಾರ್ಥವನ್ನು ತಿಳಿಯಲು ಸಾಧ್ಯವಾಗುತ್ತದೆ. ಈ ಸೂತ್ರಗಳಲ್ಲಿ ಹೇಳಿರುವುದೇ ಉಪನಿಷತ್ತುಗಳ ಸಿದ್ಧಾಂತವೆಂದೂ ಇದೇ ವೇದಾಂತದರ್ಶನವೆಂದೂ ಪ್ರಖ್ಯಾತವಾಗಿದೆ. ಭಗವದ್ಗೀತೆಯಲ್ಲಿಯೂ ಉಪನಿಷತ್ತುಗಳ ಸಿದ್ಧಾಂತವೇ ಸುಲಭರೀತಿಯಲ್ಲಿ ಇನ್ನೊಂದು ಕ್ರಮದಿಂದ ವರ್ಣಿತವಾಗಿದೆ.

ಬ್ರಹ್ಮಸೂತ್ರಭಾಷ್ಯವನ್ನೋದಿ ಬದರಿಕಾಶ್ರಮದಲ್ಲಿದ್ದ ವಿದ್ವಾಂಸರಾದ ತಪಸ್ವಿಗಳಿಗೆ ಆನಂದವಾಯಿತು. ಭಾಷ್ಯದ ಶೈಲಿ, ಬಳಸಿದ ಯುಕ್ತಿಗಳು, ದೃಷ್ಟಾಂತಗಳು, ಸಾಂಖ್ಯಾದಿಮತಗಳಲ್ಲಿರುವ ದೋಷಗಳನ್ನು ಎತ್ತಿ ತೋರಿಸುವ ವಿಧಾನ, ವೇದಾಂತಸಿದ್ಧಾಂತದಲ್ಲಿ ಯಾವ ದೋಷವೂ ಇಲ್ಲವೆಂದು ಪ್ರತಿಪಾದಿಸುವ ರೀತಿ, ಯಾವ ಸಂದೇಹವೂ ಉಳಿಯದಂತೆ ಆ ಸಿದ್ಧಾಂತವನ್ನು ವಿವರಿಸುವ ವಿಧಾನ - ಮುಂತಾದ ವಿಷಯಗಳು ಆ ವಿದ್ವಾಂಸರನ್ನು ಆಕರ್ಷಿಸಿದವು. ಈ ತರುಣಯತಿಯನ್ನು ಮುಕ್ತಕಂಠದಿಂದ ಹೊಗಳಿದರು. ಇದುವರೆಗೆ ಅಂತಹ

ಅರ್ಥವತ್ತಾದ ಸರ್ವೋತ್ತಮಭಾಷ್ಯವನ್ನು ಯಾರೂ ರಚಿಸಲಿಲ್ಲವೆಂದು ಪ್ರಶಂಸಿಸಿದರು. ಅಂತೆಯೇ ಉಪನಿಷತ್ತುಗಳಿಗೂ ಭಗವದ್ಗೀತೆಗೂ ಭಾಷ್ಯಗಳನ್ನು ರಚಿಸಿ ಶ್ರೀಶಂಕರರು ಬದರಿಯಲ್ಲಿದ್ದ ಎಲ್ಲ ವಿದ್ವಾಂಸರಾದ ತಪಸ್ವಿಗಳ ಮೆಚ್ಚುಗೆಗೆ ಪಾತ್ರರಾದರು. ಅವರೆಲ್ಲರ ಪ್ರಶಂಸೆಯನ್ನೂ ಕೇಳಿದ ಶ್ರೀಶಂಕರಾಚಾರ್ಯರಿಗೆ ತಾವು ಬರೆದಿದ್ದು ಸರಿಯಾಗಿದೆಯೆಂಬ ನಂಬಿಕೆ ಹುಟ್ಟಿತು. ಅನಂತರ ಆ ಋಷಿಗಳನ್ನು ಬೀಳ್ಕೊಂಡು ಶ್ರೀಶಂಕರರು ಶಿಷ್ಯಸಮೇತರಾಗಿ ಮತ್ತೆ ಕಾಶೀಕ್ಷೇತ್ರಕ್ಕೆ ಆಗಮಿಸಿದರು.

## ವೇದವ್ಯಾಸದರ್ಶನ

ಕಾಶಿಯಲ್ಲಿ ಆಚಾರ್ಯರ ಕೀರ್ತಿಯು ಬೆಳದಿಂಗಳಿನಂತೆ ಎಲ್ಲೆಲ್ಲಿಯೂ ಹರಡಿತು. ಕಾಶಿಯ ವಿದ್ವಾಂಸರು ಆಚಾರ್ಯರ ಬಳಿಗೆ ಬಂದು ವೇದಾಂತಾದಿಶಾಸ್ತ್ರಗಳಲ್ಲಿ ಚರ್ಚೆಯನ್ನು ನಡೆಸುತ್ತಿದ್ದರು. ೧೬-೧೭ ವರ್ಷವಯಸ್ಸಿನ ಈ ತರುಣಯತಿಯ ಬುದ್ಧಿವೈಭವವನ್ನು ಕಂಡು ಅವರೆಲ್ಲರೂ ಬೆರಗಾಗಿ, ಶಾಸ್ತ್ರವಿಷಯಗಳಲ್ಲಿದ್ದ ತಮ್ಮ ಸಂದೇಹಗಳನ್ನು ಪರಿಹರಿಸಿಕೊಳ್ಳುತ್ತಿದ್ದರು. ಆಚಾರ್ಯರ ಭಾಷ್ಯಗ್ರಂಥಗಳನ್ನು ತಾಳೆ ಪತ್ರಗಳಲ್ಲಿ ಬರೆದು ಕೊಂಡು ಬರುತ್ತಿದ್ದ ತಮ್ಮ ಶಿಷ್ಯರಿಗೆ ಆಚಾರ್ಯರು ಪಾಠಮಾಡ ತೊಡಗಿದರು.

ಶ್ರೀಶಂಕರಾಚಾರ್ಯರು ಪ್ರತಿದಿನವೂ ಪ್ರಾತಃಕಾಲದಲ್ಲಿ ಗಂಗಾನದೀತೀರದಲ್ಲಿ ತಮ್ಮ ಶಿಷ್ಯರಿಗೆ ಭಾಷ್ಯಾರ್ಥವನ್ನು ವಿವರಿಸಿ ತಿಳಿಸುತ್ತಿದ್ದರು. ಒಂದು ದಿನ ಬ್ರಹ್ಮಸೂತ್ರಗಳ ಭಾಷ್ಯವನ್ನು ಪಾಠ ಮಾಡುತ್ತಿರುವಾಗ ಒಬ್ಬ ವೃದ್ಧನು ಬಂದು ಆಚಾರ್ಯರ ಪಾಠಕ್ರಮವನ್ನು ಕೇಳುತ್ತ ಕುಳಿತನು. ಆಚಾರ್ಯರು ಪಾಠಮಾಡುವ ಕ್ರಮವನ್ನು ನೋಡಿ ಆ ವೃದ್ಧನಿಗೆ ತುಂಬ ಮೆಚ್ಚುಗೆಯಾಯಿತು. ಅವರು ವಿವರಿಸುತ್ತಿದ್ದ ಒಂದು ಸೂತ್ರದ ವಿಷಯದಲ್ಲಿ ತನ್ನ ಶಂಕೆಯೊಂದನ್ನು ಮುಂದಿಟ್ಟನು. ಆಚಾರ್ಯರು ಸಮರ್ಥವಾದ ರೀತಿಯಲ್ಲಿ ಉತ್ತರ ಹೇಳಿದರು. ಅದರಮೇಲೆ ಆ ವೃದ್ಧನು ಮತ್ತೆ ಆಕ್ಷೇಪವನ್ನೆತ್ತಿದನು. ಅದಕ್ಕೂ ಸರಿಯಾದ ಉತ್ತರವನ್ನು ಶ್ರೀಶಂಕರರು ಹೇಳಿದರು. ಮತ್ತೆ ಇನ್ನೊಂದು ಶಂಕೆಯನ್ನು ಆತನು ಎತ್ತಿದನು. ಹೀಗೆ ಆತನು ಎತ್ತಿದ ಎಲ್ಲ ಆಕ್ಷೇಪಗಳಿಗೂ ಆಚಾರ್ಯರು ಸರಿಯಾದ ಉತ್ತರಗಳನ್ನಿತ್ತರು. ವೃದ್ಧನು ಥಟ್ಟನೆ ಎದ್ದುನಿಂತನು. ಆತನ ರೂಪವೇ ಬೇರೆಯಾಗಿತ್ತು.

ಭವ್ಯವಾದ ಎತ್ತರದ ಆಕೃತಿ, ತೇಜಸ್ವಿಯಾದ ಮುಖ. ಸ್ವಲ್ಪ ಹೊಂಬಣ್ಣದ ಗಡ್ಡ, ಮೀಸೆ, ಜಟೆಗಳು ! ಹೊದೆದದ್ದು ಕೃಷ್ಣಾಜಿನ. ಒಂದು ಕೈಯಲ್ಲಿ ದೀರ್ಘವಾದದಂಡ. ಇನ್ನೊಂದು ಕೈಯಲ್ಲಿ ಕಮಂಡಲು. ಎದುರಿಗೆ ನಿಂತವರು ಸಾಕ್ಷಾತ್ ವೇದವ್ಯಾಸರು ! ಒಡನೆಯೇ ಶ್ರೀಶಂಕರಾಚಾರ್ಯರು ಶಿಷ್ಯರೊಡನೆ ಎದ್ದು ನಿಂತು ಭಕ್ತಿಯಿಂದ ನಮಸ್ಕರಿಸಿ, ವೇದವ್ಯಾಸರನ್ನೇ ಆಶ್ಚರ್ಯದಿಂದ ನೋಡುತ್ತ ನಿಂತರು.

ವೇದವ್ಯಾಸಮುನಿಗಳು 'ವತ್ಸ-ಶಂಕರ, ನಾನು ರಚಿಸಿದ ಈ ಬ್ರಹ್ಮಸೂತ್ರಗಳ ಅರ್ಥವನ್ನು ನೀನು ಸರಿಯಾಗಿ ತಿಳಿದುಕೊಂಡಿದ್ದೀಯೆ. ಇದರ ಮೇಲೆ ಹುಟ್ಟುವ ಆಕ್ಷೇಪಗಳಿಗೆ ಸಮರ್ಥವಾದ ಉತ್ತರಗಳನ್ನು ಹೇಳಿದ್ದೀಯೆ. ಉಪನಿಷತ್ತುಗಳ ಸಿದ್ಧಾಂತವನ್ನೇ ನಾನು ಈ ಸೂತ್ರಗಳಲ್ಲಿ ಪ್ರತಿಪಾದಿಸಿದ್ದೇನೆ. ಅದ್ವೈತವೇ ವೇದಾಂತದ ಸಿದ್ಧಾಂತ. ನೀನು ಇದನ್ನು ಲೋಕದಲ್ಲಿ ಪ್ರಚಾರ ಮಾಡು. ನಿನಗೆ ಮಂಗಳವಾಗಲಿ' ಎಂದು ಹೇಳಿ ಅಂತರ್ಧಾನ ಹೊಂದಿದರು. ಆಚಾರ್ಯರಿಗೆ ವೇದವ್ಯಾಸರನ್ನು ಕಂಡುದಕ್ಕಾಗಿ ಆಶ್ಚರ್ಯವೂ ಆಯಿತು, ತಾವು ಬರೆದಿದ್ದು ಸರಿಯಾಗಿದೆಯೆಂದು ಸಂತೋಷವೂ ಆಯಿತು.

## ಕುಮಾರಿಲಭಟ್ಟರೊಡನೆ ಭೇಟಿ

ಇಷ್ಟಾದ ಮೇಲೆ ತಮ್ಮ ಗ್ರಂಥಗಳನ್ನು ಲೋಕದಲ್ಲಿ ಪ್ರಸಾರ ಮಾಡಬೇಕೆಂದೂ ವೈದಿಕ ಸಿದ್ಧಾಂತವನ್ನು ಜನರಿಗೆ ಸರಿಯಾಗಿ ತಿಳಿಸಿಕೊಡಬೇಕೆಂದೂ ಆಚಾರ್ಯರು ನಿಶ್ಚಯಿಸಿದರು. ಶ್ರೇಷ್ಠರಾದ ವಿದ್ವಾಂಸರ ನೆರವು ಈ ಕಾರ್ಯಕ್ಕೆ ಆವಶ್ಯಕವೆನಿಸಿತು. ಆ ಕಾಲದಲ್ಲಿ ಕುಮಾರಿಲಭಟ್ಟರೆಂಬವರು ಬಹು ದೊಡ್ಡ ವಿದ್ವಾಂಸರೆಂದು ವಿಖ್ಯಾತರಾಗಿದ್ದರು. ಅವರು ಪೂರ್ವ ಮೀಮಾಂಸಾಶಾಸ್ತ್ರವನ್ನು ಬೋಧಿಸುತ್ತಿದ್ದರೂ ವೇದಾಂತವನ್ನು ಚೆನ್ನಾಗಿ ಬಲ್ಲವರಾಗಿದ್ದರು. ಕುಮಾರಿಲರು ಪ್ರಯಾಗದಲ್ಲಿದ್ದಾರೆಂಬ ಸುದ್ದಿಯನ್ನು ಕೇಳಿ, ಅವರ ದರ್ಶನಕ್ಕಾಗಿ ಶ್ರೀಶಂಕರರು ಪ್ರಯಾಗಕ್ಕೆ ತೆರಳಿದರು.

ಅನಿರೀಕ್ಷಿತವಾದ ಸಂದರ್ಭ ಒಂದು ಅಲ್ಲಿ ನಡೆದಿತ್ತು. ಕುಮಾರಿಲಭಟ್ಟರು ಬೌದ್ಧ ಮತವನ್ನು ಖಂಡಿಸಿದ್ದಾರೆ. ಖಂಡಿಸುವುದಕ್ಕೆ ಮೊದಲು ಬೌದ್ಧಮತದಲ್ಲಿ ಹೇಳಿರುವುದನ್ನೆಲ್ಲ ತಿಳಿದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಒಬ್ಬ ಬೌದ್ಧಗುರುವಿನ

ಶಿಷ್ಯನಾಗಿ ಸೇರಿಕೊಂಡು ಆತನಿಂದ ಬೌದ್ಧಮತದ ರಹಸ್ಯಗಳನ್ನು ತಿಳಿದುಕೊಂಡುಬಂದರು. ಅನಂತರ ಬೌದ್ಧಮತವನ್ನು ಖಂಡಿಸಿ ವೈದಿಕ ಮತವನ್ನು ಪ್ರಚಾರಮಾಡುತ್ತಿದ್ದರು. ಕೆಲವು ಕಾಲದ ಮೇಲೆ ಅವರಿಗೆ ಒಂದು ಚಿಂತೆ ಹುಟ್ಟಿತು. "ನಾನು ಬೌದ್ಧಮತವನ್ನು ದೂಷಿಸಿ ಗುರು ದ್ರೋಹಮಾಡಿದ್ದೇನೆ. ಗುರುದ್ರೋಹಕ್ಕೆ ಪ್ರಾಯಶ್ಚಿತ್ತವೇನು?" ಎಂದು. ಅವರು ಧರ್ಮಶಾಸ್ತ್ರವನ್ನು ಬಲ್ಲವರಾದ್ದರಿಂದ ತುಷಾಗ್ನಿಯಲ್ಲಿ ಪ್ರಾಣವನ್ನು ಬಿಡುವುದೇ ಪ್ರಾಯಶ್ಚಿತ್ತವೆಂದು ನಿರ್ಧರಿಸಿದರು. ತುಷ ಎಂದರೆ ಭತ್ತದ ಹೊಟ್ಟು. ಆ ಹೊಟ್ಟಿನ ರಾಶಿಗೆ ಬೆಂಕಿಯಿಟ್ಟು ನಡುವೆ ಕುಳಿತುಕೊಂಡು ನಿಧಾನವಾಗಿ ದೇಹವನ್ನು ಸುಡಿಸಿಕೊಂಡು ಪ್ರಾಣಬಿಡುವುದು! ಕುಮಾರಿಲರು ಧರ್ಮನಿಷ್ಠರಾದ್ದರಿಂದ ಸ್ವಲ್ಪವೂ ಹಿಂಜರಿಯದೆ ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕಾಗಿ ತುಷಾಗ್ನಿಯ ನಡುವೆ ಹೋಗಿ ಕುಳಿತರು. ಆ ಸಮಯದಲ್ಲಿ ಶ್ರೀಶಂಕರಾಚಾರ್ಯರು ಅಲ್ಲಿಗೆ ಬಂದರು.

ಅವರು ತಮ್ಮ ಭಾಷ್ಯವನ್ನು ಕುಮಾರಿಲರಿಗೆ ತೋರಿಸಿ ಅದಕ್ಕೆ ವ್ಯಾಖ್ಯಾನವನ್ನು ನಿಮ್ಮಿಂದ ಬರೆಸುವುದಕ್ಕಾಗಿ ಬಂದಿದ್ದೇನೆ ಎಂದು ನುಡಿದರು. ಕುಮಾರಿಲಭಟ್ಟರು ಆಚಾರ್ಯರ ಪಾಂಡಿತ್ಯವನ್ನೂ ಮಹಿಮೆಯನ್ನೂ ಕೇಳಿ ತಿಳಿದಿದ್ದರು. ಅವರು "ಪೂಜ್ಯರೆ, ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳುವುದಕ್ಕಾಗಿ ನಿರ್ಧರಿಸಿ ಈ ಪ್ರಕಾರದಲ್ಲಿ ಕುಳಿತುಬಿಟ್ಟಿದ್ದೇನೆ. ಈಗ ಏನು ಮಾಡಲೂ ಶಕ್ಯವಿಲ್ಲ. ಆದ್ದರಿಂದ ಒಂದು ದಾರಿಯನ್ನು ಹೇಳುತ್ತೇನೆ. ಮಾಹಿಷ್ಮತೀಪಟ್ಟಣದಲ್ಲಿ ವಿಶ್ವರೂಪನೆಂಬ ನನ್ನ ಶಿಷ್ಯನಿದ್ದಾನೆ. ಅವನು ಬಹುದೊಡ್ಡ ಪಂಡಿತ. ನನಗಿಂತ ಅವನೇನೂ ಕಡಿಮೆಯಿಲ್ಲ, ಅವನು ಕರ್ಮಠ. ಮೀಮಾಂಸಕ. ವೇದಮಂಡನ ಎಂದು ಅವನು ವಿಖ್ಯಾತನಾಗಿದ್ದಾನೆ. ನೀವು ಅವನ ಬಳಿಗೆ ಹೋಗಿ ವಾದದಲ್ಲಿ ಆತನನ್ನು ಜಯಿಸಿದರೆ ನಿಮ್ಮ ಉದ್ದೇಶ ಕೈಗೂಡುವುದು" ಎಂದು ಹೇಳಿದರು. ಆಚಾರ್ಯರು ಕುಮಾರಿಲರಿಗೆ ಶ್ರೇಯಸ್ಸಾಗಲೆಂದು ಹಾರೈಸಿ, ಶಿಷ್ಯಸಮೇತರಾಗಿ [೧]**ಮಾಹಿಷ್ಮತೀ**ಪಟ್ಟಣಕ್ಕೆ ತೆರಳಿದರು.

ಆ ಪಟ್ಟಣದಲ್ಲಿ ವಿಶ್ವರೂಪನು ಮಂಡನಮಿಶ್ರ ಎಂಬ ಗೌರವದ ಹೆಸರಿನಿಂದಲೇ ವಿಖ್ಯಾತನಾಗಿದ್ದನು. ಬಹಳ ಮಂದಿ ಶಿಷ್ಯರು ಆತನ

---

೧. ಮಾಹಿಷ್ಮತೀ - ಇದು ನರ್ಮದಾನದಿಯ ಬಲದಡದಲ್ಲಿದ್ದ ನಗರ. ಅದು ಕಾರ್ತವೀರ್ಯನ ರಾಜಧಾನಿಯಾಗಿತ್ತು.

ಸೇವೆಮಾಡಿಕೊಂಡಿದ್ದರು. ಆಚಾರ್ಯರು ಆತನ ನಿವಾಸಕ್ಕೆ ಹೋದಾಗ ಮಂಡನ ಮಿಶ್ರನೇ ಭಿಕ್ಷೆಯನ್ನು ನೀಡಲು ಬಂದನು. ಶ್ರೀಶಂಕರರು "ನನಗೆ ವಾದಭಿಕ್ಷೆ ಬೇಕು!" ಎಂದರು. ಆ ಪಂಡಿತನು ಚಕಿತನಾಗಿ ಆಚಾರ್ಯರು ಯಾರೆಂಬುದನ್ನು ವಿಚಾರಿಸಿ ತಿಳಿದುಕೊಂಡು, ಮಾರನೆಯದಿನವೇ ತನ್ನ ಮನೆಯಲ್ಲಿ ಪಂಡಿತ ಸಭೆಯನ್ನೇರ್ಪಡಿಸಿ ವಾದಮಾಡಲು ಸಿದ್ಧನಾದನು. ಅವನಿಗೆ ಉಭಯಭಾರತೀ ಎಂಬ ಪತ್ನಿಯಿದ್ದಳು. ಅವಳೂ ತನ್ನ ಪತಿಯಂತೆ ವಿಖ್ಯಾತಳಾದ ವಿದುಷಿಯಾಗಿದ್ದಳು. ಅವಳು ವಾದದಲ್ಲಿ ಮಧ್ಯಸ್ಥಳಾಗಿರಬೇಕೆಂದು ಒಪ್ಪಂದವಾಯಿತು.

ಮಾರನೆಯ ದಿನ ಸಭೆ ಸೇರಿತು. ವಿದ್ವಾಂಸರೂ ಪೌರರೂ ಕುತೂಹಲದಿಂದ ಬಂದು ನೆರೆದರು. ವಿಶ್ವರೂಪನು ವಾದಕ್ಕೆ ಸಜ್ಜಾಗಿ ಬಂದು ತನ್ನ ಸ್ಥಾನದಲ್ಲಿ ಕುಳಿತನು. ಉಭಯಭಾರತಿಯು ಮಧ್ಯಸ್ಥಳಾಗಿ ಬಂದಳು. ಶ್ರೀಶಂಕರಾಚಾರ್ಯರು ತೇಜಸ್ಸಿನಿಂದ ಜ್ವಲಿಸುತ್ತ ಸಭೆಗೆ ಬಂದು ತಮ್ಮ ಆಸನದಲ್ಲಿ ಮಂಡಿಸಿದರು. ಸಭೆಯಲ್ಲಿದ್ದವರೆಲ್ಲರೂ ತೇಜಸ್ವಿಯಾದ ಈ ತರುಣಯತಿಯನ್ನು ನೋಡಿ ಇವರು ಯಾರಿರಬಹುದೆಂದು ವಿಸ್ಮಿತರಾದರು.

ಇಂತಹ ವಾದದಲ್ಲಿ ವಾದಿ ಪ್ರತಿವಾದಿಗಳಿಬ್ಬರೂ ಒಂದು ಪ್ರತಿಜ್ಞೆಯನ್ನು ಮಾಡುವ ಪದ್ಧತಿಯಿತ್ತು. ಆಚಾರ್ಯರು "ಅದ್ವೈತವಾದವೇ ನನ್ನ ಪಕ್ಷ. ಜ್ಞಾನದಿಂದಲೇ ಮೋಕ್ಷ ಎಂಬುದು ನನ್ನ ಪ್ರತಿಜ್ಞೆ. ನಾನು ವಾದದಲ್ಲಿ ಸೋತರೆ ಇನ್ನು ಮುಂದೆ ವೇದಾಂತ ಪ್ರಚಾರವನ್ನು ಬಿಟ್ಟು ಬಿಡುತ್ತೇನೆ" ಎಂದರು. ವಿಶ್ವರೂಪನು "ವೇದೋಕ್ತವಾದ ಕರ್ಮಗಳನ್ನು ಮಾಡುವುದೇ ಶ್ರೇಯಸ್ಕರ. ಕರ್ಮಾಚರಣೆಯಿಂದ ಸ್ವರ್ಗವು ಪ್ರಾಪ್ತವಾಗುತ್ತದೆ. ಅದೇ ಮೋಕ್ಷ. ಸಂನ್ಯಾಸವು ಸರಿಯಾದ ಮಾರ್ಗವಲ್ಲ. ನಾನು ವಾದದಲ್ಲಿ ಸೋತರೆ ಸಂನ್ಯಾಸವನ್ನು ಸ್ವೀಕರಿಸಿ ನಿಮ್ಮ ಶಿಷ್ಯನಾಗುತ್ತೇನೆ ! ಇದೇ ನನ್ನ ಪ್ರತಿಜ್ಞೆ" ಎಂದನು.

ಆಚಾರ್ಯರು ವಾದಿ, ಮಂಡನಮಿಶ್ರನು ಪ್ರತಿವಾದಿ. ವಾದವು ಆರಂಭವಾಯಿತು. ಬೆಳೆಯಿತು. ಇಬ್ಬರ ಪಕ್ಷಗಳಲ್ಲಿಯೂ ಅವರಿಗೆ ತಕ್ಕ ಯುಕ್ತಿಗಳೂ ಆಧಾರಗಳೂ ಇದ್ದವು. ಅವನ್ನು ಹೇಳುತ್ತ ಹೇಳುತ್ತ ಹೋದಂತೆ ವಾದಶೈಲಿಯು ಅತ್ಯಂತ ಪ್ರೌಢವಾಯಿತು. ಇಬ್ಬರ ವಾಗ್ವೈಖರಿಯನ್ನೂ ನೋಡಿ ಸಭೆಯಲ್ಲಿದ್ದ ವಿದ್ವಾಂಸರು ತಲೆದೂಗುತ್ತಿದ್ದರು! ಅಷ್ಟು ಗಂಭೀರವಾದ ವಾದ

ಶೈಲಿಯನ್ನು ಆ ಪಂಡಿತರು ಕೇಳಿಯೇ ಇರಲಿಲ್ಲ. ಎರಡನೆಯ ದಿನ ಮತ್ತೆ ಸಭೆಸೇರಿತು. ಇಬ್ಬರಿಗೂ ವಾದಗಳು ಯಶಸ್ವಿಯಾಗಿ ನಡೆದವು. ಯಾರೂ ಜಗ್ಗುತ್ತಿರಲಿಲ್ಲ. ಸಂಜೆಯವೇಳೆಗೆ ಮಂಡನಮಿಶ್ರನವಾದವು ಕುಸಿಯತೊಡಗಿತು. ನಡುನಡುವೆ ಆಚಾರ್ಯರ ಪ್ರಶ್ನೆಗೆ ಉತ್ತರ ಹೇಳುವುದು ತಡವಾಗುತ್ತಿತ್ತು. ಮೂರನೆಯ ದಿನ ವಾದವು ಆರಂಭವಾಯಿತು ಮಂಡನಮಿಶ್ರನು ಸೋತುಹೋದನು. ಅವನು ಸಪ್ಪೆ ಮೋರೆಯಿಂದ 'ಜಿತೋऽಸ್ಮಿ' - ನಾನು ಪರಾಜಿತನಾದೆ - ಸೋತೆನು ಎಂದನು. ಮಧ್ಯಸ್ಥಳಾದ ಭಾರತಿಯು ಒಪ್ಪಿದಳು. ಸದಸ್ಯರೆಲ್ಲರೂ ಈ ತರುಣಯತಿಯ ಅದ್ಭುತವಾದ ಪಾಂಡಿತ್ಯವನ್ನು ಕಂಡು ಬೆರಗಿನಿಂದ ಮೂಕರಾಗಿ ಹೋದರು !

ಉಭಯಭಾರತಿಯ ಮನಸ್ಸಿಗೆ ವ್ಯಥೆಯಾಯಿತು. "ತನ್ನ ಪತಿಯು ಸಂನ್ಯಾಸಿಯಾಗಿ ಹೊರಟು ಹೋಗುತ್ತಾನೆ" ಎಂಬ ಚಿಂತೆ ಕಾಡತೊಡಗಿತು. ಅವಳು ಧೈರ್ಯದಿಂದ ಆಚಾರ್ಯರೆದುರಿಗೆ ಬಂದು "ಮಹಾತ್ಮರೆ, ನಾನು ಮಂಡನಪಂಡಿತರ ಪತ್ನಿ. ಅವರ ಅರ್ಧಾಂಗಿಯಾದ್ದರಿಂದ ನನ್ನನ್ನೂ ವಾದದಲ್ಲಿ ಸೋಲಿಸಿದ ಹೊರತು, ನನ್ನ ಪತಿಯು ಸೋತಂತೆ ಆಗುವುದಿಲ್ಲ! ನಾನು ವಾದಕ್ಕೆ ಸಿದ್ಧಳಾಗಿದ್ದೇನೆ !" ಎಂದಳು. ಆಚಾರ್ಯರು ಒಪ್ಪಿದರು. ಆಚಾರ್ಯರಿಗೂ ಉಭಯಭಾರತಿಗೂ ಬಹಳ ಹೊತ್ತು ವಾದ ನಡೆಯಿತು. ಉಭಯಭಾರತಿಯೂ ಸೋತು ಬೆವರಿದಳು. ಆ ಧೀರಳು ಎದ್ದುನಿಂತು "ಮಹಾತ್ಮರೆ, ನೀವು ಸಾಮಾನ್ಯಯತಿಗಳಲ್ಲ. ಸಾಕ್ಷಾತ್ ಶ್ರೀಶಂಕರನ ಅವತಾರಪುರುಷರಾಗಿದ್ದೀರಿ. ಇಷ್ಟು ಅಗಾಧವಾದ ಪಾಂಡಿತ್ಯವನ್ನು ನಾವು ನೋಡಿರಲಿಲ್ಲ, ಕೇಳಿರಲಿಲ್ಲ. ನೀವು **ಜಗದ್ಗುರುಗಳು**" ಎಂದು ನುಡಿದು ಆಚಾರ್ಯರ ಪಾದಗಳಿಗೆ ಸಾಷ್ಟಾಂಗ ಪ್ರಣಾಮ ಮಾಡಿದಳು. ಶ್ರೀಶಂಕರರು ಮುಗುಳ್ನಗೆ ಬೀರುತ್ತ ಅಭಯಹಸ್ತದಿಂದ ಆಶೀರ್ವದಿಸಿದರು. ಮಂಡನಮಿಶ್ರನು ಕೈಮುಗಿದುಕೊಂಡು "ಓ ಪೂಜ್ಯರೆ, ಈಗ ನನಗೆ ಸತ್ಯದ ಅರಿವಾಯಿತು. ನನ್ನ ಕಣ್ಣುಗಳನ್ನು ತೆರೆದು ಸತ್ಯವನ್ನು ಯಥಾರ್ಥವಾಗಿ ತೋರಿಸಿಕೊಟ್ಟಿದ್ದೀರಿ. ಇನ್ನು ನನಗೆ ಸಂಸಾರದಲ್ಲಿ ಆಸಕ್ತಿ ಇಲ್ಲ. ಎಲ್ಲರನ್ನೂ ಎಲ್ಲವನ್ನೂ ತೊರೆದು ನಿಮಗೆ ಶರಣಾಗಿದ್ದೇನೆ. ನನ್ನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಉದ್ಧರಿಸಬೇಕು" ಎಂದು ನುಡಿದು ಆಚಾರ್ಯರಿಗೆ ದೀರ್ಘದಂಡನಮಸ್ಕಾರ ಮಾಡಿದನು. ಶ್ರೀಶಂಕರಾಚಾರ್ಯರು

ಆತನನ್ನು ಶಿಷ್ಯನನ್ನಾಗಿ ಸ್ವೀಕರಿಸಿ ಸಂನ್ಯಾಸದೀಕ್ಷೆಯನ್ನಿತ್ತರು. ಮಂಡನಮಿಶ್ರನಿಗೆ 'ಶ್ರೀಸುರೇಶ್ವರ' ಎಂದು ದೀಕ್ಷಾನಾಮವನ್ನಿತ್ತರು. ಅವರೇ ಮುಂದೆ **ಶ್ರೀಸುರೇಶ್ವರಾಚಾರ್ಯ**ರೆಂದು ಪ್ರಸಿದ್ಧರಾದರು. ಪದ್ಮಪಾದಾಚಾರ್ಯರಾದ ಮೇಲೆ ಶಿಷ್ಯರಾದವರಲ್ಲಿ ಶ್ರೀಸುರೇಶ್ವರರೇ ಪ್ರಮುಖರಾದ ಎರಡನೆಯವರು.

## ಶ್ರೀಶೈಲಕ್ಕೆ ಪ್ರಯಾಣ, ಭೈರವನ ಪ್ರಸಂಗ

ಅನಂತರ ಶ್ರೀಶಂಕರಯತೀಶ್ವರರು ಮಾಹಿಷ್ಮತಿಯಿಂದ ಶ್ರೀಶೈಲಕ್ಕೆ ಶ್ರೀಸುರೇಶ್ವರಾದಿ ಶಿಷ್ಯರೊಡನೆ ಆಗಮಿಸಿದರು. ಪಾತಾಳಗಂಗೆಯಲ್ಲಿ ಸ್ನಾನಮಾಡಿ ಶ್ರೀಮಲ್ಲಿಕಾರ್ಜುನ ಸ್ವಾಮಿಯ ದರ್ಶನ ಮಾಡಿ ಸ್ತೋತ್ರಮಾಡಿದರು. ಸ್ತೋತ್ರಗಳು ಹಿಂದೆ ನಿರ್ಮಿತವಾದವಲ್ಲ. ಅಲ್ಲಲ್ಲಿ ಆಗಾಗ ಆಶುಕವನದಿಂದ ರಚಿಸಿ ಹಾಡುತ್ತಿದ್ದ ಶ್ಲೋಕಗಳವು. ಅವರು ಹೇಗೆ ಪಂಡಿತರಾಜರೋ ಹಾಗೆ ಕವೀಶ್ವರರು. ಪ್ರತಿಭಾಶಾಲಿಗಳಾದ ಮಹಾಕವಿಗಳು. ದೇವಸ್ಥಾನದ ಬಳಿ ಹರಿಯುತ್ತಿದ್ದ ಕೃಷ್ಣಾನದಿಯಲ್ಲಿ ಸ್ನಾನಮಾಡಿ ಭಗವಂತನನ್ನು ಭಜಿಸುತ್ತ ಶಿಷ್ಯರಿಗೆ ಪಾಠಹೇಳುತ್ತ ಸ್ವಲ್ಪದಿನಗಳನ್ನು ಕಳೆದರು. ಆಗ ಶ್ರೀಶೈಲದಲ್ಲಿ ಕ್ರೂರಸ್ವಭಾವದ ಕಾಪಾಲಿಕರು ನೆಲೆಸಿದ್ದರು. ಅವರು ಬಹಳ ದರ್ಪದಿಂದ ವಾದಮಾಡುವುದಕ್ಕಾಗಿ ಆಚಾರ್ಯರ ಎದುರಿಗೆ ಬಂದು ವಾದ ಮಾಡಿ ಸೋತು ಹೋದರು.

ಆ ಜನರು ಸೋತರೂ ಸುಮ್ಮನಿರುವವರಲ್ಲ. ಸೇಡುತೀರಿಸಿಕೊಳ್ಳಬೇಕೆಂಬ ಕೆಟ್ಟ ಬುದ್ಧಿ ಹುಟ್ಟಿತು. ಈ ಸಂನ್ಯಾಸಿ ಬದುಕಿದ್ದರೆ ನಮ್ಮ ಈ ಕಾಪಾಲಿಕಮತವು ಉಳಿಯುವುದಿಲ್ಲ - ಎಂದು ತೋರಿತು. ಆಗ ಒಂದು ಉಪಾಯವನ್ನು ಹೂಡಿದರು. ಅವರ ಮುಖಂಡನಾದ ಒಬ್ಬ ಭೈರವನು ಏಕಾಂತದಲ್ಲಿ ಕುಳಿತಿದ್ದ ಶ್ರೀಶಂಕರರ ಬಳಿಗೆ ಬಂದು ವಿನಯದಿಂದ ನಮಸ್ಕರಿಸಿ ಕುಳಿತುಕೊಂಡನು. ಆಚಾರ್ಯರು ಭೈರವನ ಕುಶಲವನ್ನು ವಿಚಾರಿಸಿದರು. ಆತನು ಕೈಮುಗಿದು ಕೊಂಡು "ಸ್ವಾಮಿ, ಗುರುಗಳೇ, ನೀವು ನನಗೊಂದು ಉಪಕಾರವನ್ನು ಮಾಡಬೇಕು" ಎಂದು ಅರಿಕೆಮಾಡಿದನು. ಆಚಾರ್ಯರು "ನನ್ನಿಂದ ಸಾಧ್ಯವಾಗತಕ್ಕದ್ದಾದರೆ ಅವಶ್ಯವಾಗಿ ಮಾಡುತ್ತೇನೆ. ಆದರೆ ನಮ್ಮ ಬಳಿ ಹಣವಿಲ್ಲ. ನಾವು ಭಿಕ್ಷೆ ಬೇಡಿ ಜೀವಿಸತಕ್ಕವರು" ಎಂದರು. ಭೈರವನು "ಸ್ವಾಮಿ, ನನಗೆ ಹಣವು ಬೇಕಾಗಿಲ್ಲ. ನಿಮ್ಮ ಬಳಿ ಇರುವ ಒಂದು ವಸ್ತು ಬೇಕಾಗಿದೆ" ಎಂದು ನುಡಿದನು. ಆಚಾರ್ಯರು "ಹಾಗಿದ್ದರೆ

ಅವಶ್ಯಕೊಡುತ್ತೇನೆ. ಏನು ಬೇಕು''? ಎಂದು ಕೇಳಿದರು. ಅದಕ್ಕೆ ಭೈರವನು ಹೀಗೆಂದನು. ''ಸ್ವಾಮಿ, ನಾನು ಬಹಳ ದಿನಗಳಿಂದ ಭೈರವನನ್ನು ಕುರಿತು ತಪಸ್ಸು ಮಾಡುತ್ತಿದ್ದೇನೆ. ಅದರ ಸಮಾಪ್ತಿಕಾಲದಲ್ಲಿ ಒಂದು ಹೋಮವನ್ನು ಆಚರಿಸಬೇಕಾಗುತ್ತದೆ. ಅಗ್ನಿಯಲ್ಲಿ ಪೂರ್ಣಾಹುತಿಗಾಗಿ ಒಬ್ಬ ಮಾನವನ ಶಿರಸ್ಸನ್ನು ಹೋಮ ಮಾಡಬೇಕು. ಆ ಶಿರಸ್ಸು ಒಬ್ಬ ಮಹಾರಾಜನದೋ ಅಥವಾ ಒಬ್ಬ ಯೋಗಿಯದೋ ಆಗಬೇಕು. ಯಾವನೋ ಒಬ್ಬ ಮನುಷ್ಯನ ತಲೆಯನ್ನು ಹೋಮಿಸಕೂಡದು. ಮಹಾರಾಜನ ತಲೆ ನನಗೆ ಹೇಗೆ ದೊರಕೀತು? ನೀವು ಯೋಗೀಶ್ವರರು'' ಎಂದನು. ಶ್ರೀಶಂಕರರು ''ಅರ್ಥವಾಯಿತು ! ನನ್ನ ಶಿರಸ್ಸು ನಿನಗೆ ಬೇಕಾಗಿದೆ. ಕೊಡುತ್ತೇನೆ. ನಾಳೆ ಪ್ರಾತಃಕಾಲದಲ್ಲಿ ನನ್ನ ಶಿಷ್ಯರು ಇಲ್ಲದ ವೇಳೆಯಲ್ಲಿ ಬಾ - ನಾನು ಇಲ್ಲಿಯೇ ಇರುತ್ತೇನೆ. ಯಾವ ಸಂಕೋಚವನ್ನೂ ಮಾಡದೆ ಈ ಶಿರಸ್ಸನ್ನು ಕತ್ತರಿಸಿಕೊಂಡು ಹೋಗು'' ಎಂದುಬಿಟ್ಟರು. ಯತಿಗಳೂ ಜ್ಞಾನಿಗಳೂ ವೈರಾಗ್ಯಸಂಪನ್ನರೂ ಆದ ಆ ಮಹಾತ್ಮರಿಗೆ ದೇಹದಮೇಲೆ ಅಭಿಮಾನವಿರುತ್ತದೆಯೆ ? ಶರೀರವನ್ನು ಹುಲ್ಲು ಕಡ್ಡಿಗೆ ಸಮವೆಂದು ಅವರು ಭಾವಿಸಿರುತ್ತಾರೆ. ಭೈರವನಿಗೆ ಪರಮಾನಂದವಾಯಿತು. ಅವನು 'ಹೋ' ಎಂದು ನಗುತ್ತಾ ಹೊರಟುಹೋದನು.

ಮರುದಿನ ಬೆಳಗಾಯಿತು. ಆಚಾರ್ಯರು ಉಷಃಕಾಲದಲ್ಲಿ ಎದ್ದು ನದಿಗೆ ಹೋಗಿ ಸ್ನಾನಮಾಡಿ ಬಂದು ಧ್ಯಾನಸ್ಥರಾದರು. ಭೈರವನ ವೃತ್ತಾಂತವನ್ನು ಯಾರಿಗೂ ಹೇಳಿರಲಿಲ್ಲ. ಶಿಷ್ಯರು ಸ್ನಾನಾರ್ಥವಾಗಿ ನದಿಗೆ ಹೋದರು. ಆ ಸಮಯದಲ್ಲಿ ಭೈರವನು ಒಂದು ಕತ್ತಿಯನ್ನು ಹಿಡಿದು ಬಟ್ಟೆಯ ಸಂದಿನಲ್ಲಿ ಮುಚ್ಚಿಕೊಂಡು ಮೆಲ್ಲಮೆಲ್ಲಗೆ ಸರ್ಪದಂತೆ ಶ್ರೀಶಂಕರರಿದ್ದ ಸ್ಥಳಕ್ಕೆ ಬಂದು ಕತ್ತಿಯನ್ನು ಹಿರಿದನು. ಅಷ್ಟರಲ್ಲಿ ಅಕಸ್ಮಾತ್ ನದಿಯಿಂದ ಬರುತ್ತಿದ್ದ ಪದ್ಮಪಾದರು ಈ ದೃಶ್ಯವನ್ನು ದೂರದಿಂದ ನೋಡಿ, ಒಡನೆಯೇ ನಾರಸಿಂಹ ಮಂತ್ರವನ್ನು ಜಪಿಸಿ ಭೈರವನನ್ನು ಸ್ತಂಭಿಸಿಬಿಟ್ಟರು ! ಭೈರವನು ಅಲ್ಲಾಡಲಾರದೆ ಕಲ್ಲಿನ ವಿಗ್ರಹದಂತೆ ನಿಂತು ಹೋದನು. ಕತ್ತಿಹಿಡಿದು ಎತ್ತಿದ ಕೈ ಎತ್ತಿದಂತೆಯೇ ನಿಂತಿತ್ತು ! ಪದ್ಮಪಾದರು ಹಾಹಾಕಾರಮಾಡಿದರು. ಶಿಷ್ಯರೆಲ್ಲರೂ ಓಡುತ್ತ ಬಂದರು. ಎಲ್ಲರೂ ಭೈರವನನ್ನು ಗದರಿಸಿದರು. ಅವನು ಪದ್ಮಪಾದರ ಅನುಜ್ಞೆಯನ್ನು ಪಡೆದು ಸ್ತಂಭನದಿಂದ ಬಿಡಿಸಿಕೊಂಡು ಮುಖತೋರಿಸಲಾರದೆ ನಾಚಿಕೆಯಿಂದ ಓಡಿಹೋದನು.

ಆಚಾರ್ಯರಿಗೆ ಸಮಾಧಿಯಿಂದ ಎಚ್ಚೆತ್ತ ಮೇಲೆ ನಡೆದುದೆಲ್ಲ ತಿಳಿಯಿತು. ಅವರು ಭಕ್ತಿಯಿಂದ ಶ್ರೀನರಸಿಂಹಸ್ವಾಮಿಯನ್ನು ಸ್ತುತಿಸಿದರು.

## ಗೋಕರ್ಣ, ಕೊಲ್ಲೂರು, ಶ್ರೀಬಲಿಕ್ಷೇತ್ರಗಳ ಮೂಲಕ ಶೃಂಗೇರಿಗೆ ಪ್ರಯಾಣ

ಆಮೇಲೆ ಶ್ರೀಶಂಕರಾಚಾರ್ಯರು ಶಿಷ್ಯಸಮೇತರಾಗಿ ಗೋಕರ್ಣದ ಕಡೆಗೆ ಹೊರಟರು. ಭರತಖಂಡದಲ್ಲಿ ಸರ್ವತ್ರ ವೈದಿಕಧರ್ಮವನ್ನು ಪ್ರಚಾರ ಮಾಡುವುದೇ ಅವರ ಸಂಕಲ್ಪವಾದ್ದರಿಂದ ನಿರಂತರವಾದ ತಿರುಗಾಟವು ಅನಿವಾರ್ಯವಾಗಿತ್ತು. ಎಲ್ಲ ಕಡೆಯೂ ಕಾಲ್ನಡಗೆಯಿಂದಲೇ ಸುತ್ತಬೇಕಾಗಿತ್ತು. ದೃಢಸಂಕಲ್ಪ ಮಾಡಿದ ಆ ಧೀರಯತೀಶ್ವರರು ಹಿಂಜರಿಯಲೇ ಇಲ್ಲ. ಪ್ರಯಾಣ ಮಾಡುವಾಗಲೂ ಶಿಷ್ಯರ ಸಂದೇಹಗಳನ್ನು ಪರಿಹರಿಸುತ್ತ ಶಾಸ್ತ್ರ ವಿಷಯಗಳನ್ನು ಚರ್ಚಿಸುತ್ತಲೇ ಸಾಗುತ್ತಿದ್ದರು. ವಿಶ್ರಾಂತಿಗಾಗಿ ಯಾವುದಾದರೂ ಗ್ರಾಮದಲ್ಲಿ ಬೀಡುಬಿಟ್ಟಾಗ, ಅಲ್ಲಿದ್ದ ವಿದ್ವಾಂಸರೊಡನೆ ವಿಚಾರವಿನಿಮಯ ಮಾಡಿ ಕೊಳ್ಳುತ್ತಿದ್ದರು. ವೈದಿಕರ ಧಾರ್ಮಿಕ ಪ್ರಶ್ನೆಗಳಿಗೆ ಉತ್ತರಿಸುತ್ತಿದ್ದರು. ಸಾಮಾನ್ಯ ಜನವರ್ಗದವರಿಗೆ ಸರಳ ಶೈಲಿಯಲ್ಲಿ ವೇದಾಂತ ತತ್ತ್ವವನ್ನು ತಿಳಿಸಿ ಕೊಡುತ್ತಿದ್ದರು. ಆ ಕಾಲದಲ್ಲಿ ಸಂಸ್ಕೃತ ಭಾಷೆಯು ಎಲ್ಲಕಡೆಯೂ ಪ್ರಸರಿಸಿತ್ತು. ಆಚಾರ್ಯರು ಸದಾಯಾತ್ರಿಗಳಾದ್ದರಿಂದ ಹಲವು ಭಾಷೆಗಳನ್ನು ಬಲ್ಲವರಾಗಿದ್ದರು. ಆದ್ದರಿಂದ ಎಲ್ಲಿಯೂ ಭಾಷಾನಿಮಿತ್ತದಿಂದ ಅಡ್ಡಿಯಾಗುತ್ತಿರಲಿಲ್ಲ.

ಆಚಾರ್ಯರು ಗೋಕರ್ಣ ಕ್ಷೇತ್ರಕ್ಕೆ ಹೋಗಿ ಶ್ರೀಮಹಾಬಲೇಶ್ವರ ಸ್ವಾಮಿಯನ್ನು ಸಂದರ್ಶಿಸಿ, ಆಶುಕವಿತೆಗಳಿಂದ ಭಕ್ತಿಪೂರ್ವಕವಾಗಿ ಸ್ತೋತ್ರಮಾಡಿದರು. ಆ ಕ್ಷೇತ್ರದಲ್ಲಿ ವೈದಿಕರಾದ ವಿದ್ವಾಂಸರು ನೆಲೆಸಿದ್ದುದರಿಂದ ಶ್ರೀಶಂಕರರಿಗೆ ಸಂತೋಷವಾಯಿತು. ಸ್ವಲ್ಪ ದಿನಗಳವರೆಗೆ ಗೋಕರ್ಣದಲ್ಲಿಯೇ ತಂಗಿದರು, ಅನಂತರ ಪಶ್ಚಿಮಘಟ್ಟಗಳ ಗೊಂಡಾರಣ್ಯವನ್ನು ದಾಟಿ ಶ್ರೀಮೂಕಾಂಬಿಕಾ ಕ್ಷೇತ್ರವಾದ ಕೊಲ್ಲೂರಿನ ಬಳಿಗೆ ಬಂದರು. ದಾರಿಯಲ್ಲಿ ಜನರ ಗುಂಪು ಕೂಡಿತ್ತು. ಮೃತನಾಗಿದ್ದ ಒಬ್ಬ ಬಾಲಕನ ದೇಹವನ್ನು ಎದುರಿಗಿಟ್ಟುಕೊಂಡು ಅವನ ತಂದೆ ತಾಯಿಗಳು ಅಳುತ್ತಿದ್ದರು. ಸುತ್ತಲೂ ಇದ್ದ ಅವರ ಬಂಧುಮಿತ್ರರೂ ಶೋಕತಪ್ತರಾಗಿದ್ದರು. ತಂದೆ ತಾಯಿಗಳಿಗೆ ಆ ಬಾಲಕನೊಬ್ಬನೇ ಮಗನಾದ್ದರಿಂದ ಅವರ ಶೋಕವು ಅಸದಳವಾಗಿತ್ತು. ಕರುಣಾಳುಗಳಾಗಿದ್ದ ಆಚಾರ್ಯರಿಗೆ ಅದನ್ನು

ಕಂಡು ಮರುಕ ಹುಟ್ಟಿತು. ಆ ಮಹಾತ್ಮರು ಬಳಿಗೆ ಹೋಗಿ ಬಾಲಕನ ದೇಹವನ್ನು ಕೈಯಿಂದ ಮುಟ್ಟಿ ಸವರಿದರು. ಬಾಲಕನಿಗೆ ಜೀವ ಬಂದಿತು. ಅವನು ಕಣ್ಣು ಬಿಟ್ಟು ಎದ್ದುಕುಳಿತನು ! ತಂದೆ ತಾಯಿಗಳಿಗೆ ಆದ ಆನಂದಕ್ಕೆ ಪಾರವಿರಲಿಲ್ಲ. ಆಚಾರ್ಯರ ಪಾದಗಳಿಗೆ ಅಡ್ಡಬಿದ್ದು, ಅವರ ಮಹಿಮೆಯನ್ನು ಹೊಗಳತೊಡಗಿದರು. ಶ್ರೀಶಂಕರರು ಅದೊಂದನ್ನೂ ಲೆಕ್ಕಿಸದೆ, ಅವರೆಲ್ಲರಿಗೂ ಹರ್ಷವಾಯಿತೆಂದು ತೃಪ್ತರಾಗಿ ಮುಂದೆ ನಡೆದರು.

ಕೊಲ್ಲೂರನ್ನು ಸೇರಿ ದೇವಾಲಯದಲ್ಲಿ ದೇವಿಯನ್ನು ಭಕ್ತಿಯಿಂದ ಸ್ತೋತ್ರಮಾಡಿದರು. ಸ್ವಲ್ಪ ಹೊತ್ತು ಆ ಊರಲ್ಲಿ ವಿಶ್ರಮಿಸಿಕೊಂಡು. ಶ್ರೀ ಬಲಿಕ್ಷೇತ್ರದ ಕಡೆಗೆ ಶಿಷ್ಯಸಮೇತರಾಗಿ ಪ್ರಯಾಣ ಮಾಡಿದರು.

ಅವರು ಶ್ರೀಬಲಿ(೧)ಯೆಂಬ ಶಿವಕ್ಷೇತ್ರಕ್ಕೆ ಆಗಮಿಸಿ, ಪ್ರಸಿದ್ಧವಾದ ಶಿವದೇವಾಲಯವನ್ನು ಪ್ರವೇಶಿಸಿ ಪರಮೇಶ್ವರನನ್ನು ನಾನಾಸ್ತೋತ್ರಗಳಿಂದ ಸ್ತುತಿಸಿದರು. ಅಲ್ಲಿಗೆ ಒಬ್ಬ ಪಂಡಿತನು ತನ್ನ ಮಗನೊಡನೆ ಬಂದು ಶ್ರೀಶಂಕರಗುರುಗಳಿಗೆ ನಮಸ್ಕರಿಸಿ ಹೀಗೆಂದನು - "ಓ ಮಹಾತ್ಮರೆ, ಈ ಹುಡುಗನನ್ನು ಕೃಪಾದೃಷ್ಟಿಯಿಂದ ನೋಡಿರಿ. ಉಪನಯನವನ್ನು ಮಾಡಿದ್ದೇನೆ. ಈತನ ವರ್ತನೆ ಎಲ್ಲರಂತೆ ಇಲ್ಲದೆ ವಿಚಿತ್ರವಾಗಿದೆ. ಹಸಿವು ಬಾಯಾರಿಕೆಗಳ ಪರಿವೆಯಿಲ್ಲದೆ ಎಷ್ಟು ಹೊತ್ತಾದರೂ ಒಬ್ಬನೇ ಏಕಾಂತದಲ್ಲಿ ಕುಳಿತಿರುತ್ತಾನೆ. ಓದು ಬರೆಹಗಳಲ್ಲಿ ಆಸಕ್ತಿ ಇಲ್ಲ. ಜೊತೆಗಾರರಾದ ಹುಡುಗರೊಡನೆ ಆಡುವುದಕ್ಕೂ ಹೋಗುವುದಿಲ್ಲ. ಒತ್ತಾಯಪಡಿಸಿದರೆ ಸ್ವಲ್ಪ ಆಹಾರವನ್ನು ತೆಗೆದುಕೊಳ್ಳುತ್ತಾನೆ. ಮೂಕನಂತೆ ಜಡನಂತೆ ಇರುತ್ತಾನೆ. ಇವನನ್ನು ನೋಡಿ ನನಗೆ ಬಹಳ ಚಿಂತೆಯಾಗಿದೆ" ಎಂದನು. ಆಗ ಶ್ರೀ ಶಂಕರಭಗವತ್ಪಾದರು ಆ ಬಾಲಕನನ್ನು ಗಮನಿಸಿ ನೋಡಿ "ಎಲೈ ನೀನು ಯಾರು ? ಜಡನಂತೆ ಹೀಗಿರುವುದೇಕೆ ?" ಎಂದು ಕೇಳಿದರು. ಆ ಹುಡುಗನು ಆಚಾರ್ಯರನ್ನು ನೋಡುತ್ತ "ನಾನು ಜಡಮನುಷ್ಯನಲ್ಲ. ಚಿದಾನಂದರೂಪನಾದ ಶಿವನೇ ಆಗಿದ್ದೇನೆ ! ನಿತ್ಯಚೈತನ್ಯನಾದ ನನಗೆ ಜಡತ್ವ ಹೇಗೆ ಸೋಂಕೀತು ? ಹಸಿವು ಬಾಯಾರಿಕೆಗಳು ನನಗೆ ಇಲ್ಲವೇ ಇಲ್ಲ. ನಿತ್ಯತೃಪ್ತನಾದವನು ನಾನು. ಈ ಜಗತ್ತು ಕನಸಿನಂತೆ ಮಿಥ್ಯೆಯಾದದ್ದು. ಇದರಿಂದ ನನಗೇನೂ

(೧) ಶ್ರೀಬಲಿಯೇ ಶಿವಳ್ಳಿಯೆಂದೂ ಶಿವಳ್ಳಿಯೇ ಉಡುಪಿಯೆಂದೂ ಹೇಳುತ್ತಾರೆ. ಆಚಾರ್ಯರು ಪ್ರವೇಶಿಸಿದ ಶಿವದೇವಾಲಯವು ಈಗ ಉಡುಪಿಯಲ್ಲಿರುವ ಅನಂತೇಶ್ವರ ದೇವಸ್ಥಾನವಾಗಿರಬಹುದು.

ಆಗಬೇಕಾದ್ದಿಲ್ಲ !" ಎಂದು ನಿರರ್ಗಳವಾಗಿ ಉತ್ತರವನ್ನಿತ್ತನು. ಅವನ ತಂದೆಯೂ ಅಲ್ಲಿ ನೆರೆದಿದ್ದ ಜನರೂ ಆಶ್ಚರ್ಯ ಸಮುದ್ರದಲ್ಲಿ ಮುಳುಗಿ ಹೋದರು. ಆ ಹುಡುಗನು ಆಚಾರ್ಯರಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ಸುಮ್ಮನೆ ಕುಳಿತನು.

ಶ್ರೀ ಭಗವತ್ಪಾದರು ಮುಗುಳ್ನಗೆ ಬೀರುತ್ತ ಆ ಬಾಲಕನ ತಂದೆಯನ್ನು ಕುರಿತು "ಅಯ್ಯಾ ಬ್ರಾಹ್ಮಣ, ಈ ಬಾಲಕನು ವೇದಾಂತದ ಸಾರವನ್ನು ಹಸ್ತಾಮಲಕದಂತೆ (ಕೈಯಲ್ಲಿರುವ ನೆಲ್ಲಿ ಕಾಯಿಯಂತೆ) ಬಲ್ಲವನಾಗಿದ್ದಾನೆ. ಯಾವುದೋ ಪ್ರಾರಬ್ಧಕರ್ಮದಿಂದ ನಿನ್ನ ಮಗನಾಗಿ ಹುಟ್ಟಿದ್ದಾನೆ. ಈತನಿಂದ ನಿನ್ನ ಕುಟುಂಬಕ್ಕೆ ಯಾವ ಪ್ರಯೋಜನವೂ ಇಲ್ಲವೆಂದು ತಿಳಿ. ನಿನಗೆ ಒಪ್ಪಿಗೆಯಾದರೆ ಈತನು ನನ್ನ ಜೊತೆಗೆ ಬರಲಿ. ಜ್ಞಾನಿಯಾದ ಈ ಪುತ್ರನನ್ನು ಪಡೆದದ್ದರಿಂದ ನಿನ್ನ ವಂಶವೇ ಪವಿತ್ರವಾಯಿತು ಎಂದರು." ಆ ಬ್ರಾಹ್ಮಣನು ದಿಗ್ಭ್ರಾಂತನಾಗಿ ಮಗನ ಮುಖವನ್ನು ನೋಡಿದನು. ಬಾಲಕನು "ನಾನು ಇವರೊಡನೆ ಹೋಗುವೆನು" ಎಂಬುದನ್ನು ಸಂಜ್ಞೆಯಿಂದ ತಿಳಿಸಿ ಆಚಾರ್ಯರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು.

ಕರುಣಾತ್ಮರಾದ ಆಚಾರ್ಯರು ಆ ಬಾಲಕನಿಗೆ ಹಸ್ತಾಮಲಕ ಎಂಬ ಅನ್ವರ್ಥನಾಮವನ್ನಿಟ್ಟು ತಮ್ಮೊಡನೆ ಕರೆದುಕೊಂಡು ಹೊರಟರು. ಆ ಹುಡುಗನ ತಂದೆಯ ಕಣ್ಣುಗಳಲ್ಲಿ ಕಣ್ಣೀರು ತುಂಬಿತು. ಈ ಹಸ್ತಾಮಲಕನೇ ಮುಂದೆ **ಹಸ್ತಾಮಲಕಾಚಾರ್ಯ**ನೆಂದು ಪ್ರಸಿದ್ಧನಾದನು. ಈ ಹಸ್ತಾಮಲಕರು ಆಚಾರ್ಯರ ಮೂರನೆಯ ಪ್ರಮುಖ ಶಿಷ್ಯರು.

## ಶೃಂಗೇರಿಯಲ್ಲಿ ನಿವಾಸ

ಅಲ್ಲಿಂದ ಶ್ರೀಶಂಕರಾಚಾರ್ಯರು ಶಿಷ್ಯಸಮೇತರಾಗಿ ಶೃಂಗೇರಿಗೆ ಹೋದರು. ಋಷ್ಯಶೃಂಗಮುನಿಗಳ ನೆಲೆಯೆಂದು ಕೀರ್ತಿತವಾದ ಶೃಂಗಗಿರಿಯು ಈಗ ಶೃಂಗೇರಿಯಾಗಿದೆ. ಪ್ರಕೃತಿರಮಣೀಯವಾಗಿದ್ದ ಆ ತುಂಗಾನದೀ ತೀರವು ಆಚಾರ್ಯರಿಗೆ ಹಿತಕರವೆಂದೂ ನಿವಾಸಯೋಗ್ಯವೆಂದೂ ತೋರಿತು. ಅವರು ಅಲ್ಲೊಂದು ಚಿಕ್ಕ ಆಶ್ರಮವನ್ನು ಕಟ್ಟಿಸಿಕೊಂಡರು. ವಿದ್ಯಾಧಿದೇವತೆಯಾದ ಶ್ರೀಶಾರದಾಂಬೆಯನ್ನು ಒಂದು ಪ್ರಶಸ್ತವಾದ ಸ್ಥಳದಲ್ಲಿ ವಿಧಿಪೂರ್ವಕವಾಗಿ ಪ್ರತಿಷ್ಠಾಪಿಸಿದರು. ನೂತನ ಗ್ರಂಥಗಳ ರಚನೆಯೂ ಶಿಷ್ಯರಿಗೆ ಅಧ್ಯಾಪನವೂ ನಿರಂತರವಾಗಿ ನಡೆಯುತ್ತಲೇ ಇತ್ತು.

ಅವರ ಶಿಷ್ಯರಲ್ಲಿ ಗಿರಿ ಎಂಬವನು ಭಕ್ತಿಯಿಂದ ಗುರು ಶುಶ್ರೂಷೆ ಮಾಡುತ್ತ ವಿದ್ಯಾಭ್ಯಾಸ ಮಾಡುತ್ತಿದ್ದನು. ವಿನಯಾದಿ ಸದ್ಗುಣಗಳಿಂದ ಆಚಾರ್ಯರ ಪ್ರೀತಿ ವಾತ್ಸಲ್ಯಗಳನ್ನು ವಿಶೇಷವಾಗಿ ಗಳಿಸಿಕೊಂಡಿದ್ದನು. ಒಂದು ದಿನ ಗುರುಗಳ ವಸ್ತ್ರಗಳನ್ನು ತೊಳೆಯುವುದಕ್ಕಾಗಿ ಆತನು ತುಂಗಾನದಿಗೆ ಹೋದಾಗ, ಶಿಷ್ಯರಿಗೆ ಪಾಠ ಹೇಳುವ ಸಮಯವು ಬಂದಿತು. ಗಿರಿಯು ಬರುವುದು ಸ್ವಲ್ಪ ತಡವಾಯಿತು. ಉಳಿದ ಶಿಷ್ಯರು ಶಾಂತಿ ಪಾಠವನ್ನು ಆರಂಭಿಸಬೇಕೆಂದಿರುವಾಗ ಆಚಾರ್ಯರು 'ಗಿರಿಯೂ ಬರಲಿ' ಎಂದು ನುಡಿದರು. ಆಗ ಪದ್ಮಪಾದನು ನಗುತ್ತ ಬದಿಯಲ್ಲಿದ್ದ ಗೋಡೆಯನ್ನು ಅಡ್ಡಲಾಗಿ ನೋಡಿದನು. ಸೂಕ್ಷ್ಮಬುದ್ಧಿಯ ಆಚಾರ್ಯರಿಗೆ ಪದ್ಮಪಾದನ ಇಂಗಿತವು ಹೊಳೆಯಿತು. "ಗಿರಿಯು ಮಂದಬುದ್ಧಿಯವನು. ಅವನಿಗೆ ಪಾಠ ಹೇಳುವುದು ಗೋಡೆಗೆ ಪಾಠ ಹೇಳುವಂತೆ ವ್ಯರ್ಥ!" ಎಂದು ಆತನ ಅಭಿಪ್ರಾಯವಾಗಿತ್ತು.

ಆಚಾರ್ಯರಿಗೆ ಅದು ಹಿಡಿಸಲಿಲ್ಲ. ಪದ್ಮಪಾದನ ಅಹಂಕಾರವನ್ನು ಅಡಗಿಸಬೇಕೆಂದು ಸಂಕಲ್ಪಿಸಿಕೊಂಡು ಆ ಮಹಾತ್ಮರು ತಮ್ಮ ಯೋಗ ಸಾಮರ್ಥ್ಯದಿಂದ ಎಲ್ಲ ಶಾಸ್ತ್ರ ಪಾಂಡಿತ್ಯವೂ ಗಿರಿಗೆ ಬರುವಂತೆ ಅನುಗ್ರಹಿಸಿದರು. ಇತ್ತ ಗಿರಿಗೆ ಜಳಕ್ಕನೆ ಒಂದು ಮಿಂಚು ಹೊಳೆದಂತಾಯಿತು. ಶಾಸ್ತ್ರ ಪಾಂಡಿತ್ಯವೂ ಕವಿತಾಶಕ್ತಿಯೂ ತನಗೆ ಪ್ರಾಪ್ತವಾಗಿದೆಯೆಂಬ ಅರಿವು ಮೂಡಿತು. ಅದೆಲ್ಲವೂ ತನ್ನ ಗುರುಗಳ ಅನುಗ್ರಹದಿಂದಲೇ ಲಭಿಸಿತೆಂದು ಊಹಿಸಿ ರೋಮಾಂಚಗೊಂಡನು. ಒಗೆದ ವಸ್ತ್ರಗಳನ್ನು ಹೊತ್ತುಕೊಂಡು ಗುರುಗಳ ಸಂನಿಧಿಗೆ ಬಂದನು. ಸುಂದರವಾದ ತೋಟಕ ವೃತ್ತಗಳಿಂದ ಆಚಾರ್ಯರ ಕಾರುಣ್ಯವನ್ನೂ ಅವರಿಂದ ತಾನು ಧನ್ಯನಾದೆನೆಂದೂ ಕೀರ್ತಿಸುತ್ತ, ಮೆಲ್ಲಮೆಲ್ಲನೆ ಹೆಜ್ಜೆ ಇಡುತ್ತ ಗುರುಗಳನ್ನೇ ನೋಡುತ್ತ ಬಂದು ಆಚಾರ್ಯರ ಪಾದಗಳಿಗೆ ಭಕ್ತಿಪೂರ್ವಕವಾಗಿ ನಮಸ್ಕರಿಸಿದನು. ಗಿರಿಯು ಹೇಳುತ್ತಿದ್ದ ಶ್ಲೋಕಗಳಲ್ಲಿ ವೇದಾಂತದ ಸಾರವೇ ತುಂಬಿಕೊಂಡಿತ್ತು. ಗಿರಿಯ ಊಹಾತೀತವಾದ ಈ ನೂತನ ವರ್ತನೆಯನ್ನು ನೋಡಿ ಇತರ ಶಿಷ್ಯರು ಮೂಕವಿಸ್ಮಿತರಾದರು. ಅಂದಿನಿಂದ ಪದ್ಮಪಾದನ ಅಹಂಕಾರವಡಗಿತು.

ಆಚಾರ್ಯರು ಶೃಂಗೇರಿಯಲ್ಲಿ ನೆಲೆಸಿದ್ದಾಗ ಪ್ರಸ್ಥಾನತ್ರಯ ಭಾಷ್ಯಗಳ ಅಧ್ಯಯನಕ್ಕೆ ಉಪಯುಕ್ತವಾದ ಹಲವಾರು ಪ್ರಕರಣ ಗ್ರಂಥಗಳನ್ನು ರಚಿಸಿದರು.

ವೇದಾಂತಾರ್ಥವನ್ನೊಳಗೊಂಡ ಸ್ತೋತ್ರಗಳನ್ನೂ ಬರೆದರು. ಶಿವ, ವಿಷ್ಣು ಅಂಬಿಕಾ, ಗಣಪತಿ, ಶಾರದಾ - ಮುಂತಾದ ನಾನಾ ದೇವತೆಗಳನ್ನು ಸ್ತುತಿಸುವ ಸುಂದರಕವಿತೆಗಳನ್ನು ರಚಿಸಿದರು. ಅಲ್ಲದೆ ತಮ್ಮ ಶಿಷ್ಯರಿಂದಲೂ ಶಾಸ್ತ್ರಗ್ರಂಥಗಳನ್ನು ಬರೆಯಿಸಿದರು. ವೇದೋಪನಿಷತ್ತುಗಳ ಪ್ರಚಾರಕ್ಕೆ ಬೇಕೆನಿಸಿದ ಉತ್ತಮ ಗ್ರಂಥಗಳು ಸಿದ್ಧವಾದವು. ಹೀಗೆ ಸಾರಸ್ವತ ಸೇವೆಯು ಬಿರುಸಿನಿಂದ ಶೃಂಗೇರಿಯಲ್ಲಿ ನಡೆಯಿತು.

## ಮಾತೃವಿಯೋಗ

ಹೀಗಿರಲು ಒಂದು ದಿನ ಶ್ರೀ ಶಂಕರಭಗವತ್ಪಾದರಿಗೆ, ಅವರ ಜನನಿಯಾದ ಆರ್ಯಾಂಬೆ ಮುಪ್ಪಿನಿಂದ ಹಾಸಿಗೆ ಹಿಡಿದಿರುವಳೆಂದೂ ಅಂತ್ಯಕಾಲ ಸಮೀಪಿಸಿದೆಯೆಂದೂ ತಿಳಿದುಬಂದಿತು. ಕೂಡಲೆ ಅವರು ಏಕಾಕಿಯಾಗಿ ಶೃಂಗೇರಿಯಿಂದ ಹೊರಡಲು ನಿರ್ಧರಿಸಿದರು. ಪದ್ಮಪಾದಾದಿ ಶಿಷ್ಯರಿಗೆ ನಾನೀಗ ಶೀಘ್ರಗತಿಯಿಂದ ಕೇರಳದಲ್ಲಿರುವ ಕಾಲಟಿಗೆ ಹೋಗುತ್ತೇನೆ. ನೀವು ಶಾಂತಚಿತ್ತರಾಗಿರಿ. ಗಾಬರಿಗೊಳ್ಳದೆ ನಿಧಾನವಾಗಿ ಹಿಂದೆ ಬನ್ನಿರಿ ಎಂದು ಹೇಳಿ ಪ್ರಯಾಣ ಮಾಡಿದರು. ಕಾಲಟಿಗೆ ಬಂದು ತಾಯಿಯ ಮನೆಯನ್ನು ಪ್ರವೇಶಿಸಿದರು. ವೃದ್ಧೆಯಾಗಿದ್ದ ಆರ್ಯಾಂಬೆ ಹಾಸಿಗೆಯ ಮೇಲೆ ನರಳುತ್ತಾ ಮಲಗಿದ್ದಳು. ಬಳಿಯಲ್ಲಿ ಯಾರೂ ಇರಲಿಲ್ಲ. ಆಚಾರ್ಯರ ಮನಸ್ಸಿಗೆ ನೋವಾಯಿತು. ಅವರು ತಾಯಿಯ ಸಮೀಪಕ್ಕೆ ಹೋದರು. ಆರ್ಯಾಂಬೆ ಕಣ್ಣು ಬಿಟ್ಟು ನೋಡಿ ತನ್ನ ಮಗನೆಂದು ಗುರುತಿಸಿದಳು. ಸಂತೋಷದಿಂದ ಎರಡು ಕಣ್ಣುಗಳೂ ಅರಳಿದವು. ಮುಖವು ಹಿಗ್ಗಿತು. ಶ್ರೀ ಶಂಕರರು ಹತ್ತಿರ ಕುಳಿತು ತಾಯಿಯ ಕೈಯನ್ನು ಹಿಡಿದುಕೊಂಡರು. ಆರ್ಯಾಂಬೆ ತೊದಲುತ್ತ ಮೂರು ನಾಲ್ಕು ಮಾತುಗಳನ್ನಾಡಿದಳು. ಸ್ವಲ್ಪ ಹೊತ್ತಿನಲ್ಲಿಯೇ ಅವಳ ಪ್ರಾಣಪಕ್ಷಿ ಹಾರಿಹೋಯಿತು.

ಮುಂದೇನು? ಒಬ್ಬ ದಾಯಾದಿಯಾಗಲಿ ಬಂಧುವಾಗಲಿ ಹತ್ತಿರ ಸುಳಿಯಲಿಲ್ಲ. ಆಚಾರ್ಯರೇ ಅವರ ಮನೆಗಳಿಗೆ ಹೋಗಿ ತಾಯಿಗಾದ ಗತಿಯನ್ನು ತಿಳಿಸಿ ಬಂದರು. ಯಾರೂ ಬರಲಿಲ್ಲ. ಖಿನ್ನರಾದ ಶ್ರೀಶಂಕರರು ಮತ್ತೆ ಹೋಗಿ, ಆರ್ಯಾಂಬೆಗೆ ಉತ್ತರಕ್ರಿಯೆಯನ್ನು ಮಾಡಬೇಕೆಂದು ನಿವೇದಿಸಿದರು. ಯಾರೂ ಅವರ ಮಾತನ್ನು ಕಿವಿಯ ಮೇಲೆ ಹಾಕಿಕೊಳ್ಳಲಿಲ್ಲ. ಚಿಂತಾಗ್ರಸ್ತರಾದ ಆಚಾರ್ಯರು ಮತ್ತೆ ಹೋಗಿ "ಅಗ್ನಿಯನ್ನಾದರೂ ಕೊಡಿರಿ. ನಾನೇ ಉತ್ತರಕ್ರಿಯೆಯನ್ನು

ಮಾಡುತ್ತೇನೆ" ಎಂದರು. ಆಗ ಗ್ರಾಮಸ್ಥರು ಕುಪಿತರಾಗಿ "ಏ ಸಂನ್ಯಾಸಿ, ನಿನಗೆ ಮೃತಸಂಸ್ಕಾರವನ್ನು ಮಾಡಲು ಅಧಿಕಾರವಿಲ್ಲ. ಆದ್ದರಿಂದ ಅಗ್ನಿಯನ್ನು ಕೊಡುವುದಿಲ್ಲ" ಎಂದುಬಿಟ್ಟರು.

ಆಚಾರ್ಯರು ಜಿತೇಂದ್ರಿಯರೂ, ಶಾಂತಚಿತ್ತರೂ ಆಗಿದ್ದರೂ ಹಡೆದ ತಾಯಿಗೆ ಇಂತಹ ಗತಿ ಬಂದಿತೆಂದು ಉದ್ವಿಗ್ನರಾದರು. ನೇರವಾಗಿ ತಾಯಿಯ ಮನೆಯ ಹಿತ್ತಲಿಗೆ ಹೋಗಿ ಒಣಕಟ್ಟಿಗೆಗಳನ್ನು ಜೋಡಿಸಿದರು. ತಮ್ಮ ಅಂಗೈಗಳನ್ನು ಪರಸ್ಪರ ಗಟ್ಟಿಯಾಗಿ ಉಜ್ಜಿದರು. ಬೆಂಕಿಯು ಭುಗಿಲ್ ಎಂದು ಸಿಡಿದು ಕಟ್ಟಿಗೆಗಳಿಗೆ ಹೊತ್ತಿಕೊಂಡಿತು ! ಅನಂತರ ಕ್ರಮವಾಗಿ ಸೌದೆಗಳನ್ನು ಪೇರಿಸಿ ಚಿತೆಯನ್ನು ನಿರ್ಮಿಸಿದರು. ಆರ್ಯಾಂಬೆಯ ಶವವನ್ನು ಎತ್ತಿ ತಂದು ಚಿತೆಯ ಮೇಲೆ ಮಲಗಿಸಿದರು. ಶಾಸ್ತ್ರೋಕ್ತ ವಿಧಿಯಂತೆ ಮಂತ್ರ ಪೂರ್ವಕವಾಗಿ ದಹನ ಕಾರ್ಯವನ್ನು ನೆರವೇರಿಸಿದರು. ಆಮೇಲೆ ಪೂರ್ಣಾನದಿಯಲ್ಲಿಳಿದು ಸ್ನಾನಮಾಡಿ ಬಂದರು.

ಆಚಾರ್ಯರ ಸಮಗ್ರ ಜೀವನ ಚರಿತ್ರೆಯನ್ನು ನೋಡಿದಾಗ, ಇದೊಂದು ಸಂದರ್ಭದಲ್ಲಿ ಮಾತ್ರ, ಅವರ ಚಿತ್ತಶಾಂತಿಯು ಕದಡಿತೆಂದು ತೋರುತ್ತದೆ. "ಕಷ್ಟದಿಂದ ನನ್ನನ್ನು ಸಾಕಿ ಬೆಳೆಸಿದ ತಾಯಿಗೆ, ವಾತ್ಸಲ್ಯದಿಂದ ನನಗಾಗಿ ಕಣ್ಣೀರು ಹರಿಸಿದ ತಾಯಿಗೆ, ಇಂತಹ ಪರಿಸ್ಥಿತಿಯುಂಟಾಯಿತಲ್ಲ. ಇದಕ್ಕೆ ನಾನು ಕಾರಣನಾದೆನೆ ? "**ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ**" - ತಾಯಿಗೆ ನಾನೊಬ್ಬ ಕುಪುತ್ರನಾಗಿ ಹುಟ್ಟಿದೆನೆ ? ಈ ದಾಯಾದಿಗಳನ್ನು ನಾನು ನಂಬಿದೆ. ಇವರು ನನ್ನ ತಾಯಿಯ ಆಸ್ತಿಯನ್ನೆಲ್ಲ ತಿಂದು ತೇಗಿದ್ದಾರೆ. ಅವಳು ಸತ್ತರೂ ಈ ದುಷ್ಟರು ಕಣ್ಣೆತ್ತಿ ನೋಡಲಿಲ್ಲ" ಎಂದುಕೊಂಡರು. ಆ ಗ್ರಾಮಸ್ಥರನ್ನು ನೋಡಿ "ಎಲೈ, ನೀವು ಬ್ರಾಹ್ಮಣಧರ್ಮವನ್ನಿರಲಿ, ಮನುಷ್ಯಧರ್ಮವನ್ನೂ ಪಾಲಿಸಲಿಲ್ಲ. ವೇದಾಧ್ಯಯನ ಮಾಡಿದ್ದರೂ ಧರ್ಮಬಾಹ್ಯರಾಗಿ ನಡೆದುಕೊಂಡಿದ್ದೀರಿ. ನೀವು ವೇದಬಾಹ್ಯರಾಗಿರಿ !" ಎಂದು ಶಪಿಸಿ[೧] ಕಾಲಟಿಯಿಂದ ನಿರ್ಗಮಿಸಿದರು.

ಆಚಾರ್ಯರು ಶಿಷ್ಯರ ಬರವನ್ನು ನಿರೀಕ್ಷಿಸುತ್ತ ಕಾಲಟಿಯ ಸಮೀಪಪ್ರದೇಶದಲ್ಲಿ ಸಂಚರಿಸುತ್ತಿದ್ದರು. ಮುಂದಿನ ಕಾರ್ಯಯೋಜನೆ ಹೇಗೆಂದು ಮನಸ್ಸಿನಲ್ಲಿಯೇ ಗುಣಿಸುತ್ತಿದ್ದರು. "ಗುರುಗಳ ಅಪ್ಪಣೆಯಂತೆ ಪ್ರಸ್ಥಾನತ್ರಯಕ್ಕೆ ಭಾಷ್ಯಗಳನ್ನು

(೧) ಈಗಲೂ ಕೇರಳದ ಬ್ರಾಹ್ಮಣರಲ್ಲಿ ವೇದಾಧ್ಯಯನವು ವಿರಳ. ಅಧ್ಯಯನ ಮಾಡಿದವರೂ ಅಶುದ್ಧವಾಗಿ ಉಚ್ಚರಿಸುತ್ತಾರೆ. ಅವರ ಆಚರಣೆಗಳೂ ವಿಲಕ್ಷಣವಾದವು.

ರಚಿಸಿದ್ದಾಯಿತು. ಬೇರೆ ಕೆಲವು ವೇಂದಾಂತಗ್ರಂಥಗಳನ್ನು ಬರೆದೆನು. ಸುರೇಶ್ವರ, ಪದ್ಮಪಾದ, ತೋಟಕಾದಿ ಶಿಷ್ಯರೂ ಶ್ರೇಷ್ಠವಾದ ವೇದಾಂತ ಗ್ರಂಥಗಳನ್ನು ರಚಿಸಿದ್ದಾರೆ. ಭರತ ಖಂಡದಲ್ಲಿ ಇವುಗಳ ಪ್ರಸಾರವಾಗಬೇಕಾಗಿದೆ. ಈ ರಾಷ್ಟ್ರದಲ್ಲಿ ಸನಾತನವಾದ ವೈದಿಕದರ್ಶನವು ಮತ್ತೆ ತಲೆಯೆತ್ತಿ ನಿಲ್ಲಬೇಕು. ವೇದಾಂತವು ಸಿದ್ಧಾಂತವಾಗಿ ನಿಲ್ಲಬೇಕಾದರೆ ಸಾಂಖ್ಯಾದಿದ್ವೈತದರ್ಶನಗಳಲ್ಲಿರುವ ದೋಷಗಳು ಜನರಿಗೆ ತಿಳಿಯಬೇಕು. ಬೌದ್ಧ, ಜೈನಾದಿ ಮತಗಳು ಶ್ರೇಯಸ್ಸಿಗೆ ಕಾರಣವಲ್ಲವೆಂದು ಜನರಿಗೆ ಗೊತ್ತಾದರೆ ಆ ಮತಗಳ ಪ್ರಭಾವವು ತಾನಾಗಿ ಕುಗ್ಗುತ್ತದೆ. ವೇದದ ಕರ್ಮಕಾಂಡವು ಜನಪ್ರಿಯವಾಗಲಿಲ್ಲ. ವಿಶಾಲವಾದ ಈ ರಾಷ್ಟ್ರದಲ್ಲಿ ನಾನಾ ಮತಗಳು ಪ್ರಬಲಿಸುತ್ತಿರುವಾಗ ವೇದಾಂತವನ್ನು ಪ್ರಚಾರಕ್ಕೆ ತರುವುದು ಹೇಗೆ ?" ಎಂದು ವಿಚಾರ ಮಾಡುತ್ತ "ಪಾದಯಾತ್ರೆಯಿಂದ ಈ ರಾಷ್ಟ್ರವನ್ನು ಸುತ್ತಬೇಕು" ಎಂದು ನಿರ್ಧರಿಸಿದರು. ಕಾಲ್ನಡಗೆಯಲ್ಲಿ ಏಕಪ್ರಕಾರವಾಗಿ ಸುತ್ತುವುದು ಹೇಗೆ ? ದೇಹಸ್ಥಿತಿ ಏನಾದೀತು ಎಂಬುದನ್ನು ಉತ್ಸಾಹದ ಚಿಲುಮೆಯಾಗಿದ್ದ ಆ ಧೀರಯತಿವರೇಣ್ಯರು ಲೆಕ್ಕಿಸಲಿಲ್ಲ. ಕಾರ್ಯಸಿದ್ಧಿಯಾಗಬೇಕಾದರೆ ಕಾಯಕ್ಲೇಶಕ್ಕೆ ಸಿದ್ಧವಾಗಿರಬೇಕೆಂಬುದು ಸಿದ್ಧವಾಗಿತ್ತು.

ನಿರೀಕ್ಷಿಸಿದಂತೆ ಪದ್ಮಪಾದಾದಿ ಶಿಷ್ಯರೆಲ್ಲರೂ ಬಂದು ಸೇರಿದರು. ಆಚಾರ್ಯರು ತಮ್ಮ ಮುಂದಿನ ಕಾರ್ಯಯೋಜನೆಯನ್ನು ತಿಳಿಸಿದಾಗ ಅವರೆಲ್ಲರೂ ಸಂತೋಷದಿಂದ ಸಂಮತಿಸಿದರು. ಈಗ ರಾಮೇಶ್ವರಕ್ಕೆ ಹೋಗಿ ದೇವರದರ್ಶನ ಮಾಡಿಕೊಂಡು ಮುಂದಿನ ಕಾರ್ಯವನ್ನಾರಂಭಿಸೋಣ - ಎಂದು ಹೇಳಿ ಶ್ರೀಶಂಕರರು ಶಿಷ್ಯರೊಡನೆ ರಾಮೇಶ್ವರಕ್ಕೆ ಪ್ರಯಾಣ ಮಾಡಿದರು. ಅಲ್ಲಿಗೆ ಹೋಗಿ ಭವ್ಯವಾದ ಶ್ರೀ ರಾಮೇಶ್ವರ ದೇವಾಲಯವನ್ನು ಪ್ರವೇಶಿಸಿದರು. **'ಈಶಾನಃ ಸರ್ವವಿದ್ಯಾ-ನಾಮೀಶ್ವರಃ ಸರ್ವಭೂತಾನಾಂ'** ಎಂಬ ಶ್ರುತಿ ವಚನದಂತೆ ಸಕಲ ವಿದ್ಯೆಗಳಿಗೆ ಅಧಿಪತಿಯೂ ಸರ್ವಜೀವಿಗಳಿಗೆ ಒಡೆಯನೂ ಆದ ಪರಶಿವನನ್ನು ಯತಿಗಳೆಲ್ಲರೂ ಸಂದರ್ಶಿಸಿ ತಮ್ಮ ಕಾರ್ಯಸಿದ್ಧಿಯಾಗಲೆಂದು ಪ್ರಾರ್ಥಿಸಿಕೊಂಡರು.

## ವಿಜಯಯಾತ್ರೆ

ಅದುವರೆಗೆ ಹಿಂದೆ ಯಾರೂ ಮಾಡದಿದ್ದ ಯಾರೂ ಕೇಳದಿದ್ದ ಒಂದು ಮಹಾಕಾರ್ಯವನ್ನು ಶ್ರೀಶಂಕರಭಗವತ್ಪಾದರು ಆರಂಭಿಸಿದರು. ರಾಮೇಶ್ವರದಿಂದ

ಕಾಶಿಯವರೆಗೆ, ಅಲ್ಲಿಂದ ಕಾಶ್ಮೀರದವರೆಗೆ ಧರ್ಮಸ್ಥಾಪನೆಗಾಗಿ ವಿಜಯಯಾತ್ರೆಯನ್ನು ನಡೆಸುವುದೇ ಆ ಮಹಾಕಾರ್ಯ. ವೇದಾಂತದರ್ಶನಕ್ಕೆ ವಿರೋಧಿಗಳಾದ ಪ್ರತಿಪಕ್ಷದವರನ್ನು ವಾದದಲ್ಲಿ ಜಯಿಸಿ, ಸರ್ವಪ್ರಜೆಗಳಿಗೂ ಹಿತಕರವಾದ ಶ್ರೇಯಸ್ಸಿನ ದಾರಿಯನ್ನು ತಿಳಿಸಿಕೊಡುವುದೇ ಅವರ ಉದ್ದೇಶವಾಗಿತ್ತು. ಪ್ರತಿಪಕ್ಷದವರಲ್ಲಿ ಕೆಲವರು ದ್ವೈತವಾದಿಗಳು, ಕೆಲವರು ಭೈರವ, ಕಾಳಿ, ದುರ್ಗಿ-ಮುಂತಾದ ದೇವತೆಗಳನ್ನು ಕ್ರೂರ ಮಾರ್ಗದಲ್ಲಿ ಉಪಾಸನೆ ಮಾಡುತ್ತ ಲೋಕಭಯಂಕರರಾದವರು, ಕೆಲವರು ದೇವರೇ ಇಲ್ಲವೆಂದೂ ಪಾಪಪುಣ್ಯ ಎಂಬಿವು ಬರಿಯ ಕಲ್ಪನೆಗಳೆಂದೂ ವಾದಿಸತಕ್ಕ ನಾಸ್ತಿಕರು, ಕೆಲವರು ಶಾಂತ ಮಾರ್ಗದವರಾದರೂ ವೇದೋಕ್ತ ಮಾರ್ಗವನ್ನು ನಿಂದಿಸತಕ್ಕವರು. ಹೀಗೆ ನಾನಾ ಪ್ರಕಾರದ ಎದುರಾಳುಗಳಿದ್ದರು. ಇವರೆಲ್ಲರನ್ನು ಹಿಂದಕ್ಕೆ ಸರಿಸುವುದು ಸುಲಭವಾಗಿರಲಿಲ್ಲ.

ಅದ್ಭುತವಾದ ಕರ್ತೃತ್ವಶಕ್ತಿಯಿದ್ದ ಶ್ರೀಶಂಕರರು ತರಬೇತಿ ಹೊಂದಿದ್ದ ಶಿಷ್ಯಸೇನೆಯೊಡನೆ ಬಿರುಗಾಳಿಯಂತೆ ನುಗ್ಗಿದರು. ಮೊದಲು ಕೇರಳದ ವಿದ್ವಾಂಸರನ್ನು ಜಯಿಸಿ, ಗೋಕರ್ಣಕ್ಕೆ ಹೋಗಿ ಕರ್ನಾಟಕದಲ್ಲಿ ಸುತ್ತಾಡಿ ತಮಿಳುನಾಡನ್ನು ಹೊಕ್ಕು ಆಂಧ್ರಪ್ರದೇಶದಲ್ಲಿ ಸಂಚರಿಸಿ ಮಹಾರಾಷ್ಟ್ರವನ್ನು ಸೇರಿ, ಪ್ರತಿಪಕ್ಷದವರಾಗಿ ಬಂದ ಸಮಸ್ತ ವಿದ್ವಾಂಸರನ್ನು ಜಯಿಸುತ್ತ ಗುಜರಾತನ್ನು ಪ್ರವೇಶಿಸಿದರು. ಅನಂತರ ಪೂರ್ವದಿಕ್ಕಿಗೆ ತಿರುಗಿ ಬಂಗಾಳದವರೆಗೆ ಹೋದರು. ಅಲ್ಲಿಂದ ಪಶ್ಚಿಮಕ್ಕೆ ತಿರುಗಿ ಕಾಶೀ, ಪ್ರಯಾಗಗಳ ಮಾರ್ಗವಾಗಿ ಪಂಜಾಬಿಗೆ ಬಂದರು. ಕೆಲವೆಡೆಗೆ ಸುರೇಶ್ವರರೇ ಮೊದಲಾದ ಶಿಷ್ಯರು ಹೋಗಿ ವಿದ್ವಾಂಸರೊಡನೆ ಶಾಸ್ತ್ರೀಯವಾದಗಳನ್ನು ಮಾಡುತ್ತ, ಪ್ರವಚನಗಳನ್ನು ನೀಡುತ್ತ, ತಮ್ಮ ಗ್ರಂಥಗಳನ್ನು ಪ್ರಸಾರ ಮಾಡುತ್ತ ಬಂದರು. ಪ್ರತಿವಾದಿಗಳಾದ ಸಾಂಖ್ಯರು, ತಾರ್ಕಿಕರು, ಮೀಮಾಂಸಕರು, ಬೌದ್ಧರು, ಜೈನರು ಮತ್ತು ಕಾಪಾಲಿಕರೇ ಮೊದಲಾದ ಕ್ರೂರಮಾರ್ಗದ ದುರ್ಮತದವರು - ಇವರೆಲ್ಲರನ್ನು ಶ್ರೀ ಶಂಕರಭಗವತ್ಪಾದರು ಜಯಿಸಿ **ಜಗದ್ಗುರು**ಗಳೆನಿಸಿದರು.

ಅವರು ಹೋದೆಡೆಯಲ್ಲಿ ಸರ್ವತ್ರ ಜನಸಮೂಹವು ನೆರೆಯುತ್ತಿತ್ತು. ಅವರೆಲ್ಲರಿಗೂ ಅರ್ಥವಾಗಲೆಂದು ಆಚಾರ್ಯರು ಸರಳ ಭಾಷೆಯಲ್ಲಿ ಪ್ರವಚನ ಮಾಡುತ್ತಿದ್ದರು. ಯಾವ ಜಾತಿಭೇದವೂ ತಾರತಮ್ಯವೂ ಇಲ್ಲದೆ ಸಕಲರಿಗೂ ಸುಖ,

ಶಾಂತಿ, ಶ್ರೇಯಸ್ಸುಗಳು ದೊರಕಲೆಂಬುದೇ ಅವರ ಪರಮೋದ್ದೇಶವಾಗಿತ್ತು. ಸಾರ್ವಜನಿಕವಾಗಿ ನೀಡುತ್ತಿದ್ದ ಉಪನ್ಯಾಸಗಳ ಸಾರವಿದು. "ನಾನು ಬೋಧಿಸುತ್ತಿರುವುದು ನನ್ನಿಂದ ಕಲ್ಪಿತವಾದದ್ದಲ್ಲ. ಹೊಸದಾಗಿ ನಾನು ಯಾವ ಮತವನ್ನೂ ಸ್ಥಾಪಿಸುತ್ತಿಲ್ಲ. ಈಗಲೇ ನೂರಾರು ಮತಗಳು ತುಂಬಿಕೊಂಡು ಜನರನ್ನು ತಪ್ಪುದಾರಿಗೆ ಎಳೆಯುತ್ತಿವೆ. ನನ್ನ ಮತ ಹೆಚ್ಚು, ನನ್ನ ಮತ ಹೆಚ್ಚು ಎಂದು ಜನರು ಜಗಳ ವಾಡುತ್ತಿದ್ದಾರೆ. ನಮ್ಮ ಪುರಾತನ ಋಷಿಗಳು ಯಾವ ಮಾರ್ಗವನ್ನು ನಮಗೆ ತೋರಿಸಿಕೊಟ್ಟಿದ್ದಾರೋ ಅದನ್ನು ನಿಮ್ಮ ಸ್ಮರಣೆಗೆ ತರುತ್ತಿದ್ದೇನೆ. ನನ್ನದೆಂಬ ಹೊಸದೇನೂ ಇಲ್ಲ. ನಮ್ಮ ಹಿರಿಯರು ಕಟ್ಟಿ ನೆಲೆಸಿದ್ದ ಮನೆಯನ್ನು ನಾವು ಮರೆತುಬಿಟ್ಟಿದ್ದೇವೆ. ನಮಗೆ ವೇದವೇ ಪ್ರಮಾಣಗ್ರಂಥ. ಅದನ್ನು ಯಾವ ಮನುಷ್ಯನೂ ರಚಿಸಲಿಲ್ಲ. ಈಶ್ವರನೇ ಅದನ್ನು ಉಪದೇಶಿಸಿದ್ದಾನೆಂದು ತಿಳಿದು ಋಷಿಗಳೂ ಸಹ ಶ್ರದ್ಧಾಭಕ್ತಿಗಳಿಂದ ಅದನ್ನು ಕಲಿಯುತ್ತ ಬಂದಿದ್ದಾರೆ. ಅದು ತೋರಿಸಿಕೊಟ್ಟ ದಾರಿಯಲ್ಲಿ ಹೋಗತಕ್ಕವರಿಗೆ ಇಹದಲ್ಲಿಯೂ ಸುಖ ಉಂಟು, ಪರದಲ್ಲಿಯೂ ಉಂಟು. ವೇದವು ತಿಳಿಸಿಕೊಟ್ಟ ಪ್ರಕಾರದಲ್ಲಿ ಪರಮಾತ್ಮನೊಬ್ಬನೇ ಸತ್ಯವಾಗಿ ಇರತಕ್ಕವನು. ಈ ಜಗತ್ತೆಲ್ಲವೂ ಆತನ ಮಾಯಾಶಕ್ತಿಯಿಂದ ಕಲ್ಪಿತವಾದದ್ದು. ವಿಷ್ಣು, ಶಿವ, ಶಕ್ತಿ, ಗಣಪತಿ, ಸೂರ್ಯ, ದುರ್ಗಾ, ಭೈರವ - ಇವರೆಲ್ಲರೂ ಒಬ್ಬ ಪರಮಾತ್ಮನ ಬೇರೆ ಬೇರೆ ರೂಪಗಳು. ದೇವರು ನಿರಾಕಾರನೇ ಹೌದು. ಆದರೆ ನಾನಾ ಆಕಾರಗಳನ್ನು ತಳೆಯುವ ಶಕ್ತಿ ಆತನಿಗುಂಟು. ಈ ಪ್ರಪಂಚವನ್ನೇ ನಿರ್ಮಿಸಿದವನಿಗೆ, ನಮ್ಮೆಲ್ಲರ ದೇಹಗಳನ್ನು ಸೃಷ್ಟಿಸಿದವನಿಗೆ ತನಗೊಂದು ರೂಪವನ್ನು ನಿರ್ಮಿಸಿಕೊಳ್ಳಲು ಬರುವುದಿಲ್ಲವೆ ? ಆದ್ದರಿಂದ ಆ ದೇವತೆ ಹೆಚ್ಚು, ಈ ದೇವತೆ ಹೆಚ್ಚು ಎಂದು ಜಗಳವಾಡುವುದು ಸರಿಯಲ್ಲ. ಯಾರಿಗೆ ಯಾವ ದೇವತೆಯಲ್ಲಿ ಭಕ್ತಿ ಹುಟ್ಟುವುದೋ ಆ ದೇವತೆಯನ್ನು ಶ್ರದ್ಧೆಯಿಂದ ಪೂಜಿಸಬಹುದು. ನಾನು ಯಾವ ಮತವನ್ನೂ ದೂಷಿಸುವುದಿಲ್ಲ. ಎಲ್ಲ ಮತಗಳಲ್ಲಿಯೂ ಒಳ್ಳೆಯದು ಇದ್ದೇ ಇದೆ. ಜನರ ತಪ್ಪಿನಿಂದ ಅವುಗಳಲ್ಲಿ ಕೆಲವು ದೋಷಗಳು ಸೇರಿಕೊಂಡಿರುತ್ತವೆ. ಅವನ್ನು ಮಾತ್ರ ನಾನು ಖಂಡಿಸುತ್ತೇನೆ. ಸತ್ಯ, ಅಹಿಂಸೆ, ದಯೆ, ಪರೋಪಕಾರ, ಋಜುವಾದ ನಡತೆ, ನಯ, ದೇವರಲ್ಲಿ ಭಕ್ತಿ, ಗುರುಹಿರಿಯರ ಸೇವೆ ಮುಂತಾದ ಸದ್ಗುಣಗಳನ್ನು ಯಾರು ಪಾಲಿಸುತ್ತಾರೋ ಅವರು ಶ್ರೇಷ್ಠಮಾನವರು. ಶಾಸ್ತ್ರೋಕ್ತವಾದ ಕರ್ಮಾಚರಣೆ, ಭಗವಂತನ ಧ್ಯಾನ,

ಪೂಜೆ - ಇವು ಎಲ್ಲರಿಗೂ ಆವಶ್ಯಕವಾದವು. ಇವುಗಳಿಂದ ಚಿತ್ತಶುದ್ಧಿಯಾಗುತ್ತದೆ. ಅನಂತರ ಆತ್ಮಜ್ಞಾನವಾಗುತ್ತದೆ. ಆತ್ಮಜ್ಞಾನದಿಂದ ಮೋಕ್ಷ. ಅದು ನಮ್ಮ ಗುರಿಯಾಗಿರಬೇಕು. ಎಷ್ಟೋ ಪುಣ್ಯಕಾರ್ಯಗಳನ್ನು ಹಿಂದಿನ ಜನ್ಮದಲ್ಲಿ ಮಾಡಿದ್ದರಿಂದ ಈಗ ಮನುಷ್ಯಜನ್ಮ ಬಂದಿದೆ. ಇಂತಹ ಉತ್ತಮವಾದ ಜನ್ಮವನ್ನು ವ್ಯರ್ಥಮಾಡಿಕೊಳ್ಳಬಾರದು. ಎಲ್ಲ ಜಾತಿಮತಗಳೂ ಮೇಲೆ ಹತ್ತುವ ಮೆಟ್ಟಿಲುಗಳು. ಅವನ್ನು ಕ್ರಮವಾಗಿ ಹತ್ತುತ್ತಹೋದರೆ ಮೇಲಿರುವ ದೇವಸ್ಥಾನದ ಗರ್ಭಗುಡಿ ಸಿಗುತ್ತದೆ. ಆಗ ನಿಮಗೆ ದೇವರ ದರ್ಶನವಾಗುತ್ತದೆ. ದೇವರನ್ನೇ ಪೂರ್ಣವಾಗಿ ನಂಬಿ ಸನ್ಮಾರ್ಗದಲ್ಲಿ ನಡೆಯುತ್ತ ಹೋದರೆ ಅವನೇ ನಿಮ್ಮ ಕೈಹಿಡಿದು ದಾರಿ ತೋರಿಸುತ್ತ ಮೇಲಕ್ಕೆ ಕರೆದುಕೊಂಡು ಹೋಗುತ್ತಾನೆ. ಅವನೆಂದಿಗೂ ನಿಮ್ಮ ಕೈ ಬಿಡುವುದಿಲ್ಲ. ನಾನು ಬೋಧಿಸುವುದು ಯಾವ ಹೊಸ ಮತವೂ ಅಲ್ಲ. ನಮ್ಮ ಹಿಂದಿನ ಪರಮರ್ಷಿಗಳೇ ಬೋಧಿಸಿದ್ದು, ನೀವು ಹೊಸಮತಕ್ಕೆ ಸೇರಬೇಕಾದದ್ದೂ ಇಲ್ಲ. ಜಾತಿಯನ್ನು ಬದಲಿಸಬೇಕಾದದ್ದೂ ಇಲ್ಲ. ನಮ್ಮ ಪ್ರಾಚೀನಗ್ರಂಥಗಳು ತೋರಿಸಿಕೊಟ್ಟ ದಾರಿ ಇದೇ. ರಾಮಾಯಣ, ಮಹಾಭಾರತ, ಭಾಗವತ - ಮುಂತಾದ ಸದ್ಗ್ರಂಥಗಳನ್ನು ಓದಿರಿ. ಸತ್ಯವೇನೆಂಬುದು ನಿಮಗೇ ತಿಳಿಯುತ್ತದೆ. ಜಾತಿಯಿಂದ ಯಾರೂ ಅಧಿಕರಲ್ಲ, ಯಾರೂ ಕಳಪೆಯವರಲ್ಲ. ಆದರೆ ಅವರ ಅರ್ಹತೆಗೆ ತಕ್ಕಂತೆ ಆಚರಣೆಗಳು ಬೇರೆ ಬೇರೆಯಾಗಿರುತ್ತವೆ. ಅವೆಲ್ಲವನ್ನು ಶಾಸ್ತ್ರಗಳು ತಿಳಿಸಿಕೊಟ್ಟಿವೆ. ಆತ್ಮಜ್ಞಾನದಲ್ಲಿ ಸರ್ವರಿಗೂ ಅಧಿಕಾರ ಉಂಟು. ನಮ್ಮ ಸ್ವರೂಪವನ್ನು ನಾವು ತಿಳಿದುಕೊಳ್ಳಲು ಯಾವ ಅಡ್ಡಿಯೂ ಇಲ್ಲ. ಆತ್ಮಜ್ಞಾನವೆಂದರೆ ತಮ್ಮ ನಿಜವಾದ ಸ್ವರೂಪವೇನೆಂಬುದರ ಜ್ಞಾನ. ಅದೇ ಪರಮಾತ್ಮಜ್ಞಾನ. ನೀವೆಲ್ಲರೂ ವಾಸ್ತವವಾಗಿ ಪರಮಾತ್ಮ ಸ್ವರೂಪರೇ ಆಗಿದ್ದೀರಿ. ಇದರಲ್ಲಿ ಯಾವ ಸಂಶಯವೂ ಇಲ್ಲ."

ಈ ಪ್ರಕಾರವಾದ ಉಪನ್ಯಾಸಗಳನ್ನು ನೀಡಿ ಶ್ರೀಶಂಕರರು ಜನತೆಯನ್ನು ಪ್ರಾಚೀನವಾದ ಭಾರತೀಯ ವೈದಿಕಮಾರ್ಗಕ್ಕೆ ಆಕರ್ಷಿಸಿದರು. ಪರಕೀಯರ ದಾರ್ಶನಿಕಸಿದ್ಧಾಂತಗಳನ್ನು ಅವರು ಖಂಡಿಸಿದರೇ ಹೊರತು ಯಾವ ಮತವನ್ನೂ ಅವರು ದೂಷಿಸಲಿಲ್ಲ. ಕಾಪಾಲಿಕರೇ ಮೊದಲಾದ ಕೆಲವು ಮತದವರ ದುರಾಚಾರಗಳನ್ನು ಖಂಡಿಸಿದರು. ಚಾರ್ವಾಕರೆಂಬ ನಾಸ್ತಿಕರ ವಾದವನ್ನು ಖಂಡಿಸಿ ತಲೆಯೆತ್ತದಂತೆ ಮಾಡಿದರು. ಬೌದ್ಧರೂ, ಜೈನರೂ ಆತ್ಮ, ಮೋಕ್ಷ ಇವುಗಳಿಗೆ

ಸಂಬಂಧಿಸಿದಂತೆ ಮಂಡಿಸುತ್ತಿದ್ದ ಕೆಲವು ವಾದಗಳನ್ನು ಖಂಡಿಸಿದರು. ಆ ವಾದಗಳು ವೇದವಿರುದ್ಧವಾದವುಗಳೆಂಬುದನ್ನೂ ಯುಕ್ತಿಗಳಿಗೆ ನಿಲುಕುವುದಿಲ್ಲವೆಂಬುದನ್ನೂ ತೋರಿಸಿಕೊಟ್ಟರು. ಸದಾ ಯಜ್ಞಯಾಗಾದಿಕರ್ಮಗಳಲ್ಲಿಯೇ ತೊಡಗಿ ಕರ್ಮದಿಂದಲೇ ಮೋಕ್ಷವೆಂದು ಸಾರುತ್ತಿದ್ದ ಮೀಮಾಂಸಕರ ಮತವನ್ನು ನಿರಾಕರಿಸಿ, ಆತ್ಮಜ್ಞಾನದಿಂದಲೇ ಮೋಕ್ಷವೆಂದು ಸಾರಿದರು.

## ಕಾಶ್ಮೀರದಲ್ಲಿ ಸರ್ವಜ್ಞಪೀಠಾರೋಹಣ

ಹೀಗೆ ಭರತಖಂಡದ ಮೂಲೆಮೂಲೆಗಳಲ್ಲಿಯೂ ಸಂಚರಿಸಿ ಸರ್ವಜನರನ್ನೂ ಒಲಿಸಿಕೊಂಡು, ಅವಶಿಷ್ಟವಾದ ಕಾಶ್ಮೀರವನ್ನು ಪ್ರವೇಶಿಸಿದರು. ಕಾಶ್ಮೀರವು ವಿದ್ಯೆಗೆ ಪ್ರಖ್ಯಾತವಾದ ದೇಶ. ಅಲ್ಲಿ ಶೈವ, ಶಾಕ್ತ - ಎಂಬ ಎರಡು ಮತಗಳು ಪ್ರಚಾರದಲ್ಲಿದ್ದವು. ಅವು ಸಾತ್ತ್ವಿಕ ಮಾರ್ಗದಲ್ಲಿದ್ದವೇ ಹೊರತು, ತಾಮಸಮಾರ್ಗವನ್ನು ಪ್ರವೇಶಿಸಿರಲಿಲ್ಲ. ಆಚಾರ್ಯರು ಕಾಶ್ಮೀರಕ್ಕೆ ಹೋದಾಗ ಕಾಶ್ಮೀರದ ಕಣಿವೆಗಳಲ್ಲಿ ಬೌದ್ಧಮತವೂ ಹರಡಿತ್ತು. ಆಚಾರ್ಯರು ತಮ್ಮ ಅದ್ವೈತಸಿದ್ಧಾಂತವನ್ನು ಪ್ರಚುರಪಡಿಸುತ್ತ ಶ್ರೀನಗರಕ್ಕೆ ಹೋದರು. ಅವರ ವೈದುಷ್ಯಕ್ಕೆ ತಲೆಬಾಗಿದ ವಿದ್ವಾಂಸರು ಶ್ರೀಶಂಕರರಿಗೆ ಭವ್ಯವಾದ ಸ್ವಾಗತವನ್ನು ನೀಡಿದರು.

ಶ್ರೀನಗರದಲ್ಲಿ ಒಂದು ಪ್ರಸಿದ್ಧವಾದ ಶಾರದಾ ದೇವಾಲಯವಿದ್ದಿತು. ಮಂಟಪದ ಆಕಾರದಲ್ಲಿದ್ದ ಆ ದೇವಾಲಯಕ್ಕೆ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಪ್ರವೇಶ ದ್ವಾರಗಳಿದ್ದವು. ಒಳಗೆ ಶಾರದಾದೇವಿಯ ಪಕ್ಕದಲ್ಲಿ ಒಂದು ಪೀಠವಿತ್ತು. ಅದು ಸರ್ವಜ್ಞಪೀಠವೆಂದು ವಿಖ್ಯಾತವಾಗಿತ್ತು. ನಾನಾ ಶಾಸ್ತ್ರಗಳಲ್ಲಿ ಪಾರಂಗತರಾದ ವಿದ್ವಾಂಸರು ದೇವಸ್ಥಾನದ ಪ್ರಾಂಗಣದಲ್ಲಿ ಬಂದು ಸೇರುತ್ತಿದ್ದರು. ಆ ವಿದ್ವಾಂಸರು ಕೇಳಿದ ಪ್ರಶ್ನೆಗಳಿಗೆಲ್ಲ ಯಾರು ಸಮರ್ಪಕವಾದ ಉತ್ತರಗಳನ್ನಿತ್ತು ಜಯಶಾಲಿಗಳಾಗುತ್ತಿದ್ದರೋ, ಸರ್ವಜ್ಞರೆಂಬ ಕೀರ್ತಿಗೆ ಪಾತ್ರರಾಗುತ್ತಿದ್ದರೋ ಅವರು ಮಾತ್ರ ಆ ದ್ವಾರದಿಂದ ಪ್ರವೇಶಿಸಿ ಸರ್ವಜ್ಞ ಪೀಠವನ್ನೇರಬಹುದಾಗಿತ್ತು. ಅದುವರೆಗೆ ಭರತಖಂಡದ ಪೂರ್ವ, ಪಶ್ಚಿಮ, ಉತ್ತರ ದಿಕ್ಕಿನ ರಾಜ್ಯಗಳಿಂದ ಬಂದ ವಿದ್ವಾಂಸರು ಮಾತ್ರ ಈ ರೀತಿಯಲ್ಲಿ ಆಯಾ ದಿಕ್ಕಿನ ಬಾಗಿಲುಗಳನ್ನು ತೆರೆಸಿ ಸರ್ವಜ್ಞಪೀಠವನ್ನೇರಿದ್ದರು. ದಕ್ಷಿಣ ಭಾರತದ ಯಾವ ವಿದ್ವಾಂಸನೂ ಆ

ಪೀಠವನ್ನೇರಲು ಸಮರ್ಥನಾಗಿರಲಿಲ್ಲ. ಆದ್ದರಿಂದ ದಕ್ಷಿಣದ ಬಾಗಿಲನ್ನು ತೆರೆದಿರಲಿಲ್ಲ. ಇದು ದಾಕ್ಷಿಣಾತ್ಯರಿಗೆ ಅವಮಾನಕರವೆಂದು ಭಾವಿಸಿ ಶ್ರೀಶಂಕರಾಚಾರ್ಯರು ತಮ್ಮ ಶಿಷ್ಯರೊಡನೆ ದೇವಾಲಯಕ್ಕೆ ಹೋಗಿ ತಮ್ಮ ಉದ್ದೇಶವನ್ನು ತಿಳಿಸಿದರು. ಆಗ ಅಲ್ಲಿದ್ದ ವಿದ್ವಾಂಸರಿಗೂ ಆಚಾರ್ಯರಿಗೂ ವಿವಿಧ ಶಾಸ್ತ್ರಗಳಲ್ಲಿ ಪ್ರಶ್ನೋತ್ತರಗಳಾದವು. ಜೈನರೂ ಬೌದ್ಧರೂ ಸಹ ತಮ್ಮ ಮತಗ್ರಂಥಗಳಿಗೆ ಸಂಬಂಧಿಸಿದಂತೆ ಕಠಿಣವಾದ ಪ್ರಶ್ನೆಗಳನ್ನು ಕೇಳಿದರು. ಸಕಲರ ಪ್ರಶ್ನೆಗಳಿಗೂ ಶ್ರೀಶಂಕರರು ಸ್ವಲ್ಪವೂ ತಡವರಿಸದೆ ಧೀರವಾಣಿಯಿಂದ ಸಮರ್ಪಕವಾದ ಉತ್ತರಗಳನ್ನಿತ್ತರು. ಅವರು ಸರ್ವಜ್ಞಪೀಠವನ್ನೇರಲು ಅರ್ಹರೆಂದು ಸಕಲ ವಿದ್ವಾಂಸರೂ ಏಕಾಭಿಪ್ರಾಯದಿಂದ ತೀರ್ಪನ್ನಿತ್ತರು. ದೇವಾಲಯದ ದಕ್ಷಿಣದ್ವಾರವು ತೆರೆಯಿತು. ನೆರೆದಿದ್ದ ಸರ್ವಜನರ ಜಯಘೋಷದೊಡನೆ ಆಚಾರ್ಯರು ಆ ದ್ವಾರದಿಂದ ಪ್ರವೇಶಿಸಿ ಶಾರದಾದೇವಿಗೆ ನಮಸ್ಕರಿಸಿ **ಸರ್ವಜ್ಞಪೀಠವನ್ನೇರಿ ಕುಳಿತು ಬಾಲರವಿಯಂತೆ ವಿರಾಜಿಸಿದರು.** ಜಗದ್ಗುರು ಶ್ರೀ ಶಂಕರಭಗವತ್ಪಾದರಿಗೆ ಜಯವಾಗಲಿ ಎಂಬ ಜಯಘೋಷವು ಎಲ್ಲೆಲ್ಲಿಯೂ ಮೊಳಗಿತು.

ಆಚಾರ್ಯರು ಕಾಶ್ಮೀರದಲ್ಲಿ ಗಳಿಸಿದ ಮಹಾಗೌರವಕ್ಕೆ ಶ್ರೀನಗರದ ಬಳಿಯಿರುವ 'ಶಂಕರಗಿರಿ'ಯು ಇಂದಿಗೂ ಸಾಕ್ಷಿಯಾಗಿ ನಿಂತಿದೆ. ಕಾಶ್ಮೀರಿಗಳು ಶ್ರೀನಗರದ ಹತ್ತಿರವಿರುವ ಆ ಬೆಟ್ಟದ ಮೇಲೆ ಶ್ರೀಶಂಕರ ದೇವಸ್ಥಾನವನ್ನು ಕಟ್ಟಿ ಆ ಬೆಟ್ಟಕ್ಕೆ **'ಶಂಕರಗಿರಿ'** ಎಂದು ಹೆಸರಿಟ್ಟರು.

## ವಿಜಯಯಾತ್ರೆಯ ಸಮಾಪ್ತಿ

ಕಾಶ್ಮೀರದಲ್ಲಿ ವೈದಿಕ ಸಿದ್ಧಾಂತವನ್ನು ಪ್ರಸ್ತುತಗೊಳಿಸಿ ಸರ್ವಜ್ಞಪೀಠವನ್ನೇರಿದ ಮೇಲೆ, ಶ್ರೀಶಂಕರಭಗವತ್ಪಾದರಿಗೆ ತಮ್ಮ ಕರ್ತವ್ಯ ಮುಗಿಯಿತು ಎನ್ನಿಸಿರಬೇಕು. ಅವರು ತಮ್ಮ ಸಂನ್ಯಾಸಿಶಿಷ್ಯರನ್ನು ಕುರಿತು ಹೀಗೆಂದರು : ನಾವು ಸಂಕಲ್ಪಿಸಿದ ಕಾರ್ಯವು ಭಗವಂತನ ದಯೆಯಿಂದ ನಿರ್ವಿಘ್ನವಾಗಿ ನೆರವೇರಿತು. ನಿಮ್ಮೆಲ್ಲರ ಸಹಕಾರದಿಂದ ನನ್ನ ಗುರುಗಳ ಆಜ್ಞೆಯನ್ನು ಪಾಲಿಸಲು ಶಕ್ಯವಾಯಿತು. ಈ ಔಪನಿಷದದರ್ಶನವೂ ವೈದಿಕಕರ್ಮಾಚರಣೆಯೂ ಈ ರಾಷ್ಟ್ರದಲ್ಲಿ ಚಿರಕಾಲದವರೆಗೆ ನಿಂತಿದ್ದರೆ ಮಾತ್ರ ನಾವು ಸಾಧಿಸಿದ ಕಾರ್ಯವು ಸಾರ್ಥಕವಾಗುವುದು. ವೇದಬಾಹ್ಯವಾದ ನಾಸ್ತಿಕ ಮತಗಳು ಬೆಳೆಯದಂತೆಯೂ ವೈದಿಕಧರ್ಮವು ಉಳಿಯುವಂತೆಯೂ ಆಗಲು ನಾನೊಂದು ನೂತನ ಯೋಜನೆಯನ್ನು ತರಬೇಕೆಂದು ಸಂಕಲ್ಪಿಸಿದ್ದೇನೆ.

ಈಗಾಗಲೆ ವೈದಿಕಧರ್ಮದ ಬಗ್ಗೆ ಜಾಗೃತಿಯುಂಟಾಗಿದೆ. ಇದು ನಿರಂತರವಾಗಿ ಮುಂದುವರಿಯಬೇಕಾದರೆ ಇದರ ಅಧ್ಯಯನ, ಬೋಧನೆ, ಆಚರಣೆ, ಪ್ರಚಾರಗಳು ಸದಾ ನಡೆಯುತ್ತಿರುವಂತೆ ನೋಡಿಕೊಳ್ಳುವ ಒಂದು ವ್ಯವಸ್ಥೆಬೇಕು. **ಅದಕ್ಕಾಗಿ ಭಾರತದ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ಮಠಗಳನ್ನು ಸ್ಥಾಪಿಸಿದ್ದೇನೆ. ದಕ್ಷಿಣದಲ್ಲಿ ಶೃಂಗೇರಿ, ಪಶ್ಚಿಮದಲ್ಲಿ ದ್ವಾರಕಾ, ಉತ್ತರದಲ್ಲಿ ಬದರಿ, ಪೂರ್ವದಲ್ಲಿ ಜಗನ್ನಾಥಪುರಿ** - ಹೀಗೆ ಈ ಸ್ಥಳಗಳಲ್ಲಿ ಸ್ಥಾಪಿಸಿದ ಮಠಗಳು ಆಯಾ ಪ್ರದೇಶಗಳಲ್ಲಿ ಧರ್ಮರಕ್ಷಣೆಯಾಗುವಂತೆ ನೋಡಿಕೊಳ್ಳಬೇಕು. ನನ್ನ ಶಿಷ್ಯರಲ್ಲಿ ಸುರೇಶ್ವರಾಚಾರ್ಯರು ಶೃಂಗೇರಿಯಲ್ಲಿ, ಪದ್ಮಪಾದರು ದ್ವಾರಕೆಯಲ್ಲಿ, ತೋಟಕರು ಬದರಿಯಲ್ಲಿ, ಹಸ್ತಾಮಲಕರು ಜಗನ್ನಾಥಪುರಿಯಲ್ಲಿ ಪೀಠಾಧಿಪತಿಗಳಾಗಿದ್ದುಕೊಂಡು ಧಾರ್ಮಿಕಪರಂಪರೆಯನ್ನು ಮುಂದುವರಿಸಬೇಕು. ಈ ಕ್ರಮವನ್ನನುಸರಿಸಿ ನನ್ನ ಶಿಷ್ಯರಾದ ಇತರ ಯತಿಗಳೂ ದೇಶದ ಸೂಕ್ತ ಸ್ಥಳಗಳಲ್ಲಿ ಮಠಗಳನ್ನು ಸ್ಥಾಪಿಸಿ ಧರ್ಮಕಾರ್ಯಗಳನ್ನು ಮುಂದುವರಿಸಬೇಕೆಂಬುದು ನನ್ನ ಅಭಿಪ್ರಾಯ.

ನನ್ನನ್ನು ಇದುವರೆಗೆ ಹಲವಾರು ಬಗೆಗಳಲ್ಲಿ ಶ್ರದ್ಧೆಯಿಂದ ಸೇವಿಸಿದ್ದೀರಿ. ಕಾಲ್ನಡಗೆಯಿಂದಲೇ ದಾರಿಯನ್ನು ಸುತ್ತಿ ಸುತ್ತಿ ದಣಿದಿದ್ದೀರಿ. ಸರ್ವೇಶ್ವರನಾದ ಭಗವಂತನು ನಿಮಗೆ ಸಕಲಶ್ರೇಯಸ್ಸುಗಳನ್ನೂ ಅನುಗ್ರಹಿಸಲೆಂದು ಹಾರೈಸುತ್ತೇನೆ. ಇನ್ನು ನೀವು ಇಷ್ಟ ಬಂದೆಡೆಗೆ ಹೊರಡಬಹುದು - ಎಂದು ನುಡಿದು ಆ ಯತಿಗಳೆಲ್ಲರನ್ನೂ ಬೀಳ್ಗೊಟ್ಟರು. ಭಗವತ್ಪಾದರ ನಿರ್ವ್ಯಾಜಕಾರುಣ್ಯಕ್ಕೆ ಪಾತ್ರರಾಗಿದ್ದ ಆ ಯತಿಶ್ರೇಷ್ಠರು ಗುರುಗಳನ್ನು ಅಗಲಬೇಕಾಗಿ ಬಂದಿದ್ದರಿಂದ ವ್ಯಥೆಪಡುತ್ತ ಶೋಕ ಸಂತಪ್ತರಾದರು. ಕಣ್ಣೀರು ಹರಿಯಿತು. ಆಚಾರ್ಯರಿಗೆ ಸಾಷ್ಟಾಂಗ ಪ್ರಣಾಮಗಳನ್ನರ್ಪಿಸಿ ಮೆಲ್ಲಮೆಲ್ಲನೆ ಹೆಜ್ಜೆಯನ್ನಿಡುತ್ತಾ ನಿರ್ಗಮಿಸಿದರು.

## ನಿರ್ವಾಣ

ಆಮೇಲೆ ಭಗವತ್ಪಾದರು ಬದರಿಕಾಶ್ರಮಕ್ಕೆ ಒಬ್ಬರೇ ತೆರಳಿ ಶ್ರೀಮನ್ನಾರಾಯಣನನ್ನು ಧ್ಯಾನಿಸುತ್ತ ಕೆಲವು ದಿನಗಳಿದ್ದರು. ಅನಂತರ ಕೇದಾರಕ್ಕೆ ಹೋದರು. ಆಚಾರ್ಯರು ಭೂಮಿಯಲ್ಲವತರಿಸಿ ಮೂವತ್ತೆರಡು ವರ್ಷಗಳು ಮಾತ್ರ ಸಂದಿದ್ದವು. ಕೇದಾರದಲ್ಲಿ ಸ್ವಲ್ಪದಿನಗಳವರೆಗೆ ಧ್ಯಾನಸ್ಥರಾಗಿದ್ದರು. ಅನಂತರ

ಶ್ರೀಭಗವತ್ಪಾದರು ನಿರ್ವಿಕಲ್ಪಕಸಮಾಧಿಯನ್ನೇರಿ, ಮಾನವದೇಹವನ್ನು ವಿಸರ್ಜಿಸಿ, ಸ್ವಸ್ವರೂಪವನ್ನು ತಳೆದರು.

**ಶ್ರೀಶಂಕರಾಚಾರ್ಯರ ಜೀವನಕಾಲ ಕೇವಲ ಮೂವತ್ತೆರಡು ವರ್ಷಗಳು.** ಇಷ್ಟು ಅಲ್ಪಕಾಲದಲ್ಲಿ ಆದ ಅವರ ಸಾಧನೆಗಳನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಸಕಲ ವೇದೋಪನಿಷತ್ತುಗಳ ಕಂಠಪಾಠ, ಸರ್ವಶಾಸ್ತ್ರಗಳಲ್ಲಿಯೂ ಗಳಿಸಿದ ಅಸಾಧಾರಣವಾದ ಪಾಂಡಿತ್ಯಗಳಲ್ಲದೆ ಪ್ರಸ್ಥಾನತ್ರಯಭಾಷ್ಯಗಳ ನಿರ್ಮಾಣ, ವಿವೇಕಚೂಡಾಮಣಿಯೇ ಮೊದಲಾದ ವೇದಾಂತಗ್ರಂಥಗಳ ರಚನೆ, ನಾನಾ ದೇವತೆಗಳನ್ನು ಕುರಿತು ಮಾಡಿದ ವಿವಿಧಸ್ತೋತ್ರಗಳು, ವಿಷ್ಣುಸಹಸ್ರನಾಮಭಾಷ್ಯ - ಇತ್ಯಾದಿಗ್ರಂಥಗಳ ರಚನೆಗೆ ಎಷ್ಟು ಕಾಲ ಹಿಡಿದಿರಬಹುದು ? ಶಿಷ್ಯರಿಗೆ ಅಧ್ಯಾಪನೆ, ವಿದ್ವಾಂಸರೊಡನೆ ವಾದ - ಚರ್ಚೆಗಳು, ಇವುಗಳೊಡನೆ ಈ ಭರತಖಂಡವನ್ನು ಪ್ರಾಯಶಃ ಎರಡು ಸಲ ಕಾಲ್ನಡಗೆಯಿಂದ ಸುತ್ತಿದ್ದಾರೆ. ಇನ್ನು ಅನುಷ್ಠಾನ, ಜಪ, ತಪಸ್ಸುಗಳು - ಇವೆಲ್ಲವನ್ನೂ ಪರಿಶೀಲಿಸಿ ಭಕ್ತಜನರು ಶ್ರೀಶಂಕರರನ್ನು ಸಾಕ್ಷಾತ್ ಶ್ರೀ ಶಂಕರನ ಅವತಾರಪುರುಷರೆಂದು ನಂಬಿದ್ದಾರೆ.

## ಆಚಾರ್ಯರಿಂದಾದ ಲೋಕೋಪಕಾರಗಳು

### ೧. ಪ್ರಾಚೀನ ಧರ್ಮದ ಪುನಃಸ್ಥಾಪನೆ

ವೇದೋಪನಿಷತ್ತುಗಳು ಜಗತ್ತಿನಲ್ಲಿ ಅತ್ಯಂತ ಪ್ರಾಚೀನ ಸಾಹಿತ್ಯ ಗ್ರಂಥಗಳೆಂದು ಎಲ್ಲ ಇತಿಹಾಸಕಾರರೂ ಒಪ್ಪಿಕೊಂಡಿದ್ದಾರೆ. ಪ್ರಾಚೀನವಾದ್ದರಿಂದ ವೇದವು ಪ್ರಶಸ್ತವೆಂದು ನಾವು ಹೇಳಬೇಕಾಗಿಲ್ಲ, ಅದರಲ್ಲಿರುವ ಜ್ಞಾನವಿಜ್ಞಾನಗಳ ಸಂಪತ್ತಿಗಾಗಿ ವೇದವು ಪ್ರಶಸ್ತವಾಗಿದೆ. ಆಶ್ಚರ್ಯಕರವಾದ ಈ ಜ್ಞಾನಸಂಪತ್ತು ಇನ್ನೆಲ್ಲಿಯೂ ದೊರೆಯಲಾರದು. ಪ್ರಪಂಚದಲ್ಲಿರುವ ಎಲ್ಲ ಮನುಷ್ಯರ ಸೌಖ್ಯವನ್ನು ಬಯಸಿ ಅವರ ಶ್ರೇಯಸ್ಸಿಗೆ ಮಾರ್ಗವೇನೆಂಬುದನ್ನು ವೇದ ಸಾಹಿತ್ಯವು ತಿಳಿಸಿಕೊಡುತ್ತದೆ. ಇದಕ್ಕೆ ಕಾರಣವೇನೆಂದರೆ, ವೇದವು ಯಾವ ಒಬ್ಬ ಮನುಷ್ಯನಿಂದ ರಚಿತವಾದ್ದಲ್ಲ. ಎಷ್ಟಾದರೂ ಮನುಷ್ಯರ ತಿಳಿವಳಿಕೆ ಅಲ್ಪವಾದದ್ದು. ತನ್ನ ಹೆಚ್ಚುಗಾರಿಕೆಯನ್ನು ತೋರಿಸಿಕೊಡಬೇಕೆಂಬ ಒಂದು ಬಗೆಯ ಅಹಂಕಾರವೂ ಸ್ವಾರ್ಥವೂ ಅವನ ಉಪದೇಶದಲ್ಲಿ ಸೇರಿಕೊಂಡಿರುತ್ತವೆ. ವೇದವಾದರೋ ಋಷಿಗಳಿಂದ ದೃಷ್ಟವಾದದ್ದು. ವಸಿಷ್ಠ, ವಾಮದೇವ ಮುಂತಾದ ಋಷಿಗಳು ತಪಸ್ಸು

ಮಾಡುವಾಗ ಹೊಳೆದ ಸತ್ಯಗಳೇ ವೇದಗಳು. ಬಹುಮಂದಿ ಋಷಿಗಳು ತಪೋಬಲದಿಂದ ಹೇಳಿದ ಸತ್ಯಗಳಿವು. ಆದ್ದರಿಂದಲೇ ಅವುಗಳಲ್ಲಿ ಪರಸ್ಪರ ವಿರೋಧವೇ ಇಲ್ಲ. ಸಾಧಾರಣ ಮನುಷ್ಯರು ರಚಿಸಿದ್ದಾದರೆ ಪರಸ್ಪರ ವಿರೋಧವಿದ್ದೇ ಇರುತ್ತದೆ. ಇವೇ ಮೊದಲಾದ ಕಾರಣಗಳಿಂದ ಮನುಷ್ಯರೆಲ್ಲರ ಶ್ರೇಯಸ್ಸಿಗೆ ವೇದಮಾರ್ಗವೇ ಉತ್ತಮವೆಂದು ಭಾರತೀಯರು ದೃಢವಾಗಿ ನಂಬಿದ್ದಾರೆ. ಈ ವೈದಿಕ ಧರ್ಮಕ್ಕೆ ಹಾನಿಯೊದಗಿದಾಗ ಶ್ರೀಶಂಕರಾಚಾರ್ಯರು ಇದನ್ನು ಉದ್ಧರಿಸಿ ಪುನಃಸ್ಥಾಪನೆ ಮಾಡಲು ಪ್ರಯತ್ನಿಸಿ ಯಶಸ್ವಿಯಾದರು. ಶ್ರೀಶಂಕರರು ವೈದಿಕಧರ್ಮದಲ್ಲಿ ತೇಜೋವೀರ್ಯಬಲಗಳನ್ನು ತುಂಬಿ ಜನರ ನಿಷ್ಠೆಯನ್ನು ಪ್ರಬಲಗೊಳಿಸಿದರು. ಆದ್ದರಿಂದಲೇ ಹಿಂದೂಮತವು ಈ ರಾಷ್ಟ್ರದಲ್ಲಿ ಇನ್ನೂ ಜೀವಂತವಾಗಿದೆ. ಇಲ್ಲದಿದ್ದರೆ ಮುಸಲ್ಮಾನ ಧಾಳಿಕಾರರ ಖಡ್ಗಕ್ಕೆ ಬಲಿಯಾಗಿ ಈ ರಾಷ್ಟ್ರವು ಇಸ್ಲಾಂಮಯವಾಗಿ ಹೋಗುತ್ತಿತ್ತು. ಆಫ್ಘಾನಿಸ್ತಾನದಿಂದ ತುರ್ಕಿಸ್ಥಾನದವರೆಗೆ ಮಧ್ಯಏಷ್ಯಾವೆಲ್ಲವೂ ಇಂಡೋನೇಷಿಯಾವೂ ಮುಸ್ಲಿಂ ಮಯವಾಗಿರುವುದನ್ನು ಗಮನಿಸಬೇಕು. ವೈದಿಕ ಧರ್ಮವು ಆ ದೇಶಗಳಲ್ಲಿ ಇರಲೇ ಇಲ್ಲ. ಈ ಕಾರಣವನ್ನು ಇತಿಹಾಸಕಾರರು ಒಪ್ಪಿಕೊಂಡಿದ್ದಾರೆ.

ಆಚಾರ್ಯರು ರಾಮೇಶ್ವರದಿಂದ ಕಾಶ್ಮೀರ, ಬದರಿ, ಕೇದಾರಗಳವರೆಗೆ ಎಲ್ಲ ದೇಶಗಳಲ್ಲಿಯೂ ಕಾಲ್ನಡಗೆಯಿಂದ ಸಂಚರಿಸಿ ವೈದಿಕ ಧರ್ಮವನ್ನು ಪ್ರಚಾರ ಮಾಡಿದರು. ಆ ಕಾಲದಲ್ಲಿ ಬೌದ್ಧ, ಜೈನ ಮತಗಳಲ್ಲದೆ ಶಾಕ್ತ, ಸೌರ, ಕೌಮಾರ, ಗಾಣಪತ - ಮುಂತಾದ ನೂರಾರು ಮತಗಳು ತಲೆಯೆತ್ತಿ ಪ್ರಬಲವಾಗಿದ್ದವು. ವೇದಸಂಮತವಲ್ಲದ ವಿಷಯಗಳನ್ನು ಜನರಿಗೆ ಬೋಧಿಸುತ್ತಿದ್ದುದರಿಂದ, ಯಾವುದು ಸರಿಯೆಂದು ತಿಳಿಯಲಾರದೆ ಜನರು ದಿಕ್ಕು ತಪ್ಪಿದ್ದರು. ಅವರಿಗೆ ಹಿಂದಿನಿಂದ ಬಂದ ಋಷಿಸಂಮತವಾದ ವೈದಿಕಧರ್ಮ ಯಾವುದೆಂಬುದನ್ನು ತಿಳಿಸಿಕೊಟ್ಟು ದಾರಿಗಾಣಿಸುವ ಒಬ್ಬ ಮಹಾಪುರುಷನ ಆವಶ್ಯಕತೆ ಇತ್ತು. ಈ ಕಾರ್ಯವನ್ನು ಶ್ರೀಶಂಕರರು ಪೂರೈಸಿದರು.

ಶ್ರೀಶಂಕರಾಚಾರ್ಯರು ತಾನು ದೇವಪುತ್ರನೆಂದಾಗಲಿ, ದೇವದೂತನೆಂದಾಗಲಿ, ದೇವರ ಅವತಾರವೆಂದಾಗಲಿ ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಯುಕ್ತಿ, ಪ್ರಮಾಣ, ಅನುಭವ - ಇವುಗಳಿಂದ ತಾವು ಉಪದೇಶಿಸುವುದು ನಿಜವಾದ ವೈದಿಕ ಧರ್ಮವೆಂಬುದನ್ನು ಜನರಿಗೆ ಮನವರಿಕೆ ಮಾಡಿದರು. ಗುರುಶಿಷ್ಯಪರಂಪರೆಯಿಂದ

ತಿಳಿದು ಬಂದ ಪರಮಾರ್ಥವನ್ನು ತಮ್ಮ ವಾಗ್ವೈಭವದಿಂದ ಪ್ರತಿಪಾದಿಸಿದರು.

ದೇವರು ಯಾವ ರೀತಿಯಲ್ಲಿದ್ದಾನೆಂಬುದನ್ನಾಗಲಿ, ಈ ವಿಶ್ವದ ಸೃಷ್ಟಿ, ಸ್ಥಿತಿ, ಲಯಗಳು ನಿಯಮಾನುಸಾರ ನಡೆಯುವ ಬಗೆ ಹೇಗೆಂಬುದನ್ನಾಗಲಿ, ಮನುಷ್ಯನು ಸತ್ತ ಮೇಲೆ ಏನಾಗುತ್ತದೆಯೆಂಬುದನ್ನಾಗಲಿ ಮನುಷ್ಯನು ಎಂದಿಗೂ ತಿಳಿಯಲಾರ. ಮನುಷ್ಯನು ತನ್ನ ಊಹೆಯಿಂದ ಕಲ್ಪಿಸಿದ ಯಾವ ಮತವೂ ಸತ್ಯವಾಗಲಾರದು. ಆದ್ದರಿಂದ ಪ್ರಾಚೀನ ಋಷಿಗಳಿಗೆ ಗೋಚರವಾದದ್ದೂ ಅಪೌರುಷೇಯವೂ ಆದ ವೇದವು ಮಾತ್ರ ಮೇಲ್ಕಂಡ ವಿಷಯಗಳಲ್ಲಿ ಬೆಳಕನ್ನು ನೀಡಬಲ್ಲದು. ಪರಮಾತ್ಮನೇ ಜಗತ್ತಿನ ಎಲ್ಲ ಜೀವಿಗಳಿಗೂ ಸೌಖ್ಯವಾಗಲೆಂದು ಋಷಿಗಳ ಮೂಲಕ ವೇದವನ್ನು ಪ್ರಕಾಶಗೊಳಿಸಿದ್ದಾನೆ - ಎಂಬುದು ಆಚಾರ್ಯರ ನಿಲುವು. ವಾಸ್ತವವಾಗಿ ಭಾರತೀಯರು ಇದನ್ನೇ ನಂಬಿ ವೇದವನ್ನು ಕಂಠಪಾಠ ಮಾಡಿ ಇದುವರೆಗೂ ಉಳಿಸಿಕೊಂಡು ಬಂದಿದ್ದಾರೆ. ಆದ್ದರಿಂದ ವೇದವಿರುದ್ಧವಾದ ಇತರ ಮತಗಳನ್ನು ಶ್ರೀಶಂಕರರು ಖಂಡಿಸಿ ಆ ಎಲ್ಲ ಮತಗಳಲ್ಲೂ ಇದ್ದ ತಪ್ಪುಗಳನ್ನು ತೋರಿಸಿಕೊಟ್ಟರು. ತಮ್ಮ ಸೂತ್ರಭಾಷ್ಯಾದಿಗ್ರಂಥಗಳನ್ನು ಪ್ರಸಾರ ಮಾಡುತ್ತ ಪ್ರವಚನಗಳನ್ನು ನೀಡುತ್ತ ರಾಷ್ಟ್ರದ ಸಮಸ್ತ ಪ್ರದೇಶಗಳಲ್ಲಿಯೂ ಸಂಚರಿಸಿದರು. ಆಗ ಅವೈದಿಕ ಮತಗಳು ಹಿಂದಕ್ಕೆ ಸರಿದವು. ವೈದಿಕಧರ್ಮದ ಹಿರಿಮೆ ತಲೆಯೆತ್ತಿತು. ಹಿಂದೆ ಹೇಳಿದಂತೆ ಅವರು ಸ್ಥಾಪಿಸಿದ ನಾಲ್ಕು ಪ್ರಧಾನ ಮಠಗಳಲ್ಲದೆ ಅವರ ಶಿಷ್ಯರಿಂದಲೂ ರಾಷ್ಟ್ರದ ನಾನಾ ಭಾಗಗಳಲ್ಲಿ ಮಠಗಳು ಸ್ಥಾಪಿತವಾದವು. ವೇದ ವೇದಾಂತಗಳ ಅಧ್ಯಯನಕ್ಕೆ ವಿಶೇಷವಾದ ಆಸಕ್ತಿ ಜನರಲ್ಲಿ ಮೂಡಿತು. ಈ ಪ್ರಕಾರವಾಗಿ ಆಚಾರ್ಯರಿಂದ ವೈದಿಕ ಧರ್ಮದ ಪುನರುತ್ಥಾನವಾಯಿತು. ಆಚಾರ್ಯರು ಅಷ್ಟೊಂದು ಪರಿಶ್ರಮಿಸದಿದ್ದರೆ ವೇದವೇದಾಂಗಗಳು ನಾಮಾವಶೇಷವಾಗಿ ಬಿಡುತ್ತಿದ್ದವು.

## ೨. ಅದ್ವೈತದಲ್ಲಿ ಸರ್ವ ಸಮನ್ವಯ

ಆಚಾರ್ಯರು ಬೋಧಿಸಿದ ವೇದಾಂತ ದರ್ಶನಕ್ಕೆ 'ಅದ್ವೈತ' ಎಂದು ಹೆಸರು. ದ್ವೈತವೆಂದರೆ ಎರಡಾಗಿರುವುದು, ಅನೇಕವಾಗಿರುವುದು ಎಂದರ್ಥ. ಎರಡು ಎಂಬುದು ಸತ್ಯವಲ್ಲ, ಇರತಕ್ಕದ್ದು ಒಂದೇ ವಸ್ತು ಎನ್ನುವುದು ಅದ್ವೈತ. ಪರಮಾತ್ಮನು ಒಬ್ಬನೇ. ಅವನೇ ಈ ಜಗತ್ತನ್ನು ತನ್ನಲ್ಲಿರುವ ಅದ್ಭುತ ಶಕ್ತಿಯಿಂದ

ನಿರ್ಮಿಸಿದ್ದಾನೆ. ಈ ಜಗತ್ತು ಸತ್ಯವಾಗಿ ಯಾವಾಗಲೂ ಇರತಕ್ಕದ್ದಲ್ಲ - ಎನ್ನುವುದು ಅದ್ವೈತವೇದಾಂತದ ಸಾರಾಂಶ. ಉಪನಿಷತ್ತುಗಳು ದೇವರನ್ನು ಬ್ರಹ್ಮ, ಆತ್ಮ ಎಂಬ ಶಬ್ದದಿಂದ ಹೆಚ್ಚಾಗಿ ವ್ಯವಹರಿಸುತ್ತವೆ. ದೇವರು, ಬ್ರಹ್ಮ, ಆತ್ಮ, ಪರಮಾತ್ಮ, ಈಶ್ವರ - ಎಂದರೆ ಒಬ್ಬನೇ. ದೇವನೊಬ್ಬ ನಾಮ ಹಲವು. ದೇವರು ಗಂಡಸೇ ಹೆಂಗಸೇ ಎಂದೂ ಹೇಳಲಾಗುವುದಿಲ್ಲ. ಅವನು ನಿರಾಕಾರನಾದರೂ ಭಕ್ತರಿಗಾಗಿ ಸಾಕಾರನೂ ಆಗುತ್ತಾನೆ. ಶಿವ, ವಿಷ್ಣು, ಗಣಪತಿ, ಕುಮಾರಸ್ವಾಮಿ, ಸೂರ್ಯ, ಅಗ್ನಿ ಮೊದಲಾದವೆಲ್ಲವೂ ಈಶ್ವರನ ನಾನಾ ರೂಪಗಳು. ಅಲ್ಲದೆ ಪಾರ್ವತಿ, ದುರ್ಗೆ, ಲಕ್ಷ್ಮೀ, ಸರಸ್ವತೀ ಮೊದಲಾದ ಸ್ತ್ರೀ ದೇವತೆಗಳೂ ಈಶ್ವರನ ರೂಪಗಳೇ. ಆದ್ದರಿಂದ ಶಿವನು ಹೆಚ್ಚು, ವಿಷ್ಣು ಹೆಚ್ಚು ಎಂಬ ಜಗಳ ಅರ್ಥವಿಲ್ಲದ್ದು. ಏಕೆಂದರೆ ಶಿವ ಬೇರೆಯಲ್ಲ, ವಿಷ್ಣು ಬೇರೆಯಲ್ಲ. ಒಬ್ಬನೇ ದೇವರು ಬೇರೆ ಬೇರೆ ಕಾರ್ಯಗಳಿಗಾಗಿ ಧರಿಸಿದ ಬೇರೆ ಬೇರೆ ರೂಪಗಳಷ್ಟೆ.

ಇದು ಸತ್ಯವಾದರೂ ಜನರಿಗೆ ಬೇರೆಬೇರೆ ದೇವಾಕೃತಿಗಳಲ್ಲಿ ನಾಮಗಳಲ್ಲಿ ಅಧಿಕವಾದ ಭಕ್ತಿ ಇರುತ್ತದೆ. ಅವರನ್ನು ಒಂದುಗೂಡಿಸಲು ಇನ್ನೊಂದು ಮಾರ್ಗವನ್ನು ಗೊತ್ತುಮಾಡಿದರು. ಅದಕ್ಕೆ ಪಂಚಾಯತನ ಪೂಜೆ ಎಂದು ಹೆಸರು. **ಶಿವ, ವಿಷ್ಣು, ಅಂಬಿಕಾ, ಸೂರ್ಯ ಮತ್ತು ಗಣಪತಿ** - ಇವರು ಪಂಚಾಯತನ ದೇವತೆಗಳು. ಈ ಎಲ್ಲ ದೇವತೆಗಳನ್ನೂ ಒಂದು ಪೀಠದಲ್ಲಿಟ್ಟು ಪ್ರತಿದಿನ ಪೂಜಿಸುವುದಕ್ಕೆ ಪಂಚಾಯತನ ಪೂಜೆ ಎಂದು ಹೆಸರು. ಈ ಪದ್ಧತಿ ಈಗಲೂ ಲಕ್ಷಾಂತರ ಕುಟುಂಬಗಳಲ್ಲಿ ನಡೆದು ಬರುತ್ತಿದೆ. ಆಗ ಈ ದೇವತೆಗಳಿಗೆ ಸಮಾನ ಸ್ಥಾನವನ್ನು ಕೊಟ್ಟಂತಾಗುತ್ತದೆ. ಪೂಜಿಸತಕ್ಕವರಿಗೆ ಕ್ರಮೇಣ 'ದೇವನೊಬ್ಬ ನಾಮ ಹಲವು' ಎಂಬ ಭಾವನೆ ಮೂಡುತ್ತದೆ. ಸ್ಕಂದ (ಕುಮಾರಸ್ವಾಮಿ)ನನ್ನೂ ಸೇರಿಸಿ ಆರು ದೇವತೆಗಳನ್ನು ಒಂದುಗೂಡಿಸಿದ್ದರಿಂದ ಶ್ರೀಶಂಕರಾಚಾರ್ಯರು ಷಣ್ಮತಸ್ಥಾಪನಾಚಾರ್ಯರೆಂದೂ ಕೆಲವರು ಹೇಳುತ್ತಾರೆ.

ಮತಾಂತರೀಕರಣದ ಪ್ರಶ್ನೆಯೇ ಇಲ್ಲವಾದ್ದರಿಂದ ಈ ಏಕೇಶ್ವರವಾದದಲ್ಲಿ ಸರ್ವಧರ್ಮ ಸಮನ್ವಯವು ತಾನಾಗಿಯೇ ಆಗುತ್ತದೆ.

ಈ ವಿಶ್ವದಲ್ಲಿರುವ ಜನರನ್ನು ಆಸ್ತಿಕರು, ನಾಸ್ತಿಕರು ಎಂದು ಎರಡು ವಿಧವಾಗಿ ವಿಂಗಡಿಸಬಹುದು. ದೇವರನ್ನೂ, ಪುಣ್ಯಪಾಪಗಳನ್ನೂ ಅವುಗಳಿಗೆ ಅನುಸಾರವಾಗಿ

ಪುನರ್ಜನ್ಮವನ್ನೂ ಒಪ್ಪತಕ್ಕವರು ಆಸ್ತಿಕರು. ದೇವರನ್ನೂ ಪುನರ್ಜನ್ಮವನ್ನೂ ನಂಬದವರು ನಾಸ್ತಿಕರು. ಅಂತಹವರ ಸಂಖ್ಯೆ ಕಡಿಮೆ. ನಾವೀಗ ಆಸ್ತಿಕರ ವಿಷಯವಾಗಿ ವಿಚಾರ ಮಾಡುತ್ತಿದ್ದೇವೆ. ಈ ಆಸ್ತಿಕರು ತಮ್ಮ ದೇವರಿಗೆ ಬೇರೆ ಬೇರೆ ನಾಮ ರೂಪಗಳನ್ನಿಟ್ಟುಕೊಂಡಿದ್ದರೂ ಅವೆಲ್ಲವೂ ಒಬ್ಬ ಪರಮಾತ್ಮನಿಗೇ ಸಲ್ಲುತ್ತವೆಯೆಂಬುದೇ ವೈದಿಕಸಿದ್ಧಾಂತವಾಗಿದೆ. ಇದನ್ನೇ ಶ್ರೀಶಂಕರರು ಬೋಧಿಸಿರುವುದರಿಂದ ಕಲಹಕ್ಕೆ ಅವಕಾಶವೇ ಇಲ್ಲ. ಯಾವ ಭಾಷೆಯಲ್ಲಿ ಮಾತಾಡಿದರೂ ಅರ್ಥ ಒಂದೇ ಆಗಿರುತ್ತದೆಯಲ್ಲವೆ?

ಈ ಎಲ್ಲ ಮತಗಳ ಗುರಿ ಯಾವುದು ? ಮೋಕ್ಷವೇ ಗುರಿ. ಸಕಲ ದುಃಖಗಳಿಂದಲೂ ಶಾಶ್ವತವಾಗಿ ಬಿಡುಗಡೆ ಹೊಂದುವುದೇ ಮೋಕ್ಷ. ಮೋಕ್ಷವನ್ನು ಪಡೆದವರಿಗೆ ಪುನರ್ಜನ್ಮವಿಲ್ಲವಾದ್ದರಿಂದ ಮತ್ತೆ ಯಾವ ದುಃಖವೂ ಅವರಿಗೆ ಒದಗುವುದಿಲ್ಲ. ಈ ಗುರಿಯಲ್ಲಿ ಯಾವ ಮತಭೇದವೂ ಇಲ್ಲ. ಈ ಗುರಿಯನ್ನು ಪಡೆಯುವ ಮಾರ್ಗಗಳಲ್ಲಿ ಮತಭೇದಗಳುಂಟು. ಅವುಗಳನ್ನೀಗ ಸಂಕ್ಷೇಪವಾಗಿ ಪರಿಶೀಲಿಸೋಣ.

ಶ್ರೀ ಶಂಕರಾಚಾರ್ಯರು ಪ್ರತಿಪಾದಿಸಿರುವ ಅದ್ವೈತ ವೇದಾಂತದ ಪ್ರಕಾರ ಪ್ರತಿಯೊಬ್ಬ ಮನುಷ್ಯನೂ ಪರಮಾತ್ಮ ಸ್ವರೂಪನೇ ಆಗಿದ್ದಾನೆ. ಆತ್ಮನಲ್ಲಿ ಯಾವ ಭೇದವೂ ಇಲ್ಲ. ಅನಾದಿಯಾದ ಅಜ್ಞಾನದಿಂದ ಪಾಪಕರ್ಮಗಳನ್ನು ಮಾಡಿ ನಾನಾ ದೇಹಗಳನ್ನು ಪಡೆದಿದ್ದಾನೆ. ಗಂಡು, ಹೆಣ್ಣು, ಚಿಕ್ಕವನು, ದೊಡ್ಡವನು, ಬೇರೆ ಬೇರೆ ಜಾತಿಯವನು - ಮೊದಲಾದದ್ದು ಶರೀರ ಮತ್ತು ಅಂತಃಕರಣದ ಭೇದಗಳಿಂದ ಉಂಟಾಗಿರುತ್ತದೆ. ದುಃಖಮಯವಾದ ಸಂಸಾರಕ್ಕೆ ಅನಾದಿಯಾದ ಅಜ್ಞಾನವೇ ಕಾರಣವಾದ್ದರಿಂದ ಅಜ್ಞಾನವು ತೊಲಗಿದರೆ ಮೋಕ್ಷವಾಗುತ್ತದೆ. ಅಜ್ಞಾನವು ಜ್ಞಾನದಿಂದಲೇ ಹೋಗುತ್ತದೆ. ಕತ್ತಲೆ ಹೇಗೆ ಬೆಳಕಿನಿಂದ ಮಾತ್ರ ತೊಲಗುತ್ತದೆಯೋ ಹಾಗೆ ಅಜ್ಞಾನವು ಜ್ಞಾನದಿಂದಲೇ ಹೋಗಬೇಕಾಗಿದೆ. ಆತ್ಮನ ನಿಜಸ್ವರೂಪವನ್ನು ತಿಳಿಯುವ ಜ್ಞಾನವೇ ಆತ್ಮಜ್ಞಾನ. ಆದ್ದರಿಂದ ಮೋಕ್ಷಕ್ಕೆ ಜ್ಞಾನವೇ ಕಾರಣ.

ಕೆಲವರು ಭಕ್ತಿಯಿಂದ ಮೋಕ್ಷವೆನ್ನುತ್ತಾರೆ. ದೇವರಲ್ಲಿಡುವ ಅಚಲವಾದ ಪ್ರೇಮವೇ ಭಕ್ತಿ. ದೇವರ ಧ್ಯಾನ, ಸೇವೆ, ಪೂಜೆ - ಮೊದಲಾದವು ಭಕ್ತಿಯಿಂದ

ಆಗತಕ್ಕವು. ಭಕ್ತಿಗೆ ಮಾತ್ರ ದೇವರು ಒಲಿಯುತ್ತಾನೆ. ಮನುಷ್ಯನ ದೈವಭಕ್ತಿ ಹೆಚ್ಚಿದಷ್ಟು ದೇವರು ಹತ್ತಿರವಾಗುತ್ತಾನೆ. ಹೀಗೆ ಅನನ್ಯವಾದ ಭಕ್ತಿಯಿಂದ ದೇವರಿಗೆ ಶರಣಾಗಬೇಕು. ಆಗ ದೇವರು ಕರುಣೆಯಿಂದ ಭಕ್ತನಿಗೆ ಮೋಕ್ಷವನ್ನು ಅನುಗ್ರಹಿಸುತ್ತಾನೆ. ಆದ್ದರಿಂದ ಭಕ್ತಿಯೇ ಮೋಕ್ಷಕ್ಕೆ ಕಾರಣ.

ಇನ್ನು ಕೆಲವರು ಕರ್ಮದಿಂದ ಮೋಕ್ಷವಾಗುತ್ತದೆ ಎನ್ನುತ್ತಾರೆ. ಅವರ ಅಭಿಪ್ರಾಯವೇನೆಂದರೆ, ನಾನಾ ಬಗೆಯ ಸಂಸಾರದ ಕಷ್ಟಗಳಿಗೆ ಜನರು ಮಾಡಿದ ಪಾಪಕರ್ಮಗಳು ಕಾರಣ. ಪಾಪವನ್ನು ಅನುಭವಿಸಿಯೇ ತೀರಿಸಬೇಕು. ಪುಣ್ಯಕರ್ಮವೂ ಸಹ ಪುನರ್ಜನ್ಮಕ್ಕೆ ಕಾರಣ. ಏಕೆಂದರೆ, ಪುಣ್ಯದ ಫಲವನ್ನು ಅನುಭವಿಸುವುದಕ್ಕೆ ದೇಹವು ಬೇಕೇ ಬೇಕು. ದೇಹವು ಬಂದಾಗ ಮನುಷ್ಯನು ಕೇವಲ ಪುಣ್ಯಕರ್ಮಗಳನ್ನೇ ಮಾಡುತ್ತಾನೆಂದು ಹೇಳಲಾಗುವುದಿಲ್ಲ. ಜೊತೆಗೆ ಸ್ವಲ್ಪವಾದರೂ ಪಾಪಕರ್ಮವು ಘಟಿಸುತ್ತದೆ. ಅವುಗಳ ಫಲವನ್ನನುಭವಿಸುವುದಕ್ಕೆ ಮತ್ತೆ ಹುಟ್ಟಲೇಬೇಕು. ಹೀಗೆ ಸರಪಳಿಯ ಕೊಂಡಿಗಳಂತೆ ಕರ್ಮ, ಜನ್ಮಗಳು ಒಂದಕ್ಕೊಂದು ಅಂಟಿಕೊಳ್ಳುವುದರಿಂದ ಪುನರ್ಜನ್ಮ ಸಂಸಾರಗಳು ತಪ್ಪುವುದೇ ಇಲ್ಲ. ಆದ್ದರಿಂದ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ನಿಷ್ಕಾಮಕರ್ಮವನ್ನು ಉಪದೇಶಿಸಿದ್ದಾನೆ. ಯಾವ ಕಾಮನೆಯನ್ನೂ ಇಟ್ಟುಕೊಳ್ಳದೆ ಎಂದರೆ ಯಾವ ಫಲವನ್ನೂ ಬಯಸದೆ ಈಶ್ವರನ ಪ್ರೀತಿಗಾಗಿ ಈಶ್ವರನ ಆಜ್ಞೆಯೆಂದು ತಿಳಿದು ತನ್ನ ಕರ್ತವ್ಯಗಳನ್ನು ಮಾಡುತ್ತ ಹೋಗುವುದು ನಿಷ್ಕಾಮಕರ್ಮ. ಇದನ್ನು ಆಚರಿಸಲು ದೇವರಲ್ಲಿ ಭಕ್ತಿಯೂ ಇರಬೇಕಾಗುತ್ತದೆ. ಹೀಗೆ ನಿಷ್ಕಾಮಕರ್ಮವನ್ನಾಚರಿಸುತ್ತಿದ್ದರೆ ಪಾಪ ಪುಣ್ಯಗಳು ಅಂಟುವುದೇ ಇಲ್ಲ. ಆಗ ಹಿಂದೆ ಮಾಡಿದ ಕರ್ಮದ ಫಲಗಳೆಲ್ಲಾ ಅನುಭವಿಸಿ ತೀರಿಹೋಗುತ್ತವೆ. ಹೊಸ ಕರ್ಮ ಯಾವುದೂ ಅಂಟುವುದಿಲ್ಲ. ಪುನರ್ಜನ್ಮಕ್ಕೆ ಕಾರಣವೇ ಇರುವುದಿಲ್ಲವಾದ್ದರಿಂದ ಮೋಕ್ಷವು ಲಭಿಸುತ್ತದೆ.

ಒಟ್ಟಿನಲ್ಲಿ ಹೀಗೆ **ಜ್ಞಾನ, ಭಕ್ತಿ, ಕರ್ಮ** - ಈ ಮೂರು ಮೋಕ್ಷಕ್ಕೆ ಕಾರಣಗಳಾದವು. ಇವನ್ನು ಹೇಳತಕ್ಕವರಲ್ಲಿ ಭಕ್ತಿವಾದಿಗಳೂ, ಕರ್ಮವಾದಿಗಳೂ ದ್ವೈತಿಗಳೆನ್ನಬಹುದು. ಭಕ್ತಿವಾದಿಗಳು ಬೇರೆ ಬೇರೆ ದೇವತೆಗಳನ್ನು ನಂಬಿದವರು. ಹಿಂದೆ ಹೇಳಿದಂತೆ ಶಿವ, ವಿಷ್ಣು, ಅಲ್ಲಾ, ಗಾಡ್ ಮುಂತಾದ ದೇವತೆಗಳು ಬೇರೆ ಬೇರೆಯೆಂದೂ ಆ ಹೆಸರನ್ನೇ ಹೇಳಬೇಕು. ಹೀಗೆಯೇ ಪೂಜಿಸಬೇಕು, ಭಕ್ತರ

ವೇಷ ಭೂಷಣಗಳು ಹೀಗೆಯೇ ಇರಬೇಕು. ವಿಗ್ರಹವನ್ನು ಪೂಜಿಸಬೇಕು - ವಿಗ್ರಹವನ್ನು ಪೂಜಿಸಲೇಬಾರದು - ಮುಂತಾದ ನಾನಾ ಮತಭೇದಗಳನ್ನು ತಳೆದಿರುತ್ತಾರೆ. ಇವರಲ್ಲಿ ಏಕಾಭಿಪ್ರಾಯವನ್ನು ಮೂಡಿಸಲಾಗುವುದಿಲ್ಲ. ಕರ್ಮವಾದಿಗಳಿಗೂ ಅವರವರ ಶಾಸ್ತ್ರೋಕ್ತವಾದ ಕರ್ಮಗಳು ಭಿನ್ನವಾಗುತ್ತವೆ. ಅಲ್ಲದೆ ಬರಿಯ ನಿಷ್ಕಾಮ ಕರ್ಮವೊಂದನ್ನೇ ಮಾಡಿ ಉಳಿದ ಕರ್ಮಫಲಗಳನ್ನೆಲ್ಲ ನೀಗಿಸಿಕೊಳ್ಳುವುದು ಸಾಧ್ಯವಾಗತಕ್ಕದ್ದೂ ಅಲ್ಲ. ಜ್ಞಾನ, ಭಕ್ತಿ, ಕರ್ಮ - ಇವು ಮೂರಕ್ಕೆ ಈ ಮತಗಳಲ್ಲಿ ಸಾಮರಸ್ಯವೂ ಇರುವುದಿಲ್ಲ.

ವೇದಸಂಮತವಾದ ಜ್ಞಾನಮಾರ್ಗದಲ್ಲಿ ಯಾವ ದೋಷವೂ ಬರುವುದಿಲ್ಲ. ಅದ್ವೈತ ವೇದಾಂತದಲ್ಲಿ ಒಬ್ಬನೇ ಪರಮಾತ್ಮನೆಂಬ ನಿಲುವು ದೃಢವಾಗಿ ನಿಂತಿದೆ. ಆತನನ್ನು ಯಾವ ಹೆಸರಿನಿಂದಲಾದರೂ ಪೂಜಿಸಬಹುದು. ಅದ್ವೈತಿಗಳು ಸರ್ವಾತ್ಮವಾದಿಗಳಾದ್ದರಿಂದ ಕಲ್ಲು, ನೀರು, ನೆಲ, ಬೆಂಕಿಗಳನ್ನೂ ಪೂಜಿಸಬಹುದು. ಗೋವು, ತುಳಸೀಗಿಡ, ಅರಳಿ ಮರಗಳನ್ನೂ ಪೂಜಿಸಬಹುದು. ಜ್ಞಾನಮಾರ್ಗದವರಿಗೆ ಭಕ್ತಿ, ಕರ್ಮ - ಇವೆರಡೂ ಅವಶ್ಯ ಬೇಕು. ದೇವರಲ್ಲಿ ಅನನ್ಯವಾದ ಭಕ್ತಿಯನ್ನಿಡಬೇಕು. ಸತ್ಕರ್ಮಗಳನ್ನಾಚರಿಸಬೇಕು. ಈ ಭಕ್ತಿ ಕರ್ಮಗಳಿಂದ ಚಿತ್ತಶುದ್ಧಿಯಾಗುತ್ತದೆ. ನಾನಾ ಜನ್ಮಗಳ ಸಂಸ್ಕಾರಗಳಿಂದ ನಮ್ಮ ಅಂತಃಕರಣವು ಎಂದರೆ ಚಿತ್ತವು ಮಲಿನವಾಗಿರುತ್ತದೆ. ಭಕ್ತಿ, ಕರ್ಮಗಳಿಂದ ಚಿತ್ತದ ಕೊಳೆಯು ನಾಶವಾಗುತ್ತದೆ. ಹೀಗೆ ಶುದ್ಧವಾದ ಚಿತ್ತದಲ್ಲಿ ಪರಮಾತ್ಮನು ಪ್ರಕಾಶಿಸುತ್ತಾನೆ. ಈ ಪ್ರಕಾಶವೇ ಜ್ಞಾನ. ಆಗ ಅಜ್ಞಾನವೆಲ್ಲ ತೊಲಗಿ ಹೋಗುತ್ತದೆ. ಆಗ ಮೋಕ್ಷವು ಸುಗಮವಾಗುತ್ತದೆ.

ದೇವರ ದರ್ಶನಕ್ಕೆ ಹೋಗುವಾಗ ದೇವಸ್ಥಾನದ ಮೆಟ್ಟಿಲುಗಳನ್ನು ಹತ್ತಿ ಹೋಗಬೇಕು. ಹಾಗೆಯೇ ಇಲ್ಲಿ ಕರ್ಮಮಾರ್ಗದ ಕೆಲವು ಮೆಟ್ಟಿಲುಗಳು. ಆಮೇಲೆ ಭಕ್ತಿಮಾರ್ಗದ ಕೆಲವು ಮೆಟ್ಟಿಲುಗಳು. ಇವೆಲ್ಲವನ್ನೂ ಹತ್ತಿ ಹೋದರೆ ಜ್ಞಾನದ ಭೂಮಿಕೆಯನ್ನು ತಲುಪುತ್ತೇವೆ. ಅಲ್ಲಿ ಸ್ವಲ್ಪ ದೂರ ಸಾಗಿದ ಮೇಲೆ ಪರಮಾತ್ಮದರ್ಶನವಾಗುತ್ತದೆ. ಯಾವ ಮತ ಸ್ಥಾಪಕರು ಯಾವ ಮತಗಳನ್ನು ಸ್ಥಾಪಿಸಲಿ, ಅವು ಯಾವುವೂ ಆಚಾರ್ಯರು ಹೇಳಿರುವ ವೈದಿಕ ಸಿದ್ಧಾಂತಕ್ಕೆ ವಿರುದ್ಧವಾಗುವುದಿಲ್ಲ. ಎಲ್ಲವೂ ಸೋಪಾನಕ್ರಮದಿಂದ ಸದ್ಗತಿಗೆ ಸಾಗಿಸತಕ್ಕವು.

ಆದ್ದರಿಂದ ಸರ್ವಮಾರ್ಗಗಳ ಸಮನ್ವಯವೂ ಈ ಅದ್ವೈತ ಸಿದ್ಧಾಂತದಲ್ಲಿ ತೊಡಕಿಲ್ಲದೆ ಸಮಂಜಸವಾಗಿ ಹೊಂದಿಕೊಳ್ಳುತ್ತದೆ.

ನಾಸ್ತಿಕರೊಡನೆಯೂ ದ್ವೇಷವು ಸಲ್ಲದು. ಯಾವುದೋ ಜನ್ಮಸಂಸ್ಕಾರದ ದೋಷದಿಂದ ಅವರು ನಾಸ್ತಿಕರಾಗಿರುತ್ತಾರೆ. ಆಚಾರ್ಯರ ಸಿದ್ಧಾಂತದಂತೆ ನಾಸ್ತಿಕರೂ ಪರಮಾತ್ಮ ಸ್ವರೂಪರೇ. ಅವರ ಹೃದಯದಲ್ಲಿ ನೆಲೆಸಿದವನೂ ಭಗವಂತನೇ. ಅವರ ಮಲಿನವಾದ ಚಿತ್ತವು ಆತನನ್ನು ಗುರುತಿಸಲಾರದೆ ಹೋಗಿದೆ. ಅವರ ಕಣ್ಣಿಗೆ ಪೊರೆ ಬಂದಿದೆ ಎಂದು ತಿಳಿಯೋಣ. ಶ್ರೀಶಂಕರರು 'ದ್ವಾದಶಮಂಜರಿ' ಎಂಬ ತಮ್ಮ ಸ್ತೋತ್ರದಲ್ಲಿ ಹೇಳಿರುವ ಈ ಶ್ಲೋಕವನ್ನು ನೋಡಿರಿ.

**ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ**
**ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ**
**ಸರ್ವಸ್ಮಿನ್ನಪಿ ಪಶ್ಯಾತ್ಮಾನಂ**
**ಸರ್ವತ್ರೋತ್ಸೃಜ ಭೇದಜ್ಞಾನಮ್ ॥**

ಅರ್ಥ - ನಿನ್ನಲ್ಲಿ ನನ್ನಲ್ಲಿ ಅನ್ಯರಲ್ಲಿ - ಎಲ್ಲರಲ್ಲಿಯೂ ಒಬ್ಬ ವಿಷ್ಣುವೇ ಇದ್ದಾನೆ. ಹೀಗಿರುವಾಗ ನನ್ನಲ್ಲಿ ಸುಮ್ಮನೆ ಸಹನೆಯಿಲ್ಲದೆ ಏಕೆ ಸಿಟ್ಟು ಮಾಡುತ್ತೀಯೆ? ಎಲ್ಲರಲ್ಲಿಯೂ ನಿನ್ನ ಆತ್ಮನನ್ನೇ ಕಂಡುಕೋ. ಎಲ್ಲಿಯೂ ಭೇದಜ್ಞಾನವನ್ನು ಮಾಡಬೇಡ.

ಇನ್ನೊಂದು ಕಡೆ - **'ಚಂಡಾಲೋಽಸ್ತು ಸ ತು ದ್ವಿಜೋಽಸ್ತು ಗುರುರಿತ್ಯೇಷಾ ಮನೀಷಾ ಮಮ'** ಎಂದು ಹೇಳಿದ್ದಾರೆ. ಆತ್ಮಜ್ಞಾನಿಯಾದವನು ಅಂತ್ಯಜನಾಗಿರಲಿ, ವಿಪ್ರನಾಗಿರಲಿ - ನನಗೆ ಆತನು ಗುರುವೆಂದು ನನ್ನ ನಿಶ್ಚಿತವಾದ ಅಭಿಪ್ರಾಯ.

ಆಚಾರ್ಯರು ಯಾವ ಹೊಸಮತವನ್ನೂ ಸ್ಥಾಪಿಸಲಿಲ್ಲ. ಯಾವ ಹೊಸ ಮಾರ್ಗವನ್ನೂ ಬೋಧಿಸಲಿಲ್ಲ. ಈ ರಾಷ್ಟ್ರದಲ್ಲಿ ಅತಿಪ್ರಾಚೀನವಾಗಿದ್ದ ವೈದಿಕ ಧರ್ಮವನ್ನು ಉಳಿಸಿ ಅದರ ತಿರುಳನ್ನು ಬೋಧಿಸಿದರು. ಮೊದಲಿನಿಂದಲೂ ಇದ್ದ ಸಮಾಜವ್ಯವಸ್ಥೆಯನ್ನೇ ದೃಢಗೊಳಿಸಿದರು. ಸರ್ವಜನರಿಗೂ ಹಿತಕಾರಿಯಾದ ವೇದಬೋಧಿತಸತ್ಯವನ್ನೇ ತಿಳಿಸಿಕೊಟ್ಟರು. ಸಮಾಜದಲ್ಲಿ "ಶಾಂಕರರು" ಎಂಬ ಹೊಸ ಗುಂಪೊಂದನ್ನು ಸ್ಥಾಪಿಸಿ ಸಮಾಜವನ್ನೊಡೆಯಲಿಲ್ಲ. ಮತಾಂತರೀಕರಣದ

ಪ್ರಶ್ನೆಯೇ ಇಲ್ಲಿ ಹುಟ್ಟುವುದಿಲ್ಲ. "ನಿಮ್ಮ ಶಾಸ್ತ್ರವು ಬೋಧಿಸಿದಂತೆ ನೀವು ಆಚರಿಸಿರಿ. ನಿಮಗೆ ಇಷ್ಟವಾದ ದೇವತೆಯನ್ನು ನೀವು ಪೂಜಿಸಿರಿ. ಎಲ್ಲವೂ ಶ್ರೇಯೋಮಾರ್ಗಗಳೇ. ಪರಮಸತ್ಯವೇನೆಂಬುದನ್ನು ಮಾತ್ರ ನಾನು ತಿಳಿಸಿಕೊಟ್ಟಿದ್ದೇನೆ. ದೇವರನ್ನು ದೃಢವಾಗಿ ನಂಬಿ, ಕೆಟ್ಟದಾರಿಯನ್ನು ತುಳಿಯದೆ ಸನ್ಮಾರ್ಗದಲ್ಲಿ ನಡೆಯುತ್ತಾ ಇದ್ದರೆ ನಿಮ್ಮ ಯೋಗಕ್ಷೇಮಗಳನ್ನು ಪರಮಾತ್ಮನೇ ನೋಡಿಕೊಳ್ಳುತ್ತಾನೆ. ಸರಿಯಾದ ಮಾರ್ಗವೇನೆಂಬುದನ್ನು ಅವನೇ ತೋರಿಸಿಕೊಡುತ್ತಾನೆ" ಎಂಬುದೇ ಆಚಾರ್ಯರ ಉಪದೇಶದ ಸಾರ, ಸಂದೇಶದ ತಿರುಳು.

## ೩. ವಿಶ್ವಕುಟುಂಬ

**ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।**
**ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥**

ಎಂಬ ಒಂದು ಸುಭಾಷಿತವಿದೆ. "ಇವನು ಸ್ವಕೀಯ - ನನ್ನವನು. ಅವನು ಪರಕೀಯ ಎಂದು ಎಣಿಸುವುದು ಅಲ್ಪಬುದ್ಧಿಗಳ ಸ್ವಭಾವ. ಉದಾರ ನಡತೆಯುಳ್ಳವರಿಗೆ ಈ ಜಗತ್ತೇ ಒಂದು ಕುಟುಂಬವಾಗಿರುತ್ತದೆ" ಎಂದು ಇದರ ತಾತ್ಪರ್ಯ.

ಒಂದು ಕುಟುಂಬದಲ್ಲಿ ತಂದೆ, ತಾಯಿ, ಮಕ್ಕಳು, ಅಣ್ಣ, ತಮ್ಮ, ಅಕ್ಕ, ತಂಗಿ ಎಂದು ಹಲವರಿರುತ್ತಾರೆ. ಎಲ್ಲರೂ ರಕ್ತಸಂಬಂಧಿಗಳು. ತಂದೆತಾಯಿಗಳ ರಕ್ತವೇ ಮಕ್ಕಳಲ್ಲಿ ಹರಿದಿರುತ್ತದೆ. ಆದ್ದರಿಂದ ನಾವೆಲ್ಲರೂ ಒಂದೇ ಎಂಬ ಭಾವನೆಯನ್ನು ತಳೆದು ಪರಸ್ಪರ ಸ್ನೇಹದಿಂದ ಬಾಳಬೇಕು, ಜಗಳವಾಡಬಾರದು - ಎಂಬ ನೀತಿ ಯುಕ್ತವಾದದ್ದು. ಈ ಭೂಮಿಯಲ್ಲಿರುವ ನೀವೆಲ್ಲರೂ ಅಣ್ಣತಮ್ಮಂದಿರೇ. ಸಕಲರೂ ಪರಮಾತ್ಮನ ಮಕ್ಕಳು. ಪರಮಾತ್ಮನ ಪ್ರತಿಬಿಂಬಗಳು. ವಾಸ್ತವದಲ್ಲಿ ಪರಮಾತ್ಮ ಸ್ವರೂಪರೇ ಆಗಿದ್ದೀರಿ. ದೇಹಗಳು ಬೇರೆ ಬೇರೆಯಾಗಿ ಕಾಣುತ್ತವೆ. ದೇಹಗಳಲ್ಲಿರುವ ಆತ್ಮನು ಒಬ್ಬನೇ. ಸಾವಿರಾರು ಬಲ್ಬುಗಳಿದ್ದರೂ ಅವುಗಳಲ್ಲಿ ಹರಿಯುವ ವಿದ್ಯುಚ್ಛಕ್ತಿ ಒಂದೇ ಆಗಿರುತ್ತದೆ. ಹೆಚ್ಚು ಶಕ್ತಿಯ ಬಲ್ಬುಗಳು, ಕಡಿಮೆ ಶಕ್ತಿಯ ಬಲ್ಬುಗಳು, ಬಣ್ಣಬಣ್ಣದ ಬಲ್ಬುಗಳು ಇದ್ದರೂ ವಿದ್ಯುಚ್ಛಕ್ತಿಯಲ್ಲಿ ಭೇದವಿರುವುದೇ ಇಲ್ಲ. ಎಲ್ಲರ ಆತ್ಮನೂ ನೀವೇ ಆಗಿರುವಾಗ ಜಗಳವೇತಕ್ಕೆ? ತನ್ನ

ಕೈಕಾಲುಗಳೊಡನೆ ತಾನೇ ಜಗಳವಾಡಬಹುದೆ ? ಎಲ್ಲರೂ ಸ್ನೇಹದಿಂದ ಬಾಳಿರಿ ಎಂಬುದು ಆಚಾರ್ಯರ ಉಪದೇಶದ ತಾತ್ಪರ್ಯ. ಶ್ರೀಶಂಕರರ ಉಪದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ಕಲಹಕ್ಕೆ ಕಾರಣವೇ ಇರುವುದಿಲ್ಲ. ವಿಶ್ವವೇ ನನ್ನ ಕುಟುಂಬ ಎಂಬ ಭಾವವು ದೃಢವಾಗುತ್ತದೆ. **"ಯತ್ರ ವಿಶ್ವಂ ಭವತ್ಯೇಕನೀಡಂ"** (ನಾರಾಯಣೋಪನಿಷತ್) ಎಂಬ ವೇದವಾಣಿಯು ಸತ್ಯವಾಗಿ 'ಈ ಜಗತ್ತು ನಮ್ಮೆಲ್ಲರ ಒಂದು ಗೂಡು' ಎಂದು ತಿಳಿದುಬರುತ್ತದೆ.

## ೪. ರಾಷ್ಟ್ರದ ಏಕತೆ

ನಮ್ಮ ಭಾರತ ದೇಶದಲ್ಲಿ ನೂರಾರು ಭಾಷೆಗಳನ್ನಾಡುವ ಜನರಿದ್ದಾರೆ. ಹಿಂದಿನಿಂದಲೂ ಕುರು, ಕೇಕಯ, ಮಗಧ, ಅಂಗ, ವಂಗ - ಮುಂತಾದ ರಾಜ್ಯಗಳೂ ಆ ರಾಜ್ಯಗಳನ್ನಾಳುವ ಬೇರೆ ಬೇರೆ ರಾಜರೂ ಇದ್ದರು.ಈ ರಾಜ್ಯದಲ್ಲಿಯೂ ಐಕ-ಮತ್ಯವಿಲ್ಲದೆ ಯುದ್ಧಗಳು ನಡೆಯುತ್ತಿದ್ದವು. ಜಾತಿಭೇದಗಳೂ ಮತಾಚಾರಗಳೂ ಭಿನ್ನವಾಗಿದ್ದವು. ಆದರೂ ಈ ಎಲ್ಲ ರಾಜ್ಯಗಳೂ ಸೇರಿ ಭರತಖಂಡ - ಭಾರತದೇಶ ಎಂಬ ಒಂದೇ ರಾಷ್ಟ್ರದ ವ್ಯಾಪ್ತಿಗೆ ಒಳಪಟ್ಟಿದ್ದವೆಂಬುದು ಆಶ್ಚರ್ಯವೆನಿಸಬಹುದು. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸಕಲ ಪ್ರಜೆಗಳೂ 'ನಾವು ಭಾರತದೇಶದಲ್ಲಿದ್ದೇವೆ, ನಾವು ಭಾರತೀಯರು' ಎಂದೇ ತಿಳಿದುಕೊಂಡು, ಪುಣ್ಯಕಾರ್ಯಗಳಲ್ಲಿ ಸಂಕಲ್ಪ ಮಾಡುವಾಗ "ಭರತಖಂಡೇ, ಭಾರತವರ್ಷೇ" ಎಂದು ಕೀರ್ತಿಸುತ್ತಲೇ ಬಂದಿದ್ದಾರೆ. ಯಾತ್ರಿಕರು ಭಾರತದಲ್ಲಿರುವ ಎಲ್ಲ ಪುಣ್ಯಕ್ಷೇತ್ರಗಳಿಗೂ ಹೋಗಿ ಬರುತ್ತಾರೆ. ಹೀಗೆ ಭಾಷಾಭೇದ ರಾಜ್ಯಭೇದಗಳಿದ್ದರೂ ಭಾರತವು ಅಖಂಡವಾದೊಂದು ರಾಷ್ಟ್ರವೆಂಬ ಏಕತಾಭಾವನೆಗೆ ನಿಮಿತ್ತವೇನು? ಇಷ್ಟು ರಾಜ್ಯಗಳನ್ನು ಪ್ರಜೆಗಳನ್ನು ಬಿಗಿಹಿಡಿದ, ಹೂಮಾಲೆಯೊಳಗಿನ ದಾರದಂತಿರುವ ಸೂತ್ರ ಯಾವುದು ?

ಸಂಸ್ಕೃತ ಭಾಷೆಯಿಂದ ನಿರ್ಮಿತವಾದ ಭಾರತೀಯಸಂಸ್ಕೃತಿಯೇ ಅದು. ಆಸೇತುಹಿಮಾಚಲಪರ್ಯಂತವಾಗಿ ವ್ಯಾಪಿಸಿಕೊಂಡಿರುವ ಒಂದೇ ಸಂಸ್ಕೃತಿಯು ಏಕರಾಷ್ಟ್ರತಾನಿಬಂಧನವಾಗಿದೆ. ವೇದಗಳಿಂದಲೂ ಸಂಸ್ಕೃತಭಾಷಾ ಸಾಹಿತ್ಯದಿಂದಲೂ ಈ ಸಂಸ್ಕೃತಿಯು ಪರಿಪುಷ್ಟವಾದದ್ದು. ಶಿವ, ವಿಷ್ಣು, ಗಣಪತಿ, ಸರಸ್ವತೀ, ಲಕ್ಷ್ಮೀ, ದುರ್ಗಾ - ಮುಂತಾದ ದೇವತೆಗಳ ಆರಾಧನೆ, ವಿಗ್ರಹಪೂಜೆ,

ಪುನರ್ಜನ್ಮವಿಶ್ವಾಸ, ತೀರ್ಥಕ್ಷೇತ್ರಗಳ ಯಾತ್ರೆ, ವಿವಾಹಾದಿ ಸಂಸ್ಕಾರಗಳು, ರಾಮಾಯಣ, ಮಹಾಭಾರತ ಮೊದಲಾದವು ಪುಣ್ಯ ಗ್ರಂಥಗಳೆಂಬ ನಂಬಿಕೆ - ಇವೆಲ್ಲವೂ ಈ ಸಂಸ್ಕೃತಿಯ ವಿವಿಧ ಮುಖಗಳು. ಬೌದ್ಧ ಜೈನಾದಿಮತ ಗ್ರಂಥಗಳೂ ವೇದೋಪನಿಷತ್ತುಗಳಿಂದ ಪ್ರಭಾವಿತಗಳಾಗಿ ಸಂಸ್ಕೃತಭಾಷೆಯಲ್ಲಿ ಪ್ರಚುರಗೊಂಡವು. ಇವೆಲ್ಲವೂ ಒಂದೇ ಭಾರತೀಯಸಂಸ್ಕೃತಿಯ ಗುಣಧರ್ಮಗಳು. ಭಾರತವು ಏಕರಾಷ್ಟ್ರವೆಂಬ ಏಕತಾ ಭಾವನೆಗೆ ಸಂಸ್ಕೃತ ಗ್ರಂಥಗಳಿಂದ ಉದ್ಭವಿಸಿದ ವಿಶಾಲ ಸಂಸ್ಕೃತಿಯೇ ನಿಜವಾದ ಕಾರಣವಾಗಿರುತ್ತದೆ. ಈಗಲೂ ಸಹ ಈ ಸಂಸ್ಕೃತಿಯೇ ನಮ್ಮೆಲ್ಲರನ್ನೂ ಒಂದುಗೂಡಿಸಿದೆ. ಹೀಗೆ ಒಂದುಗೂಡಿಸಲು ಬೇರೆ ಯಾವ ನಿಮಿತ್ತವೂ ಇಲ್ಲ.

ಪ್ರಭಾವಶಾಲಿಯಾಗಿದ್ದ ವೈದಿಕ ಸಂಸ್ಕೃತಿಯು ಅಳಿದು ಹೋಗುತ್ತಿದ್ದ ಕಾಲದಲ್ಲಿ, ಇದನ್ನು ರಾಷ್ಟ್ರದ ತುಂಬ ಪ್ರಚಾರ ಮಾಡಿ ವಿವಿಧ ಸಂಸ್ಕೃತ ಗ್ರಂಥಗಳನ್ನು ರಚಿಸಿ, ಮಠಗಳ ಮೂಲಕ ಅವುಗಳ ಅಧ್ಯಯನವನ್ನು ಪ್ರೋತ್ಸಾಹಿಸಿ ಈ ರಾಷ್ಟ್ರದ ಏಕತೆಯನ್ನ ಸಮಗ್ರತೆಯನ್ನ ಉಳಿಸಿ ಬಲಪಡಿಸಿದ ಕೀರ್ತಿ ಶ್ರೀ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಅಲ್ಲದೆ ಸಂಸ್ಕೃತ ಭಾಷೆಯಲ್ಲಿ ಅದ್ವೈತ ಗ್ರಂಥಗಳ ಸಂಖ್ಯೆ ವಿಪುಲವಾಗಿ ಬೆಳೆಯಿತು. ಪ್ರಾಯಶಃ ಇನ್ನಾವ ಶಾಸ್ತ್ರದಲ್ಲಿಯೂ ಇಷ್ಟು ಗ್ರಂಥಗಳ ನಿರ್ಮಾಣವಾಗಲಿಲ್ಲ. ಈ ರಾಷ್ಟ್ರದ ಮೂಲೆಮೂಲೆಗಳಲ್ಲಿಯೂ ಆಚಾರ್ಯರು ಅಥವಾ ಅವರ ಶಿಷ್ಯರು ವೇದಾಂತವನ್ನು ಪ್ರಚಾರ ಮಾಡಿದುದೇ ಇದಕ್ಕೆ ಕಾರಣವಾಗಿದೆ. ಇದರಿಂದ ಪರ್ಯಾಯವಾಗಿ ಸಂಸ್ಕೃತದ ಪ್ರಚಾರ, ಭಾಷಾಭಿವೃದ್ಧಿಗಳಿಗೂ ಶ್ರೀ ಶಂಕರರಿಂದ ಮಹತ್ತರವಾದ ಉಪಕಾರವಾಯಿತು. ಆ ಕಾಲದಲ್ಲಿ ಸಂಸ್ಕೃತ ಭಾಷೆಯು ರಾಷ್ಟ್ರವ್ಯಾಪಿಯಾಗಿದ್ದು ಎಲ್ಲ ರಾಜ್ಯದ ಜನರಿಗೂ ಅರ್ಥವಾಗುತ್ತಿತ್ತು. ವಿದ್ಯಾವಂತರೆಲ್ಲರಿಗೂ ಅರ್ಥವಾಗುವ ಭಾಷೆಯಾದ್ದರಿಂದ ಆಚಾರ್ಯರು ತಮ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚಿಸಿದರು. ಬೌದ್ಧರೂ, ಜೈನರೂ ಮೊದಮೊದಲು ಪಾಲಿ, ಅರ್ಧಮಾಗಧಿಗಳಲ್ಲಿ ತಮ್ಮ ಮತಗ್ರಂಥಗಳನ್ನು ಬರೆದರೂ ಆ ಭಾಷೆಗಳಿಗೆ ಸರ್ವತ್ರ ವ್ಯಾಪ್ತಿ ಇಲ್ಲದುದರಿಂದ ಅವರೂ ಸಂಸ್ಕೃತದಲ್ಲಿಯೇ ಗ್ರಂಥರಚನೆ ಮಾಡಿದರು.

## ೫. ಉಪದೇಶದ ವ್ಯಾಪ್ತಿ

ಶ್ರೀ ಶಂಕರಾಚಾರ್ಯರು ಬೋಧಿಸಿದ ಅದ್ವೈತ ವೇದಾಂತ ದರ್ಶನವು ಭಾರತ ದೇಶಕ್ಕೆ ಹೊಸದೇನೂ ಆಗಿರಲಿಲ್ಲ. ಇಲ್ಲಿಯ ವಿದ್ವಜ್ಜನರ ಜೀವನಾಡಿಯಲ್ಲಿ ಹರಿಯುತ್ತಿದ್ದ ವೇದಾಂತಧಾರೆಯೇ ಆಗಿತ್ತು. ಕಾಲ ಮಹಿಮೆಯಿಂದ ಅದು ಕ್ಷೀಣಿಸುತ್ತ ಬಂದಿತ್ತೇ ಹೊರತು ಸರಸ್ವತೀ ನದಿಯಂತೆ ಒಣಗಿ ಅದೃಶ್ಯವಾಗಿರಲಿಲ್ಲ. ಆಚಾರ್ಯರ ನಿರಂತರ ಪರಿಶ್ರಮದಿಂದ, ಪ್ರಚಾರ ಕೌಶಲದಿಂದ, ಎದುರಿಲ್ಲದ ಶಾಸ್ತ್ರಪಾಂಡಿತ್ಯದಿಂದ, ವಿಶೇಷವಾಗಿ ತಪಸ್ಸಿನ ಮಹಿಮೆಯಿಂದ ವೇದಾಂತವಿಚಾರಧಾರೆಯು ತುಂಬಿ ಹರಿದು ವಿದ್ವಜ್ಜನರ ಹೃದಯಕ್ಕೆ ನೂತನ ಚೈತನ್ಯವನ್ನೊದಗಿಸಿತು. ನಿದ್ರೆಯಿಂದೆದ್ದ ಕೆಲಸಗಾರರಂತೆ ಈ ವಿದ್ವಾಂಸರು ವೈದಿಕ ದರ್ಶನದ ಮೇಲೆ ವ್ಯಾಖ್ಯಾನಗಳನ್ನೂ ನೂತನ ಗ್ರಂಥಗಳನ್ನೂ ರಚಿಸತೊಡಗಿದರು. ಈ ಪ್ರಕಾರವಾಗಿ **ಅದ್ವೈತದರ್ಶನವೂ ವೈದಿಕ ಧರ್ಮವೂ ಸಂಸ್ಕೃತ ಭಾಷೆಯೂ** ಏಕಕಾಲದಲ್ಲಿ ಪ್ರಸಿದ್ಧಿಯನ್ನು ಗಳಿಸಿದವು.

## ೬. ಉದ್ದೇಶ ಸಾಧನೆ

ಅಗಾಧವಾದ ಪಾಂಡಿತ್ಯ, ದೂರದರ್ಶಿತ್ವ, ಉತ್ಸಾಹಶಕ್ತಿ - ಇವುಗಳಿಗೆ ನೆಲೆಯಾಗಿದ್ದ ಆಚಾರ್ಯರ ಸಾಧನೆಗಳು ಬಹುಮುಖವಾದವು. ಶ್ರುತಿ, ಸ್ಮೃತಿ, ಪುರಾಣಗಳು ಏಕಾಭಿಪ್ರಾಯದಿಂದ ತಿಳಿಸಿಕೊಟ್ಟ ಪರಮಾರ್ಥದರ್ಶನವು ಯಾವುದೆಂಬುದನ್ನು ಸ್ಥಾಪಿಸಿರುವುದು ಅವುಗಳಲ್ಲಿ ಮೊದಲನೆಯದು. ಇತರ ದರ್ಶನಗಳು ವೇದ ವಿರುದ್ಧವಾಗಿವೆಯೆಂದೂ ಹಲವಾರು ದೋಷಗಳು ಅವುಗಳಲ್ಲಿವೆಯೆಂದೂ ತೋರಿಸಿಕೊಟ್ಟದ್ದು ಎರಡನೆಯದು. ಇದಲ್ಲದೆ ಅವರು ಸಾಧಿಸಿದ ಇತರ ಕಾರ್ಯಗಳನ್ನು ಹೀಗೆ ಸಂಗ್ರಹಿಸಬಹುದು -

ಶ್ರೀಶಂಕರರು ಭರತಖಂಡದ ಪ್ರಮುಖ ದೇವಾಲಯಗಳಿಗೆ ಭೇಟಿಯನ್ನಿತ್ತು ಪೂಜಾವಿಧಾನಗಳಲ್ಲಿದ್ದ ತಪ್ಪುಗಳನ್ನು ತಿದ್ದಿದರು. ದೇವತೆಗಳ ಉಗ್ರಸ್ವರೂಪವನ್ನು ಸೌಮ್ಯಸ್ವರೂಪವನ್ನಾಗಿ ಮಾರ್ಪಡಿಸಿದರು. ಪ್ರಾಣಿಗಳನ್ನು ಬಲಿಕೊಡುವ ಪದ್ಧತಿಯನ್ನು ನಿಲ್ಲಿಸಿದರು. ಕೊಲ್ಲೂರಿನ ಮೂಕಾಂಬಿಕಾ ದೇವಿಯ ಪೂಜೆ ಶಾಕ್ತಮತದವರಿಗೆ ಅಧೀನವಾಗಿ ಉಗ್ರರೂಪವನ್ನು ತಳೆದಿತ್ತು. ಆಚಾರ್ಯರು ಅಲ್ಲಿಗೆ ಹೋಗಿ ದೇವೀಮಂದಿರದಲ್ಲಿ ಶ್ರೀಚಕ್ರವನ್ನು ಸ್ಥಾಪಿಸಿ, ದೇವಿಯ

ಉಗ್ರಸ್ವರೂಪವನ್ನು ನಿವಾರಿಸಿ ವೈದಿಕ ಪದ್ಧತಿಯಂತೆ ಸೌಮ್ಯ ಪೂಜೆಯನ್ನು ನೆಲೆಗೊಳಿಸಿದರು. ಹೀಗೆಯೇ ತಮಿಳುನಾಡಿನಲ್ಲಿಯೂ, ಆಂಧ್ರ ಪ್ರದೇಶದಲ್ಲಿಯೂ ಅನೇಕ ದೇವಾಲಯಗಳ ಪೂಜಾಕ್ರಮವನ್ನು ಸೌಮ್ಯ ಸ್ವರೂಪವನ್ನಾಗಿ ಪರಿವರ್ತಿಸಿದರು. ಬದರಿಕಾಶ್ರಮದಲ್ಲಿ ಶಿಥಿಲವಾಗಿದ್ದ ಶ್ರೀಮನ್ನಾರಾಯಣ ದೇವಾಲಯವನ್ನು ಕಟ್ಟಿಸಿ, ಅಲಕಾನದಿಯಲ್ಲಿ ಪೂಜೆಯಿಲ್ಲದೆ ಬಿದ್ದಿದ್ದ ಶ್ರೀನಾರಾಯಣವಿಗ್ರಹವನ್ನು ಸ್ಥಾಪಿಸಿ, ವ್ಯವಸ್ಥಿತವಾದ ಪೂಜಾ ಪದ್ಧತಿಯನ್ನು ತಂದರು. ಈಗಲೂ ಅಲ್ಲಿರುವ ಪೂಜಾರಿಗಳು ಕೇರಳದ ನಂಬೂದರಿಗಳೆಂಬುದನ್ನು ಗಮನಿಸಬಹುದು. ಕಂಚಿಯ ಕಾಮಾಕ್ಷೀ ದೇವಾಲಯದಲ್ಲಿ ಶ್ರೀಚಕ್ರವನ್ನು ಆಚಾರ್ಯರು ಸ್ಥಾಪಿಸಿ, ಪೂಜಾಕ್ರಮದಲ್ಲಿ ಬದಲಾವಣೆಗಳನ್ನು ಮಾಡಿದರೆಂದು ಆನಂದಗಿರಿಯ ಶ್ರೀಶಂಕರದಿಗ್ವಿಜಯದಲ್ಲಿದೆ. ಅಂತೆಯೇ ಜ್ಯೋತಿಷ್ಟೋಮಾದಿ-ಯಾಗಗಳಿಂದ ಸ್ವರ್ಗವು ಲಭಿಸುತ್ತದೆಯೆಂದೂ ಅದೇ ಮೋಕ್ಷವೆಂದೂ ಕರ್ಮಠರು ಹೇಳುತ್ತಿದ್ದರು. ಸ್ವರ್ಗವು ಮೋಕ್ಷವಲ್ಲವೆಂದೂ ಸ್ವರ್ಗಕ್ಕೆ ಹೋದವರೂ ಮತ್ತೆ ಹುಟ್ಟಬೇಕಾಗುವುದೆಂದೂ ಆಚಾರ್ಯರು ಪ್ರತಿಪಾದಿಸಿ ಯಜ್ಞಯಾಗಗಳ ಅಬ್ಬರವನ್ನು ತಗ್ಗಿಸಿದರು. ನಾಸ್ತಿಕವಾದವೂ ಶ್ರೀಶಂಕರರಿಂದ ಹಿಮ್ಮೆಟ್ಟಿತು.

ಒಟ್ಟಿನಲ್ಲಿ ಹ್ರಾಸವಾಗಿದ್ದ ವೈದಿಕ ಸಂಸ್ಕೃತಿಯನ್ನು ಮೇಲೆತ್ತಿ ರಾಜಕೀಯದಿಂದ ತುಂಡುತುಂಡಾಗಿದ್ದ ರಾಷ್ಟ್ರದ ಎಲ್ಲಭಾಗಗಳಲ್ಲಿಯೂ ಅದನ್ನು ಸ್ಥಾಪಿಸಿದ ಕೀರ್ತಿ ಶ್ರೀಶಂಕರರಿಗೆ ಸಲ್ಲುತ್ತದೆ. ಈ ಪ್ರಾಚೀನವಾದ ವೈದಿಕಸಂಸ್ಕೃತಿಯೆಂಬ ಪ್ರಬಲವಾದ ಎಳೆಯಿಂದ ಬೇರೆಬೇರೆ ರಾಜ್ಯಗಳನ್ನು ಬಿಗಿದು ಭಾರತವನ್ನು ಏಕರಾಷ್ಟ್ರವನ್ನಾಗಿ ನಿಲ್ಲಿಸಿದವರು ಶ್ರೀ ಶಂಕರರೆಂಬುದನ್ನು ನೆನಪಿನಲ್ಲಿಡಬೇಕು.

## ಜಗದ್ಗುರುಗಳು

ಶ್ರೀ ಶಂಕರಭಗವತ್ಪಾದರನ್ನು ಜಗದ್ಗುರುಗಳೆಂದೂ ಅವರು ಸ್ಥಾಪಿಸಿರುವ ಪೀಠವನ್ನು ಜಗದ್ಗುರುಪೀಠವೆಂದೂ ವ್ಯವಹರಿಸುವುದು ಪರಂಪರೆಯಿಂದ ಬಂದಿದೆ. ಇದೇನು ಲೋಕಾಭಿರಾಮವಾದ ಶಬ್ದವೆ? ಅಥವಾ ಶ್ರೀಶಂಕರಾಚಾರ್ಯರಿಗೆ ಒಪ್ಪುವ ಯಥಾರ್ಥವಾದ ಶಬ್ದವೆ? ಇದುವರೆಗೆ ಸಂಗ್ರಹವಾಗಿ ಹೇಳಿದ ಅಂಶಗಳಿಂದಲೇ ಶ್ರೀ ಶಂಕರಾಚಾರ್ಯರು ಜಗದ್ಗುರುವೆಂಬ ಅನ್ವರ್ಥವಾದ ಗೌರವಪೂರ್ಣ ಬಿರುದನ್ನು ಪಡೆದರೆಂದೂ ಪ್ರಜೆಗಳು ಭಕ್ತ್ಯಾದರಗಳಿಂದ ಅವರನ್ನು ಜಗದ್ಗುರುಗಳೆಂದು

ಸಂಮಾನಿಸಿದರೆಂದೂ ತಿಳಿಯಬಹುದು. ಗುರುವಾದವರಲ್ಲಿ ಇರಬೇಕಾದ ಜ್ಞಾನ, ವೈರಾಗ್ಯ, ಕಾರುಣ್ಯ , ಸದಾಚಾರ, ಶಿಷ್ಯರಿಗೆ ಮಾರ್ಗದರ್ಶನ ಮಾಡಲು ಬೇಕಾದ ಅರ್ಹತೆ - ಮುಂತಾದ ಗುಣವಿಶೇಷಗಳು ಅವರಲ್ಲಿ ಸಹಜವಾಗಿ ಬಂದಿದ್ದವು. ಅವರ ಉಪದೇಶವು ಗೊತ್ತಾದ ಒಂದು ಜನಾಂಗಕ್ಕೆ ಅಥವಾ ಒಂದು ಮತದವರಿಗೆ ಸೀಮಿತವಾಗಿರಲಿಲ್ಲ. ಜಗತ್ತಿನಲ್ಲಿ ನಾನಾಮತೀಯರೂ ನಾನಾ ಸ್ವಭಾವದವರೂ ವಿವಿಧ ನಂಬಿಕೆಗಳುಳ್ಳವರೂ ಇರುತ್ತಾರೆ. ಅವರಲ್ಲಿರುವ ಶ್ರದ್ಧಾಭಕ್ತಿಗಳನ್ನು ಕೆಣಕದೆ, ನಂಬಿಕೆಯನ್ನು ಕೆಡಿಸದೆ, ಮತಾಂತರಗೊಳಿಸಿದೆ, ಆ ಜನರಲ್ಲಿರುವ ಸದಾಚಾರಗಳನ್ನು ದೂಷಿಸದೆ, ಅವರ ಸದ್ಭಾವನೆಗಳನ್ನು ಪ್ರೋತ್ಸಾಹಿಸಿ ಶ್ರೇಯಸ್ಸಿನ ಸ್ಥಾನಕ್ಕೆ ಏರಿಸುವ ಸಾಮರ್ಥ್ಯವುಳ್ಳವರು ಜಗದ್ಗುರುಗಳು. ಸಕಲ ಶಾಸ್ತ್ರಗಳಲ್ಲಿ ಪಾರಂಗತರಾಗಿ ಅನ್ಯಮತಗಳ ಸಾರವನ್ನು ಗ್ರಹಿಸಿ ಸೋಪಾನ ಮಾರ್ಗದಿಂದ ಸಮಸ್ತರ ಕಲ್ಯಾಣವನ್ನು ಬಯಸುತ್ತ ಪಾರಮಾರ್ಥಿಕವಾಗಿ ಅವರೆಲ್ಲರನ್ನೂ ಮೇಲೇರಿಸುವ ಯೋಗ್ಯತೆಯುಳ್ಳವರು ಜಗದ್ಗುರುಗಳು. ಹೀಗೆ ಸರ್ವದೃಷ್ಟಿಯಿಂದಲೂ ಆಚಾರ್ಯರು ಪರಮೋತ್ಕರ್ಷವನ್ನು ಪಡೆದದ್ದರಿಂದ ಜಗದ್ಗುರುಗಳೆನಿಸಿದರು.

ಮತ್ತೊಂದು ರೀತಿಯಿಂದ ನೋಡಿದರೂ ಆಚಾರ್ಯರು ನಿಜವಾದ ಅರ್ಥದಲ್ಲಿ ಜಗದ್ಗುರುಗಳು. ಗುರು ಎಂದರೆ ಅಜ್ಞಾನವನ್ನು ಕಳೆಯುವವನು. ಅಜ್ಞಾನಗಳಲ್ಲೆಲ್ಲ ಆತ್ಮನ ಬಗ್ಗೆ ಇರುವ ಅಜ್ಞಾನವೇ ಮುಖ್ಯವಾದದ್ದು. ಇದು ಜಾತಿಮತಕುಲಗೋತ್ರಗಳೆನ್ನದೆ ಎಲ್ಲರನ್ನೂ ಮುಸುಕಿರುತ್ತದೆ. ಆತ್ಮನ ನಿಜವಾದ ಸ್ವರೂಪ ಪರಿಚಯವಾದಾಗ ಮಾತ್ರ ಆ ಅಜ್ಞಾನವು ನಾಶವಾಗುತ್ತದೆ. ಶಂಕರರು ತಾವೇ ಜ್ಞಾನದ ಬೆಳಕಾಗಿ ಲೋಕಕ್ಕೆಲ್ಲ ಆತ್ಮಜ್ಞಾನದ ಬೆಳಕನ್ನು ನೀಡಿದರು. "ಪ್ರತಿಯೊಬ್ಬರೂ ತನ್ನನ್ನು ತಾನು ಅರಿತುಕೊಳ್ಳಬೇಕು, ಆತ್ಮಜ್ಞಾನವೇ ಮಾನವನ ಪರಮೋದ್ದೇಶವಾಗಬೇಕು" ಎಂದು ಸಾರಿದರು. ಆ ಆತ್ಮನ ಸ್ವರೂಪವೇನು ಎಂಬುದನ್ನೂ ಅವರು ಒಂದು ಚಿಕ್ಕ ಪದ್ಯದಿಂದ ವಿವರಿಸುತ್ತಾರೆ. ಗುರುಶಿಷ್ಯರ ಸಂವಾದರೂಪದಲ್ಲಿರುವ ಆ ಪದ್ಯದ ಸಾರಾಂಶ ಹೀಗಿದೆ -

**ಗುರು** – ಶಿಷ್ಯ ! ಹಗಲಿನಲ್ಲಿ ನಿನಗೆ ಈ ಪ್ರಪಂಚವನ್ನು ತೋರಿಸುವ ಬೆಳಕು ಯಾವುದು ?

**ಶಿಷ್ಯ -** ಗುರುಗಳೆ ! ಹಗಲಿನಲ್ಲಿ ಸೂರ್ಯನೇ ನನಗೆ ಬೆಳಕು. ಆ ಬೆಳಕಿನಿಂದಲೇ ನಾನು ವಸ್ತುಗಳನ್ನು ನೋಡುತ್ತೇನೆ. ಕೆಲಸ ಕಾರ್ಯಗಳನ್ನು ಮಾಡುತ್ತೇನೆ.

**ಗುರು -** ರಾತ್ರಿಯಲ್ಲಿ ?

**ಶಿಷ್ಯ -** ರಾತ್ರಿಯಲ್ಲಿ ದೀಪವೇ ಬೆಳಕು.

**ಗುರು -** ಆ ಸೂರ್ಯ ಹಾಗೂ ದೀಪಗಳನ್ನು ಯಾವುದರಿಂದ ಅರಿಯುತ್ತೀಯೆ ? ಆ ಬೆಳಕುಗಳನ್ನು ತೋರಿಸಿಕೊಡುವ ಬೆಳಕು ಯಾವುದು ?

**ಶಿಷ್ಯ -** ಗುರುಗಳೆ ! ನನ್ನ ಕಣ್ಣೇ ಆ ಬೆಳಕು. ಅದರಿಂದಲೇ ನಾನು ಸೂರ್ಯನನ್ನೂ ದೀಪವನ್ನೂ ಅರಿಯುತ್ತೇನೆ.

**ಗುರು -** ಕಣ್ಣುಗಳನ್ನು ಮುಚ್ಚಿಕೊಂಡೂ ನೀನು ವ್ಯವಹರಿಸುತ್ತೀಯಲ್ಲ ! ಆಗ ನಿನಗೆ ಬೆಳಕು ಯಾವುದು ?

**ಶಿಷ್ಯ -** ಆಗ ನನ್ನ ಬುದ್ಧಿಯೇ ಬೆಳಕು. ಆ ಬುದ್ದಿಯಿಂದಲೆ ನಾನು ಪ್ರಪಂಚವನ್ನು ಅರಿಯುತ್ತೇನೆ.

**ಗುರು -** ಆ ಬುದ್ಧಿಯನ್ನೂ ನೋಡುವ ಬೆಳಕು ಯಾವುದು ?

**ಶಿಷ್ಯ -** ನಾನು. ಗುರುಗಳೆ ! ನಾನೇ ಸ್ವತಃ ಆ ಬುದ್ಧಿಯನ್ನೂ ನೋಡುವ ಬೆಳಕು.

**ಗುರು -** ಈಗ ತಿಳಿಯಿತೆ ನೀನಾರೆಂದು? ನೀನೇ ಆ ಜ್ಞಾನವೆಂಬ ಜ್ಯೋತಿಃಸ್ವರೂಪನು. ನೀನು ಸಾಮಾನ್ಯ ಜ್ಯೋತಿಯಲ್ಲ. ಪರಂಜ್ಯೋತಿ. ಬೇರೆ ಎಲ್ಲ ಜ್ಯೋತಿಗಳನ್ನೂ ಅರಿಯುವ ಜ್ಯೋತಿ. ನಿನ್ನನ್ನು ಅರಿಯಲು ಮತ್ತೊಂದು ಜ್ಯೋತಿ ಬೇಕಿಲ್ಲ. ನಿನ್ನಂತೆ ಎಲ್ಲರ ಆತ್ಮಗಳೂ ಪರಂಜ್ಯೋತಿಃಸ್ವರೂಪರು.

ಹೀಗೆ ಶಂಕರರು ಬೋಧಿಸಿದ ಆತ್ಮಸ್ವರೂಪ ಮಾನವರದು ಮಾತ್ರವಲ್ಲ, ಪಶುಪಕ್ಷಿ ಮೊದಲಾದ ಎಲ್ಲ ಜೀವಿಗಳ ಆತ್ಮಗಳೂ ಜ್ಯೋತಿಃಸ್ವರೂಪವೇ. ಇಂಥ ಆತ್ಮಕ್ಕೆ ರೂಪ, ಆಕಾರಗಳಿಲ್ಲದಿರುವುದರಿಂದ ಅವನ ಆತ್ಮ ಬೇರೆ ಇವನ ಆತ್ಮ ಬೇರೆ ಎನ್ನುವುದಕ್ಕೆ ಕಾರಣವೇ ಇಲ್ಲ. ಎಲ್ಲರ ಆತ್ಮವೂ ಒಂದೇ. ವಿಶ್ವಕ್ಕೆಲ್ಲ ಒಂದೇ ಬೆಳಕು. ಇಂಥ ಜ್ಞಾನಜ್ಯೋತಿಯನ್ನು ಸ್ವತಃ ಅನುಭವಿಸಿ ಲೋಕಕ್ಕೂ ಸಾರಿದವರು ಶಂಕರರು.

ಅವರು ಹರಿ, ಹರ, ಗಣೇಶ, ದೇವಿ ಮುಂತಾದ ನಾನಾ ದೇವತೆಗಳನ್ನು ಕುರಿತು ಸ್ತೋತ್ರಗಳನ್ನು ರಚಿಸಿದ್ದಾರೆ. ಆದರೆ ಅಲ್ಲಿ ಆ ಎಲ್ಲಾ ದೇವತೆಗಳ ಅಂತಃಕರಣದಲ್ಲಿರುವ ಆ ದಿವ್ಯಜ್ಯೋತಿಯೇ ಅವರ ದೃಷ್ಟಿಯಲ್ಲಿತ್ತೇ ವಿನಾ ಹೊರಗಿನ ಆಕಾರಗಳಲ್ಲ. ಮಾನವರಲ್ಲೂ ಅಷ್ಟೆ. ನಮ್ಮ ಜಾತಿ, ಧರ್ಮ, ಭಾಷೆ, ವೇಷ ಎಲ್ಲವೂ ನಾನಾ ಇರಬಹುದು. ಆದರೆ ಎಲ್ಲರಲ್ಲೂ ಇರುವ ಪರಂಜ್ಯೋತಿ ಆತ್ಮವೊಂದೆ. ಅಲ್ಲಿ ನಾನಾ ಇಲ್ಲ. ಇದೇ ದೃಷ್ಟಿಯಿಂದಲೆ ಅವರು ವಿಶ್ವವನ್ನು ನೋಡಿದರು. ನಾವೂ ಇದೇ ದೃಷ್ಟಿಯಿಂದ ನಮ್ಮ ಅಕ್ಕಪಕ್ಕದವರನ್ನು ನೋಡಿದಾಗ ಭೇದಭಾವಕ್ಕಾಗಲಿ, ಅಹಂಕಾರಗಳಿಗಾಗಲಿ ಅವಕಾಶವೇ ಇರುವುದಿಲ್ಲ. ಇಂಥ ದಿವ್ಯದೃಷ್ಟಿಯನ್ನಿತ್ತ ಶಂಕರರು ವಿಶ್ವದ ಪಾಲಿಗೆ **ದಿವ್ಯಜ್ಯೋತಿ ಶಂಕರರಾದರು.**

## ಅದ್ವೈತದರ್ಶನದ ಸಾಮಾನ್ಯ ಪರಿಚಯ

ಭಾರತೀಯ ವೇದಾಂತದ ಚರಿತ್ರೆಯಲ್ಲಿ ಶ್ರೀ ಶಂಕರಾಚಾರ್ಯರ ಸ್ಥಾನ ಉನ್ನತವಾದದ್ದು. ತಮ್ಮದೇನೂ ಸ್ವತಂತ್ರವಾದದ್ದು ಇಲ್ಲವೆಂದು ಹೇಳಿದರೂ ತತ್ತ್ವವನ್ನು ಅವರು ಪ್ರತಿಪಾದಿಸುವ ರೀತಿ ಅವರಿಗೇ ಮೀಸಲಾದದ್ದು. ಅವರ ಭಾಷಾ ಶೈಲಿಯೇ ಪ್ರಸನ್ನ ಗಂಭೀರವಾದದ್ದು. ಎಲ್ಲಿಯೂ ತಡವರಿಸದೆ ಎಲ್ಲಿಯೂ ಮುಗ್ಗರಿಸದೆ ಹರಿದು ಹೋಗುವ ಗಂಗಾಪ್ರವಾಹದಂತೆ ಮುಂದುವರಿಯುವ ವಾಕ್ಯರಚನೆಯೇ ಶಾಸ್ತ್ರಗಳಲ್ಲಿರುವ ಅವರ ಪ್ರಭುತ್ವವನ್ನು ವ್ಯಕ್ತಪಡಿಸುತ್ತದೆ. ಅದ್ವೈತ ವೇದಾಂತದ ಸಾರವನ್ನು ಅರ್ಧಶ್ಲೋಕದಲ್ಲಿ ಹೇಳಬಹುದು.

**ಬ್ರಹ್ಮಸತ್ಯಂ, ಜಗನ್ಮಿಥ್ಯಾ, ಜೀವೋಬ್ರಹ್ಮೈವ ನಾಪರಃ**

"ಪರಬ್ರಹ್ಮ ಒಂದೇ ಸತ್ಯವಾದದ್ದು. ಈ ಜಗತ್ತೆಲ್ಲವೂ ಮಿಥ್ಯೆ. ಜೀವನು ಬ್ರಹ್ಮವೇ ಆಗಿದ್ದಾನೆ. ಈತನು ಅನ್ಯನಲ್ಲ."

ತಾತ್ಪರ್ಯವೇನೆಂದರೆ - ಈ ವಿಶ್ವದಲ್ಲಿ ಒಂದೇ ಒಂದು ಮಹಾ ಚೈತನ್ಯವಿದೆ. ಅದನ್ನೇ ಪರಬ್ರಹ್ಮ, ಪರಮಾತ್ಮ - ಮುಂತಾದ ಅನೇಕ ಹೆಸರುಗಳಿಂದ ಕರೆಯುತ್ತೇವೆ. ಆತನಲ್ಲೊಂದು ಅದ್ಭುತವಾದ ಶಕ್ತಿ ಇದೆ. ಅದನ್ನು ಮಾಯೆ ಎನ್ನಬಹುದು. ಈ ಮಾಯಾ ಶಕ್ತಿಯಿಂದ ಪರಮಾತ್ಮನು ಈ ಜಗತ್ತನ್ನು ನಿರ್ಮಿಸಿದ್ದಾನೆ. ಭೂಮಿ, ಜಲ, ಅಗ್ನಿ, ವಾಯು, ಆಕಾಶ, ಗ್ರಹನಕ್ಷತ್ರಾದಿಗಳೆಲ್ಲವೂ ಈ ಮಾಯೆಯಿಂದ ನಿರ್ಮಿತವಾದವು. ಎಲ್ಲ ಪ್ರಾಣಿಗಳ ಶರೀರ, ಗಿಡ, ಮರ -

ಮೊದಲಾದವೂ ಮಾಯಾಶಕ್ತಿಯಿಂದ ಆದವು. ಇವು ಯಾವುವೂ ಶಾಶ್ವತವಾದವಲ್ಲ. ಹೇಳ ಹೆಸರಿಲ್ಲದಂತೆ ಇವೆಲ್ಲವನ್ನು ಪರಮಾತ್ಮನು ನಾಶಮಾಡಬಲ್ಲನು. ಹೀಗೆ ನಾಶವಾಗತಕ್ಕವಾದ್ದರಿಂದ ಇವೆಲ್ಲವೂ ಮಿಥ್ಯೆ - ಎಂದರೆ ಅಸತ್ಯ. ಯಾವುದು ನಾಶವಾಗುತ್ತದೆಯೋ ಅದು ಸತ್ಯವಲ್ಲ. ತಾತ್ಕಾಲಿಕವಾಗಿ ಇದು ಸತ್ಯವಾಗಿ ನಮಗೆ ತೋರುತ್ತದೆ. ಅದು ಬೇರೆ ವಿಷಯ. ಇನ್ನು ಜೀವನೆಂದರೆ ಪರಮಾತ್ಮನೆಂಬ ಚೈತನ್ಯವೇ. ಮಹಾಚೇತನದ ಒಂದು ಕಣವೆಂದು ತಿಳಿಯಬಹುದು. ಅನಾದಿಯಾದ ಅಜ್ಞಾನದಿಂದ ಜೀವನು ಶರೀರದಲ್ಲಿದ್ದು ಸುಖದುಃಖಗಳನ್ನು ಅನುಭವಿಸುತ್ತ ಬಂದಿದ್ದಾನೆ. ವಾಸ್ತವದಲ್ಲಿ ಈ ಸುಖದುಃಖಗಳು ಚೈತನ್ಯಕ್ಕಿಲ್ಲ. ಚೈತನ್ಯದಿಂದ ಶಕ್ತಿಯನ್ನು ಪಡೆದಿರುವ ಚಿತ್ತವು (ಅಂತಃಕರಣವು) ಸುಖದುಃಖಗಳನ್ನು ಅನುಭವಿಸುತ್ತದೆ. ಮನುಷ್ಯನು ಆ ಪರಮಾತ್ಮನಲ್ಲಿ ಭಕ್ತಿಶ್ರದ್ಧೆಗಳನ್ನಿಟ್ಟು ಸದಾಚಾರದಿಂದ ವರ್ತಿಸುತ್ತಿದ್ದರೆ, ಆತನ ಅನುಗ್ರಹದಿಂದ ಮೋಕ್ಷವನ್ನು ಪಡೆಯಬಹುದು. ಗುರುಸೇವೆಯಿಂದಲೂ ವೇದಾಂತ ಗ್ರಂಥಗಳನ್ನು ಅಭ್ಯಾಸ ಮಾಡುವುದರಿಂದಲೂ ಅನಾದಿಯಾದ ಅಜ್ಞಾನವು ತೊಲಗುತ್ತದೆ. ಆಗ ಪರಮಾರ್ಥವೇನೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ. ಆಗ ಮೋಕ್ಷವು ಲಭಿಸುತ್ತದೆ. ಆದ್ದರಿಂದ ಈ ದುಃಖಗಳೆಲ್ಲವನ್ನೂ ಪೂರ್ತಿಯಾಗಿ ಕಳೆದುಕೊಳ್ಳುವುದಕ್ಕಾಗಿ ಪರಮಾತ್ಮನಲ್ಲಿ ಭಕ್ತಿಯನ್ನಿಟ್ಟು ಸನ್ಮಾರ್ಗದಲ್ಲಿ ನಡೆದುಕೊಳ್ಳಬೇಕು. ಇಷ್ಟು ಈಗ ಸಾಕು.

## ಶ್ರೀಶಂಕರರ ಸೂಕ್ತಿಗಳು

ಆಚಾರ್ಯರು ರಚಿಸಿದ ಭಾಷ್ಯಾದಿಗ್ರಂಥಗಳಿಂದ ಆರಿಸಿದ ಕೆಲವು ಸೂಕ್ತಿಗಳನ್ನು ಕನ್ನಡಕ್ಕೆ ಪರಿವರ್ತಿಸಿ ಕೆಳಗೆ ಬರೆಯಲಾಗಿದೆ. ಆ ಸೂಕ್ತಿಗಳ ಆಕರವನ್ನೂ ಸೂಚಿಸಿದೆ.

೧. ಪರಮಾತ್ಮನ ಸ್ವರೂಪವೇನೆಂಬುದನ್ನು ವೇದದಿಂದಲೇ ತಿಳಿದುಕೊಳ್ಳಬೇಕು. ಅದು ಮನುಷ್ಯರ ಊಹೆಗೆ ನಿಲುಕುವುದಿಲ್ಲ.

- ಸೂತ್ರಭಾಷ್ಯ ೨-೧-೩೧

೨. ಗುರುಶಿಷ್ಯ ಸಂಪ್ರದಾಯದಿಂದ ತಿಳಿದು ಬರುವ ವೇದಾರ್ಥವು ಮಾತ್ರ ಸತ್ಯವಾದದ್ದು. ಸಕಲ ಶಾಸ್ತ್ರಗಳಲ್ಲಿ ವಿದ್ವಾಂಸನಾಗಿದ್ದರೂ

ಸಂಪ್ರದಾಯವನ್ನರಿಯದೆ ಸ್ವಬುದ್ಧಿಯಿಂದ ಅರ್ಥಹೇಳತಕ್ಕವನು ಮೂರ್ಖನೆಂದು ಭಾವಿಸಿ ಉಪೇಕ್ಷಿಸಬೇಕು.

- ಗೀತಾಭಾಷ್ಯ ೧೩-೨

೩. ಇದು ಧರ್ಮ, ಇದು ಅಧರ್ಮ - ಎಂಬುದನ್ನು ಶಾಸ್ತ್ರದಿಂದಲೇ ತಿಳಿದುಕೊಳ್ಳಬೇಕು. ಧರ್ಮಾಧರ್ಮಗಳು ಕಣ್ಣಿಗೆ ಕಾಣತಕ್ಕವಲ್ಲ. ತರ್ಕದಿಂದ ಧರ್ಮಾಧರ್ಮಗಳನ್ನು ನಿರ್ಣಯಿಸಲಾಗುವುದಿಲ್ಲ.

- ಸೂತ್ರಭಾಷ್ಯ ೩-೧-೨೫

೪. ಋಗ್ವೇದವೇ ಮೊದಲಾದ ವೇದವೆಂಬ ಶಾಸ್ತ್ರ ಸರ್ವಾರ್ಥಗಳನ್ನು ಪ್ರಕಾಶಪಡಿಸುವ ಸರ್ವಜ್ಞವೇ ಆಗಿದೆ. ಇಂತಹ ವೇದವು ಸರ್ವಜ್ಞನಾದ ಈಶ್ವರನಲ್ಲದೆ ಇನ್ನೊಬ್ಬ ಮನುಷ್ಯನಿಂದ ನಿರ್ಮಿತವಾಗುವ ಸಂಭವವೇ ಇಲ್ಲ.

- ಸೂತ್ರಭಾಷ್ಯ ೧-೧-೩

೫. ಅತ್ಯಂತ ಮೂಢರಿಗೆ ಮಾತ್ರ ವಿಷಯ ಸುಖದಲ್ಲಿ ಪ್ರೀತಿ ಇರುತ್ತದೆ, ಪಶುಗಳಿಗೆ ಇರುವಂತೆ.

- ಗೀತಾಭಾಷ್ಯ ೫-೨೨

೬. ಅಜ್ಞಾನದಿಂದ ಕುರುಡನಾದ ಜೀವನಿಗೆ ಭಗವಂತನ ಅನುಗ್ರಹದಿಂದಲೇ ಆತ್ಮಜ್ಞಾನವು ಹುಟ್ಟಿ ಮೋಕ್ಷವು ದೊರೆಯುತ್ತದೆ.

- ಸೂತ್ರ ಭಾಷ್ಯ ೨-೩-೪೧

೭. ವಿದ್ವಾಂಸರ ಸಹವಾಸದಿಂದ ಬುದ್ಧಿಶಕ್ತಿಯು ವರ್ಧಿಸುತ್ತದೆಯೆಂಬುದು ಪ್ರತ್ಯಕ್ಷ ಸಿದ್ಧವಾಗಿದೆ.

- ಬೃಹ. ಭಾಷ್ಯ ೪-೧-೧

೮. ನಿತ್ಯಕರ್ಮಾನುಷ್ಠಾನದಿಂದ ಚಿತ್ತವು ಪರಿಶುದ್ಧವಾಗುತ್ತದೆ. ಆತನು ಆತ್ಮಾಭಿಮುಖನಾಗಿದ್ದರೆ ಕ್ರಮೇಣ ಜ್ಞಾನ ನಿಷ್ಠೆ ಪ್ರಾಪ್ತವಾಗುತ್ತದೆ.

- ಗೀತಾಭಾಷ್ಯ ೧೮-೧೦

೯. ಆಯಾ ಪ್ರಾಂತಗಳಲ್ಲಿ ವಾಸಮಾಡುವ ಪ್ರಾಣಿಗಳ ದೃಷ್ಟಿಗೆ ಗೋಚರನಾಗುವುದೇ ಸೂರ್ಯನ ಉದಯ. ಹಾಗೆ ಗೋಚರವಾಗದೆ

ಹೋದಾಗ ಸೂರ್ಯಾಸ್ತಮಯ. ಸೂರ್ಯನಿಗೆ ನಿಜವಾಗಿ ಉದಯಾಸ್ತಮಯಗಳಿಲ್ಲ.

- ಛಾಂದೋಗ್ಯಭಾಷ್ಯ ೩-೧೧-೪

೧೧. ಭೂಮಿಯ ನೆರಳನ್ನು ರಾತ್ರಿಯ ಕತ್ತಲೆ ಎನ್ನುತ್ತಾರೆ.

- ಬೃಹ, ಭಾಷ್ಯ ೬-೨-೧೧

೧೧. ಉತ್ಸಾಹರಹಿತರಾಗಿ ಉದ್ಯೋಗವನ್ನು ಮಾಡದಿರುವ ಸೋಮಾರಿಗಳಿಗೆ ಭೋಗಪ್ರಾಪ್ತಿಯು ಲೋಕದಲ್ಲಿ ಕಂಡುಬಂದಿಲ್ಲ.

- ಛಾಂದೋಗ್ಯಭಾಷ್ಯ ೩-೬-೨

೧೨. ಹಿಂದೆ ಮಾಡಿದ ಧರ್ಮಾಧರ್ಮಾದಿ ಸಂಸ್ಕಾರವು ಈ ಜನ್ಮದಲ್ಲಿ ಅಭಿವ್ಯಕ್ತವಾದಾಗ ಪ್ರಕೃತಿ ಎನಿಸುತ್ತದೆ.

- ಗೀತಾಭಾಷ್ಯ ೩-೩೩

(ಸೌಜನ್ಯವು ಅವನ ಪ್ರಕೃತಿ, ಕ್ರೌರ್ಯವು ಆತನ ಪ್ರಕೃತಿ - ಈ ರೀತಿ ಹೇಳಿದಾಗ ತೋರತಕ್ಕದ್ದು ಪ್ರಕೃತಿಶಬ್ದದ ಅರ್ಥ)

೧೩. ಒಂದೇ ಆಗಿರುವ ಪರಮಾರ್ಥತತ್ತ್ವದಲ್ಲಿ ಸಂಪೂರ್ಣ ನಂಬಿಕೆಯನ್ನು ಪಡೆದವರು ಜ್ಞಾನಿಗಳು. ಸ್ತ್ರೀಯರು ಕೂಡ ಮಹಾಜ್ಞಾನಿಗಳಾಗಬಹುದು.

- ಮಾಂಡೂಕ್ಯಕಾರಿಕಾಭಾಷ್ಯ ೪-೯೫

೧೪. ಬ್ರಹ್ಮಸ್ವರೂಪವಾಗಿ ಉಳಿಯುವುದೇ ಮೋಕ್ಷ.

- ಸೂತ್ರಭಾಷ್ಯ ೧-೧-೪

೧೫. ಕೇವಲ ಜ್ಞಾನದಿಂದಲೇ ಮೋಕ್ಷವಾಗುತ್ತದೆಯೆಂದು ಗೀತೆಯಲ್ಲಿಯೂ ಸಕಲ ಉಪನಿಷತ್ತುಗಳಲ್ಲಿಯೂ ನಿಶ್ಚಿತವಾದ ಸಿದ್ಧಾಂತವಾಗಿದೆ.

- ಗೀತಾ ೩ನೆಯ ಅಧ್ಯಾಯದ ಪೀಠಿಕೆ.

## ಉಪಸಂಹಾರ

ಶ್ರೀಶಂಕರಭಗವತ್ಪಾದಾಚಾರ್ಯರು ಪ್ರತಿಪಾದಿಸಿದ ವೇದಾಂತಸಿದ್ಧಾಂತವು ಸಕಲವೇದೋಪನಿಷತ್ತುಗಳಿಗೂ ಮನುಸ್ಮೃತಿ - ಮೊದಲಾದ ಸ್ಮೃತಿ ಗ್ರಂಥಗಳಿಗೂ,

ವಿಷ್ಣು ಪುರಾಣ ಭಾಗವತ - ಮೊದಲಾದ ಪುರಾಣಗಳಿಗೂ ಸಂಮತವಾದದ್ದು. ಇಂತಹ ಶ್ರೇಷ್ಠವಾದ ದರ್ಶನವು ನಾನಾಮತಗಳ ಪ್ರಾಬಲ್ಯದಿಂದ ನಷ್ಟವಾಗಿ ಹೋಗುತ್ತಿದ್ದ ಸಮಯದಲ್ಲಿ ಅದನ್ನು ಮೇಲೆತ್ತಿ ಜಗತ್‌ಪ್ರಸಿದ್ಧವಾಗಿ ಮಾಡಿದವರು ಶ್ರೀಶಂಕರರು. ಪಾಶ್ಚಾತ್ತ್ಯದಾರ್ಶನಿಕರಾದ ಶೋಫನ್‌ಹೇರ್ ಮೊದಲಾದವರು ಶ್ರೀಶಂಕರರ ಸ್ತುತ್ಯವಾದ ಕಾರ್ಯವನ್ನು ಮೆಚ್ಚಿ ಆಚಾರ್ಯರ ಮೇಧಾಶಕ್ತಿಯನ್ನು ಕೊಂಡಾಡಿದ್ದಾರೆ. ಈ ದರ್ಶನದ ಸಾರವನ್ನು ಕಲಿತ ವಿಖ್ಯಾತ ವಿಜ್ಞಾನಿಗಳೂ ಸಹ, ಈ ಸಿದ್ಧಾಂತವು ವಿಜ್ಞಾನಕ್ಕೆ ವಿರುದ್ಧವಲ್ಲವೆಂದೂ ವಿಜ್ಞಾನಸಂಮತವೆಂದೂ ಒಪ್ಪಿಕೊಂಡಿದ್ದಾರೆ.

ಮೋಕ್ಷ ಪ್ರಾಪ್ತಿಯೇ ವೇದಾಂತಾಧ್ಯಯನದ ಫಲ. ತನ್ನ ಆತ್ಮಸ್ವರೂಪವನ್ನು ತಾನು ಅರಿತುಕೊಳ್ಳುವುದೇ ಮೋಕ್ಷಕ್ಕೆ ಸಾಧನ. ಸರ್ವಮಾನವರಿಗೂ ತನ್ನನ್ನೇ ತಾನು ಅರಿತುಕೊಳ್ಳುವುದಕ್ಕೆ ಅಧಿಕಾರ ಉಂಟು. ಇದನ್ನೇ ಶ್ರೀಶಂಕರರು ಅಲ್ಲಲ್ಲಿ ಸ್ಪಷ್ಟವಾಗಿ ತಿಳಿಸಿದ್ದಾರೆ. ವೈದಿಕ ಸಂಸ್ಕೃತಿಯ ಉಳಿವಿಗಾಗಿ ಹಿಂದೆ ಯಾರೂ ಮಾಡದ ಅದ್ಭುತ ಕಾರ್ಯಗಳನ್ನೆಸಗಿ ತಮ್ಮ ಕರ್ತೃತ್ವಶಕ್ತಿಯನ್ನೂ ಅಸಾಧಾರಣವಾದ ಬುದ್ಧಿಶಕ್ತಿಯನ್ನೂ ಕಂಡು, ಶ್ರೀಶಂಕರರು ಸಾಕ್ಷಾತ್ ಶಂಕರನ ಅವತಾರವೆಂದೇ ಜನರು ನಂಬಿರುವುದು ಅಚ್ಚರಿಯೇನಲ್ಲ. ಈ ಮಹಾಪುರುಷರನ್ನು ಭಾರತೀಯರು ಸದಾ ಸ್ಮರಿಸುತ್ತಿರಬೇಕು.

**ಶಂಕರಂ ಶಂಕರಾಚಾರ್ಯಂ ಕೇಶವಂ ಬಾದರಾಯಣಂ ।**
**ಸೂತ್ರಭಾಷ್ಯಕೃತೌ ವಂದೇ ಭಗವಂತೌ ಪುನಃಪುನಃ ॥**
**ಶ್ರುತಿಸ್ಮೃತಿ ಪುರಾಣಾನಾಮಾಲಯಂ ಕರುಣಾಲಯಂ ।**
**ನಮಾಮಿ ಭಗವತ್ಪಾದಂ ಶಂಕರಂ ಲೋಕಶಂಕರಮ್ ॥**

## ಶ್ರೀ ಶಂಕರಾಚಾರ್ಯರು ರಚಿಸಿದ ಗ್ರಂಥಗಳು

ಶ್ರೀ ಶಂಕರಾಚಾರ್ಯರು ರಚಿಸಿರುವ ಗ್ರಂಥಗಳು ಯಾವುವು ? ಎಷ್ಟು ? ಎಂದು ನಿರ್ಣಯ ಮಾಡುವುದು ಕಠಿಣ. ಸುಮಾರು ೨೦೦ ಗ್ರಂಥಗಳು ಶಂಕರಾಚಾರ್ಯರಚಿತಗಳೆಂದು ದೊರೆಯುತ್ತವೆ. ಶ್ರೀಶಂಕರರು ಸ್ಥಾಪಿಸಿದ ಮಠಗಳ ಅಧಿಪತಿಗಳೂ ಶಂಕರಾಚಾರ್ಯರೆಂದೇ ಪ್ರಸಿದ್ಧರಾಗಿರುವುದರಿಂದ, ಅವರಲ್ಲಿ ಕೆಲವರು ರಚಿಸಿದ ಕೃತಿಗಳೂ ಶಂಕರಾಚಾರ್ಯ- ರಚಿತಗಳೆಂದು ಖ್ಯಾತಿಯನ್ನು

ಗಳಿಸಿವೆ. ಶ್ರೀ ಗೋವಿಂದಭಗವತ್ಪಾದರ ಶಿಷ್ಯರಾದ ಶ್ರೀಶಂಕರರನ್ನು ಈ ಕಾರಣಗಳಿಂದ ಆದಿಶಂಕರಾಚಾರ್ಯರೆಂದು ಕರೆಯುವ ಸಂಪ್ರದಾಯ ಬಂದಿದೆ. ಈ ಆದಿಶಂಕರರಿಂದ ರಚಿತವಾದ ಕೃತಿಗಳನ್ನೀಗ ಗೊತ್ತು ಮಾಡಬೇಕಾಗಿದೆ. ಪ್ರಸಿದ್ಧವಾದ ಕೆಲವು ಭಾಷ್ಯಗಳೂ ಪ್ರಕರಣ ಗ್ರಂಥಗಳೂ ಸ್ತೋತ್ರಗಳೂ ಆದಿಶಂಕರಾಚಾರ್ಯ ವಿರಚಿತಗಳೆಂದು ವಿದ್ವಾಂಸರು ನಿರ್ಣಯಿಸಿದ್ದಾರೆ. ಅವುಗಳ ಪಟ್ಟಿಯನ್ನು ಕೆಳಗೆ ಬರೆದಿದೆ.

## ೧. ಭಾಷ್ಯಗಳು

1. ಭಗವದ್ಗೀತಾ ಭಾಷ್ಯ
2. ಬಾದರಾಯಣಾಚಾರ್ಯರ ಬ್ರಹ್ಮಸೂತ್ರಗಳ ಭಾಷ್ಯ
3. ದಶೋಪನಿಷತ್ತುಗಳ ಭಾಷ್ಯಗಳು. ಆ ಉಪನಿಷತ್ತುಗಳು ಯಾವುವೆಂದರೆ - ಈಶ, ಕೇನ, ಕಠ, ಪ್ರಶ್ನ, ಮುಂಡಕ, ಮಾಂಡೂಕ್ಯ, ತೈತ್ತಿರೀಯ, ಐತರೇಯ, ಛಾಂದೋಗ್ಯ ಮತ್ತು ಬೃಹದಾರಣ್ಯಕ. ಇವುಗಳಿಗಲ್ಲದೆ ಶ್ವೇತಾಶ್ವತರ ಮತ್ತು ನೃಸಿಂಹತಾಪನೀಯ - ಎಂಬ ಎರಡು ಉಪನಿಷತ್ತುಗಳ ಭಾಷ್ಯಗಳೂ ಆದಿಶಂಕರಾಚಾರ್ಯವಿರಚಿತಗಳೆಂದು ಹೇಳುತ್ತಾರೆ - ಇವಿಷ್ಟು ಪ್ರಸ್ಥಾನತ್ರಯ ಭಾಷ್ಯಗಳು.
4. ಗೌಡಪಾದರು ಮಾಂಡೂಕ್ಯೋಪನಿಷತ್ತಿಗೆ ಬರೆದ ಕಾರಿಕೆಗಳಿಗೂ ಆಚಾರ್ಯರು ಭಾಷ್ಯವನ್ನು ಬರೆದಿದ್ದಾರೆ.

ಇವಲ್ಲದೆ ವಿಷ್ಣು ಸಹಸ್ರನಾಮ, ಸನತ್ಸುಜಾತೀಯ, ಲಲಿತಾತ್ರಿಶತೀಗಳ ಭಾಷ್ಯಗಳೂ ಆದಿಶಂಕರರ ಕೃತಿಗಳೆಂದು ಕೆಲವರ ಅಭಿಪ್ರಾಯವಿದೆ.

## ೨. ಪ್ರಕರಣಗ್ರಂಥಗಳು

1. ಉಪದೇಶ ಸಾಹಸ್ರೀ (ಇದರಲ್ಲಿ ಗದ್ಯ, ಪದ್ಯ ಎಂಬ ಎರಡು ವಿಭಾಗಗಳಿವೆ)
2. ವಿವೇಕ ಚೂಡಾಮಣಿ
3. ಅಪರೋಕ್ಷಾನುಭೂತಿ
4. ದೃಗ್‌ದೃಶ್ಯವಿವೇಕ

5. ವಾಕ್ಯವೃತ್ತಿ

6. ಸವಾರ್ತಿಕಪಂಚೀಕರಣ

7. ಶತಶ್ಲೋಕೀ

8. ಪ್ರಬೋಧಸುಧಾಕರ

9. ಪ್ರಶ್ನೋತ್ತರ ರತ್ನಮಾಲಿಕಾ

10. ಪ್ರಪಂಚಸಾರ (ತಂತ್ರಗ್ರಂಥ)

### ೩. ಸ್ತೋತ್ರಗಳು

ಸ್ತೋತ್ರ ಗ್ರಂಥಗಳಲ್ಲಿ ಕೆಲವು ಭಕ್ತಿ ಪ್ರಧಾನವಾದವು. ಕೆಲವು ತತ್ತ್ವ ಪ್ರಧಾನವಾದವು. ಭಕ್ತಿ ಪ್ರಧಾನ ಸ್ತೋತ್ರಗಳನ್ನು ಉತ್ತಮ ಕಾವ್ಯಗಳ ವರ್ಗಕ್ಕೆ ಸೇರಿಸಬಹುದು. ಆಚಾರ್ಯರ ಕವಿತಾಶಕ್ತಿ ಅವರನ್ನು ಮಹಾಕವಿಗಳ ಪಂಕ್ತಿಯಲ್ಲಿ ಸೇರಿಸುತ್ತದೆ. ವಾದವಿವಾದಗಳ ಕರ್ಕಶತರ್ಕದಲ್ಲಿ ಪಳಗಿದ ಶಾಸ್ತ್ರಜ್ಞರಾದ ಆಚಾರ್ಯರು ಅತ್ಯುತ್ತಮವಾದ ಸ್ತೋತ್ರಕಾವ್ಯಗಳನ್ನು ರಚಿಸಬಲ್ಲ ಪ್ರತಿಭಾಶಾಲಿಗಳಾಗಿದ್ದರು.

1. ಆನಂದಲಹರೀ

2. ದಕ್ಷಿಣಾಮೂರ್ತಿ ಸ್ತೋತ್ರ

3. ದಶಶ್ಲೋಕೀ

4. ಚರ್ಪಟ ಮಂಜರಿಕಾ (ಭಜಗೋವಿಂದ ಸ್ತೋತ್ರ)

5. ಷಟ್ಪದೀ ಸ್ತೋತ್ರ

6. ಆತ್ಮಬೋಧ

7. ಕೌಪೀನ ಪಂಚಕ

8. ಶಿವಾಪರಾಧಕ್ಷಮಾಪಣ ಸ್ತೋತ್ರ

9. ನಿರ್ಗುಣ ಮಾನಸ ಪೂಜಾ

10. ವೈರಾಗ್ಯ ಪಂಚಕ

11. ಶಿವಕೇಶಾದಿ ಪಾದಾಂತ ವರ್ಣನಸ್ತೋತ್ರ

12. ವಿಷ್ಣು ಪಾದಾದಿ ಕೇಶಾಂತ ವರ್ಣನ ಸ್ತೋತ್ರ

13. ಗಣೇಶ ಪಂಚರತ್ನ

14. ಗಂಗಾಷ್ಟಕ

15. ಮನೀಷಾ ಪಂಚಕ

16. ಲಕ್ಷ್ಮೀ ನೃಸಿಂಹ ಸ್ತೋತ್ರ

17. ದೇವ್ಯಪರಾಧಕ್ಷಮಾಪಣ ಸ್ತೋತ್ರ

18. ಸೌಂದರ್ಯಲಹರೀ

19. ಪರಾ ಪೂಜಾ

20. ಪರಬ್ರಹ್ಮಪ್ರಾತಃಸ್ಮರಣ

21. ಕನಕಧಾರಾ ಸ್ತೋತ್ರ - ಇತ್ಯಾದಿ

**ಆಚಾರ್ಯರ ಗುರುಪರಂಪರೆ**

**ನಾರಾಯಣಂ ಪದ್ಮಭುವಂ ವಸಿಷ್ಠಂ**
**ಶಕ್ತಿಂ ಚ ತತ್ಪುತ್ರಪರಾಶರಂ ಚ ।**
**ವ್ಯಾಸಂ ಶುಕಂ ಗೌಡಪದಂ ಮಹಾಂತಂ**
**ಗೋವಿಂದಯೋಗೀಂದ್ರಮಥಾಸ್ಯ ಶಿಷ್ಯಮ್ ॥**

**ಶ್ರೀಶಂಕರಾಚಾರ್ಯಮಥಾಸ್ಯ ಪದ್ಮಪಾದಂ ಚ ಹಸ್ತಾಮಲಕಂ ಚ ಶಿಷ್ಯಂ ।**
**ತಂ ತೋಟಕಂ ವಾರ್ತಿಕಕಾರಮನ್ಯಾನಸ್ಮದ್ಗುರೂನ್ ಸಂತತಮಾನತೋಽಸ್ಮಿ ॥**

ಈ ಶ್ಲೋಕಗಳ ಪ್ರಕಾರ ಗುರುಪರಂಪರೆ ಹೀಗೆ - ಶ್ರೀಮನ್ನಾರಾಯಣ, ಬ್ರಹ್ಮ, ವಸಿಷ್ಠ, ಶಕ್ತಿ, ಪರಾಶರ, ವ್ಯಾಸ, ಶುಕ, ಗೌಡಪಾದರು, ಗೋವಿಂದ ಭಗವತ್ಪಾದರು, ಶ್ರೀಶಂಕರಾಚಾರ್ಯರು - ಇವರಿಗೆ ನಾಲ್ವರು ಶಿಷ್ಯರು ಪದ್ಮಪಾದ, ಹಸ್ತಾಮಲಕ, ತೋಟಕ, ವಾರ್ತಿಕಕಾರ ಸುರೇಶ್ವರಾಚಾರ್ಯ - ಅಲ್ಲಿಂದ ಮುಂದೆ ಪ್ರಕೃತದ ಮಠಾಧಿಪತಿಗಳವರೆಗೆ ಇದ್ದ ಅನೇಕ ಗುರುಗಳು.

## ಶ್ರೀ ಶಂಕರಾಚಾರ್ಯರ ಮಹಿಮೆಯನ್ನು ಕೀರ್ತಿಸಿದ ವಿದ್ವಾಂಸರ ನುಡಿಗಳು.

### 1. Dr. S. Radhakrishnan

(Former President of India and internationally renowned scholar and Philosopher)

"He (Shankara) is a philosopher and a poet, a savant and a saint, a mystic and a religious reformer... There have been few minds more universal than his."

### 2. Dr. Rajendra Prasad

(Former President of India, a Scholar)

"Swami Shankaracharya was that great religious teacher and reformer who took the world by storm with his dynamic personality subduing all oppositions and difficulties. He covered the entire country from south to north .... and gave the ancient religion of the land founded by the Rishis, a new lease of life undertaking his self-imposed mission of resuscitating the Vedic Dharma..."

### 3. Jawaharlal Nehru

(Discovery of India, P. 190)

"Born in Malabar in the far south of India, he travelled incessantly all over India, meeting innumerable people arguing, debating, convincing and filling them with a part of his own passion and tremendous vitality.... in a brief life of thirty two years, he did the work of many long lives and left such an impress of his powerful mind and rich personality on India that it is very evident today ..."

4. **Margaret Noble**

(Sister Nivedita)

".... Western people can hardly imagine a personality like that of Shankaracharya. We contemplate with wonder and delight the devotion of francis of Assisi, the intellect of Abelard, the virile force and freedom of Martin luther and the political efficiency of Ignatius Loyala, but who could immagine all those united in one person ?"

5. **Arthur Eisenberg**

"Adwaita Vedanta of Sankara provides a complete phylosophical and conceptual frame of work within which the findings of advanced modern Physical science can be placed without stress or tear... Sankar's philosophy is assuredly worth studying; the appeal of which became far greater with Einstein's discovery that matter and energy are interchangable..... we must realise that Sankara must forever be numbered among the wisest sons not of mother India alone but of all mankind"

(From the book Acharya Sri Sankar's Advent

edited by **Sri V. Raj Gopala Sharma**)

# ವಿಷ್ಣು ಷಟ್ಪದೀ ಸ್ತೋತ್ರಮ್

**ಅವಿನಯಮಪನಯ ವಿಷ್ಣೋ !**
**ದಮಯ ಮನಃಶಮಯ ವಿಷಯಮೃಗತೃಷ್ಣಾಮ್ ।**
**ಭೂತದಯಾಂ ವಿಸ್ತಾರಯ**
**ತಾರಯ ಸಂಸಾರಸಾಗರತಃ ॥ 1 ॥**

ಹೇಭಗವಂತ! ನನ್ನಲ್ಲಿರುವ ಅವಿನಯವನ್ನು ನಿವಾರಿಸು. ನನ್ನ ಮನಸ್ಸನ್ನು ಸಂಯಮಗೊಳಿಸು. ಮರೀಚಿಕೆಯಂತಿರುವ ವಿಷಯಾಸಕ್ತಿಯ ನೀರಡಿಕೆಯನ್ನು ಶಾಂತಗೊಳಿಸು, ಸಕಲಜೀವಿಗಳ ಬಗ್ಗೂ ನನ್ನಲ್ಲಿ ದಯೆಯನ್ನು ಮೂಡಿಸು. ಈ ಸಂಸಾರಸಾಗರದಿಂದ ನನ್ನನ್ನು ದಾಟಿಸು.

**ದಿವ್ಯಧುನೀಮಕರಂದೇ**
**ಪರಿಮಲ ಪರಿಭೋಗಸಚ್ಚಿದಾನಂದೇ ।**
**ಶ್ರೀಪತಿ ಪದಾರವಿಂದೇ**
**ಭವಭಯಖೇದಚ್ಛಿದೇ ವಂದೇ ॥ 2 ॥**

ಲಕ್ಷ್ಮೀರಮಣನಾದ ವಿಷ್ಣುವಿನ ಪಾದಗಳೇ ಅರಳಿದ ಎರಡು ಕಮಲಗಳು. ದೇವಗಂಗೆಯೇ ಆ ಕಮಲಗಳಲ್ಲಿರುವ ಮಕರಂದವು, ಸಚ್ಚಿದಾನಂದಸುಖವೇ ಆ ಕಮಲಗಳು ಬೀರುತ್ತಿರುವ ಸುವಾಸನೆಯು. ಇಂತಹ, ವಿಷ್ಣುವಿನ ಪಾದಕಮಲಗಳನ್ನು ಜನನ ಮರಣಗಳೆಂಬ ಭಯವನ್ನು ನೀಗಿಸಿಕೊಳ್ಳುವುದಕ್ಕಾಗಿ ನಾನು ವಂದಿಸುತ್ತೇನೆ.

ಹೇ ಪರಮೇಶ್ವರ! ನೀನು ಮತ್ಸ್ಯಕೂರ್ಮಾದಿ ಅವತಾರಗಳನ್ನೆತ್ತಿ ಈ ಭೂಮಿಯನ್ನು ವಿಪತ್ತಿನಿಂದ ನಿರಂತರ ರಕ್ಷಿಸಿದ್ದೀಯೆ. ಹೀಗಿರುವಾಗ, ಹುಟ್ಟು ಸಾವುಗಳ ಬೇಗೆಯಿಂದ ಬೇಸತ್ತ ನನ್ನನ್ನೂ ನೀನು ರಕ್ಷಿಸಬೇಕಲ್ಲವೆ?

**ದಾಮೋದರ ! ಗುಣಮಂದಿರ !**
**ಸುಂದರವದನಾರವಿಂದ ! ಗೋವಿಂದ !**
**ಭವಜಲಧಿಮಥನಮಂದರ !**
**ಪರಮಂ ದರಮಪನಯ ತ್ವಂ ಮೇ ॥ 6 ॥**

ಹೇ ದಾಮೋದರ! ಹೇ ಗುಣನಿಧಿ! ಹೇ ಕಮಲವದನ! ಹೇ ಗೋವಿಂದ! ನೀನು ಸಂಸಾರ ಸಮುದ್ರವನ್ನು ಕಡೆಯಲು ಮಂದರಗಿರಿಯಂತೆ ಇರುವೆ. ಇಂತಹ ನೀನು ನನ್ನ ಅತಿಭೀತಿಯನ್ನು ಹೊಡೆದೋಡಿಸು.

**ನಾರಾಯಣ ! ಕರುಣಾಮಯ !**
**ಶರಣಂ ಕರವಾಣಿ ತಾವಕೌ ಚರಣೌ ।**
**ಇತಿ ಷಟ್ಪದೀ ಮದೀಯೇ**
**ವದನಸರೋಜೇ ಸದಾ ವಸತು ॥ 7 ॥**

ಕರುಣಾಮಯನಾದ ನಾರಾಯಣ! ನಿನ್ನಡಿಗಳಲ್ಲಿ ನಾನು ಶರಣಾಗತನು ಆಗಿದ್ದೇನೆ. ಈ ರೀತಿಯಲ್ಲಿ ನಿನ್ನ ಸ್ತುತಿರೂಪದ ಝೇಂಕಾರವನ್ನು ಮಾಡುತ್ತಿರುವ ಈ ಆರು ಪದಗಳ ದುಂಬಿಯು (ಆರು ಪದ್ಯಗಳ ಸ್ತೋತ್ರವು) ನನ್ನ ಮುಖಕಮಲದಲ್ಲಿ ನಿರಂತರ ವಾಸಮಾಡಲಿ.

# ಮೋಹಮುದ್ಗರಃ

**ಭಜ ಗೋವಿಂದಂ ಭಜ ಗೋವಿಂದಂ**
**ಭಜ ಗೋವಿಂದಂ ಮೂಢಮತೇ ॥**

ಎಲೈ ಅಜ್ಞಾನಿ ಮಾನವನೆ! ಪರಮಾತ್ಮನನ್ನು ಧ್ಯಾನಿಸು. ಆತನೆ ನಮ್ಮನ್ನು ಕಾಪಾಡುವವನು.

**ಯಾವದ್ವಿತ್ತೋಪಾರ್ಜನಸಕ್ತಃ**
**ತಾವನ್ನಿಜಪರಿವಾರೋ ರಕ್ತಃ ।**
**ಪಶ್ಚಾಜ್ಜೀವತಿ ಜರ್ಜರದೇಹೇ**
**ವಾರ್ತಾಂ ಕೋऽಪಿ ನ ಪೃಚ್ಛತಿ ಗೇಹೇ ॥ ಭಜಗೋವಿಂದಂ.... 1**

ನೀನು ಹಣವನ್ನು ಗಳಿಸುತ್ತಿರುವವರೆಗೂ ನಿನ್ನ ಪರಿವಾರದವರು ನಿನ್ನನ್ನು ಪ್ರೀತಿಸುತ್ತಿರುತ್ತಾರೆ. ನಿನ್ನ ಗಳಿಕೆ ನಿಂತ ಮೇಲೆ, ನಿನ್ನ ದೇಹ ಜೀರ್ಣವಾದ ಮೇಲೆ ನೀನು ಬದುಕಿದ್ದರೂ ನಿನ್ನ ಮನೆಯಲ್ಲಿ ಯಾರೂ ನಿನ್ನನ್ನು ಕೇಳುವವರಿರುವುದಿಲ್ಲ.

**ಅಂಗಂ ಗಲಿತಂ ಪಲಿತಂ ಮುಂಡಂ**
**ದಶನವಿಹೀನಂ ಜಾತಂ ತುಂಡಮ್ ।**
**ವೃದ್ಧೋ ಯಾತಿ ಗೃಹೀತ್ವಾ ದಂಡಂ**
**ತದಪಿ ನ ಮುಂಚತ್ಯಾಶಾ ಪಿಂಡಮ್ ॥ ಭಜಗೋವಿಂದಂ .... 2**

ಅವಯವಗಳು ಸಡಿಲವಾಗಿವೆ. ತಲೆ ಹಣ್ಣಾಗಿದೆ. ಹಲ್ಲುಗಳೆಲ್ಲ ಉದುರಿ ಬೊಚ್ಚುಬಾಯಿಯಾಗಿದೆ. ಮುದುಕನು ಕೋಲನ್ನು ಹಿಡಿದುಕೊಂಡು ನಡೆಯುತ್ತಿದ್ದಾನೆ. ಹಾಗಿದ್ದರೂ ಆಸೆಯು ಆತನ ಶರೀರವನ್ನು ಬಿಡುತ್ತಿಲ್ಲ.

**ಅರ್ಥಮನರ್ಥಂ ಭಾವಯ ನಿತ್ಯಂ**
**ನಾಸ್ತಿ ತತಃ ಸುಖಲೇಶಃ ಸತ್ಯಮ್ ।**
**ಪುತ್ರಾದಪಿ ಧನಭಾಜಾಂ ಭೀತಿಃ**
**ಸರ್ವತ್ರೈಷಾ ವಿಹಿತಾ ರೀತಿಃ ॥ ಭಜಗೋವಿಂದಂ ..... 3**

# ವೇದಾಂತಭಾರತೀ ಗ್ರಂಥಮಾಲೆಯ
## ಪ್ರಕಟಣೆಗಳು

* ಶ್ರೀ ಶಂಕರಭಗವತ್ಪಾದ ವಿರಚಿತ ಶಿವಸ್ತೋತ್ರಾಣಿ *
(ಮೂಲ, ಪ್ರತಿಪದಾರ್ಥ, ತಾತ್ಪರ್ಯ, ಟಿಪ್ಪಣಿಗಳೊಂದಿಗೆ)

* ಆಶೀರ್ವಚನಮ್ *

(ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠದ ಶ್ರೀಮಜ್ಜಗದ್ಗುರುಗಳ ಆಶೀರ್ವಚನದ ಆಂಗ್ಲಾನುವಾದ)

* ವಿವೇಕ ಚೂಡಾಮಣಿ *

(ಶೃಂಗೇರಿ ಜಗದ್ಗುರು ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳಿಂದ ಅನುಗ್ರಹೀತವಾದ ಸಂಸ್ಕೃತ ವ್ಯಾಖ್ಯಾನ ಹಾಗೂ ಕನ್ನಡ ಅನುವಾದ ಸಹಿತ)

* ಶಿವಾನಂದಲಹರೀ ಮತ್ತು ದಕ್ಷಿಣಾಮೂರ್ತಿಸ್ತೋತ್ರ *
(ಮೂಲ, ಪ್ರತಿಪದಾರ್ಥ, ತಾತ್ಪರ್ಯ, ಟಿಪ್ಪಣಿಗಳೊಂದಿಗೆ)

* ಯುಗಪುರುಷ ಶಂಕರ *
(ಕನ್ನಡಾವೃತ್ತಿ)

* ಯುಗಪುರುಷ ಶಂಕರ *
(ಆಂಗ್ಲಾನುವೃತ್ತಿ)

* ಶಾಂಕರ ಸಂದೇಶ.*
(ವಿವಿಧ ಲೇಖನಗಳು)

* ಸಿದ್ಧಾಂತಲೇಶ ಸಂಗ್ರಹಃ *
(ಮೂಲ, ಅನುವಾದ ಮತ್ತು ಟಿಪ್ಪಣಿಗಳೊಂದಿಗೆ)

* ಶ್ರೀ ಶಂಕರಭಗವತ್ಪಾದ ವಿರಚಿತ ದೇವೀಸ್ತೋತ್ರಾಣಿ *
ಭಾಗ - ೧

(ಮೂಲ, ಪ್ರತಿಪದಾರ್ಥ, ತಾತ್ಪರ್ಯ, ಟಿಪ್ಪಣಿಗಳೊಂದಿಗೆ)

* ಶ್ರೀ ಶಂಕರಭಗವತ್ಪಾದ ವಿರಚಿತ ದೇವೀ ಸ್ತೋತ್ರಾಣಿ *
ಭಾಗ - ೨

(ಮೂಲ, ಪ್ರತಿಪದಾರ್ಥ, ತಾತ್ಪರ್ಯ, ಟಿಪ್ಪಣಿಗಳೊಂದಿಗೆ)

# ವೇದಾಂತಭಾರತೀ

## (ಕಿರುಪರಿಚಯ)

ಪುಣ್ಯಭೂಮಿಯಾದ ಈ ಭರತಖಂಡದಲ್ಲಿ ಆತ್ಮತತ್ತ್ವಾನ್ವೇಷಣೆಗಾಗಿ ನಡೆದಷ್ಟು ಪ್ರಯತ್ನಗಳು ಜಗತ್ತಿನ ಇನ್ನಾವ ರಾಷ್ಟ್ರದಲ್ಲಿಯೂ ನಡೆಯಲಿಲ್ಲ ! ಆತ್ಮಾನ್ವೇಷಣೆಯಲ್ಲಿ ಸದಾನಿರತರಾದ ಭಾರತೀಯಮಹರ್ಷಿಗಳಿಗೆ ಮೊದಲು ಪ್ರತಿಭಾತವಾದದ್ದು ವೇದರಾಶಿ. ಉಪನಿಷತ್‌ಸಹಿತವಾದ ಈ ವೇದರಾಶಿಯು ಸಮುದ್ರದಂತೆ ವಿಶಾಲವೂ, ಅತಿಗಂಭೀರವೂ ಆದದ್ದು. ಈ ಉಪನಿಷತ್ ಸಿದ್ಧಾಂತವನ್ನು ಏಕಾತ್ಮವಾದವೆಂಬ ಸೂತ್ರದ ಅಡಿಯಲ್ಲಿ (ವಿಶ್ವಮಾನವರೆಲ್ಲರೂ ಪರಮಾತ್ಮನ ಸ್ವರೂಪರೇ ! ನಾನಾರೂಪವಾಗಿ ತೋರುವ ಈ ಪ್ರಪಂಚದ ಮೂಲವೊಂದೆ) ವಿಶ್ವದರ್ಶನಕ್ಕೆ ಒಂದು ಮಹತ್ತರವಾದ ಕೊಡುಗೆಯನ್ನಿತ್ತ **ಶಾಂಕರ ದರ್ಶನವನ್ನು** ಜನಮನಕ್ಕೆ ಪರಿಚಯಮಾಡಿಕೊಡುವ ಉದ್ದೇಶದಿಂದ **ವೇದಾಂತಭಾರತೀ** ಸ್ಥಾಪಿಸಲ್ಪಟ್ಟಿದೆ. ಶ್ರೀಮತ್ಪರಮಹಂಸೇತ್ಯಾದಿ ಬಿರುದಾಂಕಿತರೂ ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠಾಧೀಶ್ವರರೂ ಆದ **ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರು** ಈ ಸಂಸ್ಥೆಯ ಮಹಾಸಂರಕ್ಷಕರಾಗಿದ್ದು ಮಾರ್ಗದರ್ಶನವನ್ನು ನೀಡುತ್ತಿದ್ದಾರೆ. ಯಡತೊರೆ ಶ್ರೀ ಯೋಗಾನಂದೇಶ್ವರ ಸರಸ್ವತೀ ಮಠದ ಪೀಠಾಧಿಪತಿಗಳಾದ **ಪರಮ ಪೂಜ್ಯ ಶ್ರೀ ಶ್ರೀ ಶಂಕರಭಾರತೀ ಸ್ವಾಮಿಗಳವರು** ಈ ಸಂಸ್ಥೆಯ ಸಂರಕ್ಷಕರಾಗಿದ್ದಾರೆ. **ವೇದಾಂತಭಾರತಿ**ಯು ಅದ್ವೈತಕೋಶದ ರಚನೆ, ಶಾಂಕರವೇದಾಂತಕ್ಕೆ ಸಂಬಂಧಪಟ್ಟ ಗ್ರಂಥಗಳ ಪ್ರಕಾಶನ, ಅನುವಾದ, ಜನಸಾಮಾನ್ಯರಿಗೆ ಶಾಂಕರದರ್ಶನದ ಪರಿಚಯವನ್ನು ಮಾಡಲು **ಶಾಂಕರಸಂದೇಶಸಪ್ತಾಹ**ವೇ ಮೊದಲಾದ ರಾಷ್ಟ್ರೀಯಭಾವೈಕ್ಯ ಶಿಬಿರಗಳನ್ನು ಹಮ್ಮಿಕೊಳ್ಳುತ್ತಲಿದೆ. ವೇದಗಳ ರಕ್ಷಣೆ ಹಾಗೂ ಪೋಷಣೆಗಾಗಿ **ವೇದನಮನ** ಎಂಬ ಕಾರ್ಯಕ್ರಮವನ್ನು ಹಾಗೂ ಪ್ರೌಢಶಾಲಾ ಸ್ತರದ ಮಕ್ಕಳಿಗಾಗಿ ರಾಜ್ಯಮಟ್ಟದ **ವಿವೇಕೋತ್ಕರ್ಷಿಣಿ** ಸ್ಪರ್ಧೆಯನ್ನು ಸಹ ಆಯೋಜಿಸುತ್ತಲಿದೆ. ಅದ್ವೈತದಲ್ಲಿ ಅಭಿರುಚಿಯನ್ನುಂಟುಮಾಡಲು ಸರಳ, ಸುಬೋಧ ಗ್ರಂಥಗಳ ಪ್ರಕಾಶನವನ್ನು ಮಾಡುತ್ತಿದೆ. ಹಲವು **ವಿದ್ವದ್ಗೋಷ್ಠಿಗಳನ್ನೂ** ನಡೆಸಿದೆ. ಭವಿಷ್ಯದಲ್ಲಿ ಇನ್ನೂ ಅನೇಕ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಿದೆ.

❋ ❋ ❋ ❋ ❋